ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 28

ಡಿಸೆಂಬರ್ 09, 2007

ರೂ. 5/-



ಪೇಜ್ 5

ಬಿಜೆಪಿಗೆ ಬಾಗಿಲು ಮುಚ್ಚಲು ಜೆಡಿ(ಎಸ್) ತಯಾರಿದೆಯೇ ?

ಪೇಜ್ 9

ಹಾಸನ




'ಅಭಿವೃದ್ಧಿ' ಮರೆಮಾಚಿದ ಮುಖ






ಉಡುಪಿ : 'ಸಮುದ್ರ ಲಂಘನ'ದ ರಾದ್ಧಾಂತ



'ಉದಾಸಿ-ಬೆಲ್ಲದ'ರ ಲೂಟಿಗೆ ಕಾರ್ಮಿಕ-ರೈತ ಬಲಿ



ಓಂ ಶಾಂತಿ ಓಂ

ಬಿ.ಪಿ.ಎಲ್. ಕಾರ್ಮಿಕ ಮುಖಂಡರಿಗೆ ನ್ಯಾಯ ದೊರೆತಿಲ್ಲ

ಜನಶಕ್ತಿ ಕನ್ನಡ ವಾರಪತ್ರಿಕೆ

ರಶ್ಯಾದ ಮಹಾನ್ ಅಕ್ಟೋಬರ್ ಕ್ರಾಂತಿಯ 90 ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ ಅದು ಕುಸಿದಿದ್ದೇಕೆ ಎಂದು ವಿಶ್ಲೇಷಿಸುವ ಲೇಖನ

ಅಕ್ಟೋಬರ್ ಕ್ರಾಂತಿಗೆ 90 ವರ್ಷ

ರಶಿಯಾ ಕ್ರಾಂತಿ ಏಕೆ ಕುಸಿಯಿತು?

ನಿತ್ಯಾನಂದಸ್ವಾಮಿ

ಮೊನ್ನೆ, ನವಂಬರ್ 7 ರಂದು, ವಿಶ್ವದ 75 ದೇಶಗಳ ಸುಮಾರು 83 ಕಮ್ಯೂನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಪ್ರತಿನಿಧಿಗಳು ಸಾವಿರಾರು ಜನ ರಶಿಯಾ ನಾಗರಿಕರೊಂದಿಗೆ ಸೇರಿಕೊಂಡು, ಮೈ ನಡುಗುವ ಶೂನ್ಯ ತಾಪಮಾನದಲ್ಲಿ ಮಾಸ್ಕೋ ನಗರದ ಕೆಂಪು ವೃತ್ತದ ಹತ್ತಿರ ಇರುವ ಸ್ವೆಡ್ಲೊರಲ್ ವೃತ್ತದಲ್ಲಿರುವ ಕಾರ್ಲ್ ಮಾರ್ಕ್ಸ್ ಪ್ರತಿಮೆಯ ಬಳಿ ಸಭೆ ಸೇರಿ 90 ವರ್ಷಗಳ ಹಿಂದೆ ನಡೆದ ವಿಶ್ವದ ಪ್ರಥಮ ಸಮಾಜವಾದಿ ಕ್ರಾಂತಿಗೆ ತಮ್ಮ ನುಡಿ ನಮನ ಸಲ್ಲಿಸಿದರು. ಭಾರತದಿಂದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ರಶಿಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಾಗಿನಿಂದ ನವೆಂಬರ್ 7, ಒಂದು ಸಾರ್ವಜನಿಕ ರಜಾ ದಿನವಲ್ಲ. ಹೀಗಾಗಿ, ದಿನದ ಕೆಲಸ ಮುಗಿದ ಬಳಿಕ, ಕತ್ತಲಾದ ಮೇಲೆ, ತೀವ್ರ ಚಳಿ ಆವರಿಸುತ್ತಿರುವಾಗಷ್ಟೇ ಈ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಆದಾಗ್ಯೂ ಸಾವಿರಾರು ಜನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಗಮನಾರ್ಹವಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಪೈಕಿ ಬಹಳಷ್ಟು ಜನ ವಯಸ್ಸಾದ ಹಿರಿಯರಾಗಿದ್ದರು. ಗಣನೀಯ ಸಂಖ್ಯೆಯಲ್ಲಿದ್ದ ಯುವಜನರ ಉಪಸ್ಥಿತಿ ಗಮನ ಸೆಳೆಯುತ್ತಿತ್ತು.

ಕಾರ್ಯಕ್ರಮದ ಉದ್ದಕ್ಕೂ ಕಾಮ್ರೇಡ್ ಸ್ಟಾಲಿನ್ ಅವರ ಸ್ಮರಣೆ ಅಲ್ಲಿ ಸೇರಿದವರೆಲ್ಲರ ಮನಸ್ಸುಗಳನ್ನು ಪುಳಕಿತಗೊಳಿಸುತ್ತಿತ್ತು. ಸಾವಿರಾರು ಜನ ಸ್ಟಾಲಿನ್ ಅವರ ಚಿತ್ರವಿರುವ ಭಿತ್ತಿಪತ್ರಗಳನ್ನು ಹಿಡಿದಿದ್ದರು. ಅದೆಷ್ಟೋ ಜನ ಸ್ಟಾಲಿನ್ ಅವರ ಫೋಟೋ ಅನ್ನು ತಾವು ಧರಿಸಿದ ಕೋಟುಗಳಿಗೆ ಹಚ್ಚಿಕೊಂಡಿದ್ದರು. ಸುಮಾರು ಸಾವಿರ ಜನ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಸೋವಿಯತ್ ಯೂನಿಯನ್ ಪಥನಗೊಂಡ ನಂತರ ಮೊತ್ತಮೊದಲ ಬಾರಿಗೆ ಅಂತರರಾಷ್ಟ್ರೀಯ ಪ್ರತಿನಿಧಿಗಳು ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಅಕ್ಟೋಬರ್ ಕ್ರಾಂತಿಯನ್ನು ಸ್ಮರಿಸಲು ಅಲ್ಲಿ ಸೇರಿದ್ದರು.

ಸ್ಫೂರ್ತಿಯ ಸೆಲೆ

ವಿಶ್ವದಾದ್ಯಂತ ಸಾಮಾಜಿಕ ವಿಮೋಚನೆಯನ್ನು ಬಯಸುವ ಜನಸಮೂಹಗಳಿಗೆ ರಶಿಯಾ ಕ್ರಾಂತಿಯು ಸ್ಫೂರ್ತಿಯ ಒಂದು ಚಿರಂತನ ಸೆಲೆಯಾಗಿ ಉಳಿಯಲಿದೆ. 1917ರ ಕ್ರಾಂತಿ ಹಾಗೂ ಅದರ ನಂತರ ಸ್ಥಾಪನೆಯಾದ ಸಮಾಜವಾದಿ ಸೋವಿಯತ್ ಯೂನಿಯನ್ ಮೊತ್ತ ಮೊದಲ ಬಾರಿಗೆ ವರ್ಗ ಶೋಷಣೆಯಿಂದ ಮುಕ್ತವಾದ ಸಮಾಜವೊಂದನ್ನು ಸೃಷ್ಟಿಸಿತು. ಸಮಾಜವಾದದ ದಾಪುಗಾಲಿನ ಮುನ್ನಡೆ, ಒಂದು ಹಿಂದುಳಿದ ಅರ್ಥ ವ್ಯವಸ್ಥೆ ಬಲಾಢ್ಯ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಎದುರಿಸುವಷ್ಟು ಸಾಮರ್ಥ್ಯವನ್ನು ಪಡೆದಿದ್ದು ಸಮಾಜವಾದಿ ವ್ಯವಸ್ಥೆಯ ಶ್ರೇಷ್ಠತೆಗೆ ಸಾಕ್ಷಿಯಾಯಿತು.

ಹಿಟ್ಲರ್ ನೇತೃತ್ವದ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವಲ್ಲಿ ಸೋವಿಯತ್ ಯೂನಿಯನ್ ನಿರ್ವಹಿಸಿದ ನಿರ್ಣಾಯಕ ಪಾತ್ರ ಮತ್ತು ಅದರ ಪರಿಣಾಮವಾಗಿ ಪೂರ್ವ ಯುರೋಪಿನ ಸಮಾಜವಾದಿ ರಾಷ್ಟ್ರಗಳ ಉದಯ ವಿಶ್ವದ ಬೆಳವಣಿಗೆಗಳ ಮೇಲೆ ಗಹನವಾದ ಪರಿಣಾಮ ಬೀರುವಂತಾಯಿತು. ಫ್ಯಾಸಿಸಂ ವಿರುದ್ಧದ ದಿಗ್ವಿಜಯವು ಭಾರತವನ್ನೂ ಒಳಗೊಂಡಂತೆ ವಿಶ್ವದಾದ್ಯಂತ ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ಎಲ್ಲಿಲ್ಲದ ಬಲವನ್ನು ಕೊಟ್ಟಿತು ಮತ್ತು ಅದರ ಪರಿಣಾಮವಾಗಿ ಅನೇಕ ದೇಶಗಳು ವಸಾಹತು ಶೋಷಣೆಯಿಂದ ವಿಮೋಚಿತಗೊಂಡವು. ಚೀನಾ ಕ್ರಾಂತಿಯ ವಿಜಯ, ವಿಯೆಟ್‌ನಾಮ್ ಜನತೆಯ ವಿರೋಚಿತ ಹೋರಾಟ, ಕೊರಿಯಾ ಜನರ ಸಮರ ಮತ್ತು ಕ್ಯೂಬಾ ಕ್ರಾಂತಿಯ ಯಶಸ್ಸು ವಿಶ್ವದ ಶೋಷಿತ ಜನಸಮುದಾಯಗಳಲ್ಲಿ ಭರವಸೆಯನ್ನು ಮೂಡಿಸುವಂತಾಯಿತು. ಬಡತನ, ಅನಕ್ಷರತೆಯನ್ನು ತೊಡೆದುಹಾಕುವಲ್ಲಿ, ನಿರುದ್ಯೋಗವನ್ನು ತೊಲಗಿಸುವಲ್ಲಿ, ಶಿಕ್ಷಣ, ಆರೋಗ್ಯ ಮತ್ತು ವಸತಿಯಂತಹ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವಲ್ಲಿ ಸಮಾಜವಾದಿ ರಾಷ್ಟ್ರಗಳ ಸಾಧನೆ ವಿಶ್ವದ ದುಡಿಯುವ ಜನ ಸಮುದಾಯಗಳ ಹೋರಾಟಗಳಿಗೆ ಸ್ಫೂರ್ತಿಯ ಸೆಲೆಯಾಯಿತು.



ವಿಶ್ವ ಬಂಡವಾಳಶಾಹಿಗಳು ಸಮಾಜವಾದದ ಈ ಹೊಸ ಸವಾಲನ್ನು ಎದುರಿಸಬೇಕಾಯಿತು. ದುಡಿಯುವ ಜನವಿಭಾಗಗಳಿಗೆ ಇದುವರೆಗೆ ನೀಡಲಾಗದೆ ಇದ್ದ ಹಕ್ಕುಗಳನ್ನು ನೀಡಬೇಕಾಯಿತು. ಕಲ್ಯಾಣ ರಾಜ್ಯದ ಕಲ್ಪನೆಯೇ ಸಮಾಜವಾದಿ ವ್ಯವಸ್ಥೆಯ ಸಾಧನೆಗಳಿಂದ ಪ್ರೇರಿತವಾದ ಈ ದೇಶಗಳ ದುಡಿಯುವ ಜನರು ನಡೆಸಿದ ಹೋರಾಟಗಳ ಕೊಡುಗೆಯಾಗಿದೆ. ಇಂದು ಮಾನವ ನಾಗರೀಕತೆಯ ಅವಿಭಾಜ್ಯ ಅಂಗ ಎಂದು ಪರಿಗಣಿಸಲ್ಪಡುವ ಪ್ರಜಾಸತ್ತಾತ್ಮಕ ಹಕ್ಕುಗಳು ಸಾಮಾಜಿಕ ಬದಲಾವಣೆಗಾಗಿ ಜನತೆ ನಡೆಸಿದ ಹೋರಾಟದ ಫಲವಾಗಿವೆಯೇ ಹೊರತು ಬಂಡವಾಳಶಾಹಿ ವರ್ಗ ಆಳ್ವಿಕೆಯ ದಾನವಲ್ಲ.

ಈ ಕ್ರಾಂತಿಕಾರಿ ಬದಲಾವಣೆಗಳು ಮಾನವ ನಾಗರೀಕತೆಯಲ್ಲಿ ಗುಣಾತ್ಮಕವಾದ ನೆಗೆತಗಳನ್ನು ಉಂಟು ಮಾಡಿದವು ಮಾತ್ರವಲ್ಲ ಮಾನವ ಸಮಾಜದ ಮೇಲೆ ಅಚ್ಚಳಿಯದ ಪರಿಣಾಮವನ್ನು ಬೀರಿದವು.

ಹಿನ್ನಡೆ ಏಕಾಯಿತು?

ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ ಸೋವಿಯತ್ ಯೂನಿಯನ್ ಯಾಕೆ ಕುಸಿಯಿತು? ರಶಿಯಾದಲ್ಲಿ ಸಮಾಜವಾದಕ್ಕೆ ಹಿನ್ನಡೆ ಏಕಾಯಿತು?

ಸಮಾಜವಾದದ ಹಿನ್ನಡೆಗೆ ಸಮಕಾಲೀನ ಜಾಗತಿಕ ಪರಿಸ್ಥಿತಿಯ ಕುರಿತಾದ ತಪ್ಪು ತಿಳುವಳಿಕೆ ಒಂದು ಪ್ರಮುಖ ಕಾರಣವಾಯಿತು. 20ನೇ ಶತಮಾನದಲ್ಲಿ ಸಮಾಜವಾದವು ಅಭೂತಪೂರ್ವ ಸಾಧನೆಗಳನ್ನು ಮಾಡಿದ್ದರೂ, ಬಹುತೇಕ ಸಮಾಜವಾದಿ ಕ್ರಾಂತಿಗಳು ಯಶಸ್ವಿಯಾದದ್ದು ಬಂಡವಾಳಶಾಹಿ ಬೆಳವಣಿಗೆಯನ್ನು ಇನ್ನೂ ಕಾಣದೆ ಇರುವ ಹಿಂದುಳಿದ ದೇಶಗಳಲ್ಲಿ. ಲೆನಿನ್‌ವಾದಿ ತಿಳುವಳಿಕೆಯ ಪ್ರಕಾರ ಸಾಮ್ರಾಜ್ಯಶಾಹಿ ಸರಪಳಿಯಲ್ಲಿನ ಅತ್ಯಂತ ದುರ್ಬಲ ಕೊಂಡಿಯನ್ನು ಒಡೆದುಹಾಕುವ ಮೂಲಕ ಈ ಕ್ರಾಂತಿಗಳನ್ನು ಯಶಸ್ವಿಗೊಳಿಸಲಾಗಿತ್ತು. ಆದರೆ ವಿಶ್ವ ಬಂಡವಾಳಶಾಹಿಗೆ ಅಭಿವೃದ್ಧಿ ಹೊಂದಿದ ಉತ್ಪಾದನಾ ಶಕ್ತಿಗಳ ಮೇಲಿನ ತನ್ನ ಹಿಡಿತವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ವಿಶ್ವದ ಕೆಲವೇ ಕೆಲವು ದೇಶಗಳಲ್ಲಿ ಸಮಾಜವಾದವು ಅದರ ಬೆಳವಣಿಗೆಯನ್ನು ತಡೆದಿರಬಹುದು. ಆದರೆ ಇನ್ನುಳಿದ ದೇಶಗಳಲ್ಲಿ ಅವರ ಬೆಳವಣಿಗೆ ಅಭಾದಿತವಾಗಿತ್ತು. ಸಮಾಜವಾದಿ ದೇಶಗಳಿಗೆ ವಿಶ್ವ ಮಾರುಕಟ್ಟೆಯ ಸುಮಾರು ಮೂರರಲ್ಲಿ ಒಂದು ಭಾಗವನ್ನು ಬಂಡವಾಳಶಾಹಿಗಳಿಂದ ಕಿತ್ತುಕೊಳ್ಳಲು ಸಾಧ್ಯವಾಯಿತು. ಆದರೆ, ಇದು ಉತ್ಪಾದನಾ ಶಕ್ತಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಈಗಾಗಲೇ ವಿಶ್ವ ಬಂಡವಾಳಶಾಹಿಯು ಮಾಡಿದ್ದ ಸಾಧನೆಗಳ ಮೇಲಾಗಲಿ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ಬಳಸಿಕೊಂಡು ಉತ್ಪಾದನಾ ಶಕ್ತಿಗಳನ್ನು ಇನ್ನೂ ಮುಂದಕ್ಕೆ ಅಭಿವೃದ್ಧಿಪಡಿಸುವ ಅದರ ಸಾಮರ್ಥ್ಯದ ಮೇಲಾಗಲಿ ನೇರವಾದ ಪರಿಣಾಮ ಬೀರಲಿಲ್ಲ. ಇದರಿಂದಾಗಿ ವಿಶ್ವ ಬಂಡವಾಳಶಾಹಿಗೆ ಸಮಾಜವಾದಿ ಕ್ರಾಂತಿಗಳಿಂದ ಉಂಟಾದ ಹಿನ್ನಡೆಯಿಂದ ಹೊರಬರಲು ಮತ್ತು ಬಂಡವಾಳಶಾಹಿ ಮಾರುಕಟ್ಟೆಯನ್ನು ವಿಸ್ತರಿಸಲು ಸಾಧ್ಯವಾಯಿತು. ಸಾಮ್ರಾಜ್ಯಶಾಹಿಯು ನವ-ವಸಾಹತುವಾದದ ಮೂಲಕ ಬಂಡವಾಳಶಾಹಿ ಮಾರುಕಟ್ಟೆಯನ್ನು ವಿಸ್ತರಿಸುವಲ್ಲಿ ಯಶಸ್ವಿಯಾಯಿತು.

ಅತ್ತ, ಸಮಾಜವಾದವು ಅತ್ಯಲ್ಪಾವಧಿಯಲ್ಲಿ ಸಾಧಿಸಿದ ಅದ್ಭುತ ಸಾಧನೆಗಳು ಇಂತಹ ಸಾಧನೆಗಳಿಗೆ ಹಿನ್ನಡೆಯಾಗುವ ಪ್ರಶ್ನೆಯೇ ಇಲ್ಲ ಎಂಬ ನಂಬಿಕೆಯನ್ನು ಹುಟ್ಟು ಹಾಕುವಂತಾಯಿತು. "ಸೋಲುಂಡ ಬಂಡವಾಳಶಾಹಿಯು ನೂರುಪಟ್ಟು ಬಲವಾದ ಶಕ್ತಿಯೊಂದಿಗೆ ಹಿಂತಿರುಗಿ ದಾಳಿ ಮಾಡುತ್ತದೆ" ಎಂಬ ಲೆನಿನ್ ಅವರ ಎಚ್ಚರಿಕೆಯನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳುವುದಾಗಲಿಲ್ಲ.

ತಪ್ಪು ಅಂದಾಜು

ಬಂಡವಾಳಶಾಹಿ ಪತನವು ಶತಸಿದ್ಧವಾಗಿದ್ದರೂ ಅದು ತನ್ನಷ್ಟಕ್ಕೇ ತಾನೇ ಸಂಭವಿಸುವ ಪ್ರಕ್ರಿಯೆಯಲ್ಲ. ಬಂಡವಾಳಶಾಹಿಯನ್ನು ಕಿತ್ತೆಸೆಯಬೇಕಾಗುತ್ತದೆ. ಬಂಡವಾಳಶಾಹಿ ಶಕ್ತಿಯ ತಪ್ಪು ಅಂದಾಜು ಕಾರ್ಮಿಕ ವರ್ಗದ ಕ್ರಾಂತಿಕಾರಿ ಸೈದ್ಧಾಂತಿಕ ಹೋರಾಟವನ್ನು ನಿರಂತರವಾಗಿ ಹರಿತಗೊಳಿಸಿ ಬಲಪಡಿಸುವುದರ ಅಗತ್ಯತೆಯನ್ನು ಕಡೆಗಣಿಸಲು ಕಾರಣವಾಗುತ್ತದೆ. ವ್ಯಕ್ತಿನಿಷ್ಠ ಪಾತ್ರವಿಲ್ಲದೆ ಯಾವ ಕ್ರಾಂತಿ, ಪರಿವರ್ತನೆಯೂ ಸಾಧ್ಯವಿಲ್ಲ.

ಹೀಗೆ ಸಮಾಜವಾದದ ಶಕ್ತಿಯ ಬಗ್ಗೆ ಅತಿಯಾದ ಅಂದಾಜು ಮತ್ತು ಬಂಡವಾಳಶಾಹಿಯ ಶಕ್ತಿಯ ಬಗ್ಗೆ ಕಡಿಮೆ ಅಂದಾಜಿನಿಂದಾಗಿ ಅಂದು ಮೂಡಿ ಬರುತ್ತಿದ್ದ ಜಾಗತಿಕ ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲು ಸಾಧ್ಯವಾಗಲಿಲ್ಲ.

ಅಡೆತಡೆಗಳ ಅವಗಣನೆ

ಸಮಾಜವಾದದ ಬಗ್ಗೆ ಇನ್ನೂ ಒಂದು ತಪ್ಪು ಅಭಿಪ್ರಾಯ ಇತ್ತು. ಒಮ್ಮೆ ಸಮಾಜವಾದಿ ಕ್ರಾಂತಿ ಯಶಸ್ವಿಯಾದ ನಂತರ ಒಂದು ವರ್ಗರಹಿತ ಸಮತಾ ಸಮಾಜವು ಯಾವುದೇ ಅಡೆತಡೆ ಇಲ್ಲದೆ ಬಂದು ಬಿಡುತ್ತದೆ ಎಂಬುದೇ ಆ ತಪ್ಪು ಅಭಿಪ್ರಾಯ. ಸಮಾಜವಾದ ಎಂಬುದು ಸ್ಥಿತ್ಯಂತರದ ಅವಧಿ. ಮಾರ್ಕ್ಸ್ ಹೇಳಿರುವಂತೆ ಸಮತಾವಾದದ ಮೊದಲ ಹಂತವು ವರ್ಗ ವಿಭಜಿತ, ಬಂಡವಾಳಶಾಹಿ ಶೋಷಣೆ ವ್ಯವಸ್ಥೆ ಮತ್ತು ವರ್ಗರಹಿತ ಸಮತಾ ಸಮಾಜ ವ್ಯವಸ್ಥೆಯ ನಡುವಿನ ಅವಧಿಯಾಗಿದೆ. ಈ ಸ್ಥಿತ್ಯಂತರದ ಅವಧಿಯಲ್ಲಿ ವರ್ಗ ಸಂಘರ್ಷ ಕೊನೆಗೊಂಡಿರುವುದಿಲ್ಲ. ಬದಲಾಗಿ ವರ್ಗ ಸಂಘರ್ಷ ತೀವ್ರಗೊಂಡಿರುತ್ತದೆ. ವಿಶ್ವ ಬಂಡವಾಳಶಾಹಿಯು ತಾನು ಕಳೆದು ಕೊಂಡ ಪ್ರದೇಶ ವನ್ನು ಮರಳಿ ಪಡೆಯಲು ಶತಪ್ರಯತ್ನ ಮಾಡುವ ಅವಧಿ ಇದು. ಆದ್ದರಿಂದ ಈ ಅವಧಿಯು ಬಹಳಷ್ಟು ದೀರ್ಘವೂ, ಅನೇಕ ತಿರುವು ಮುರುವುಗಳಿಂದ, ಓರೆ ಕೋರೆಗಳಿಂದ ಜಟಿಲವಾದ ಅವಧಿಯಾಗಿರುತ್ತದೆ. ಕ್ರಾಂತಿಯ ಸಮಯದಲ್ಲಿ ಬಂಡವಾಳಶಾಹಿ ಬೆಳವಣಿಗೆಯನ್ನು ಇನ್ನೂ ಕಾಣದೆ ಇದ್ದ ಹಿಂದುಳಿದ ದೇಶಗಳಲ್ಲಿ ಇದು ವಿಶೇಷವಾಗಿ ನಿಜವಾಗಿತ್ತು. ಶತ್ರುವಿನ ಬಗ್ಗೆ ಕಡಿಮೆ ಅಂದಾಜು ಮಾಡಿದ್ದು ಮತ್ತು ಸಮಾಜವಾದದ ಬಗ್ಗೆ ಅಧಿಕ ಅಂದಾಜು ಮಾಡಿದ್ದು ಸಮಾಜವಾದಿ ದೇಶಗಳು ಎದುರಿಸುತ್ತಿದ್ದ ಸಮಸ್ಯೆಗಳನ್ನೂ ಕಡೆಗಣಿಸಲು ಕಾರಣವಾಯಿತು ಮಾತ್ರವಲ್ಲ ವಿಶ್ವ ಬಂಡವಾಳಶಾಹಿಯು ತನ್ನ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಮುನ್ನಡೆಯುತ್ತಿರುವುದನ್ನು ಕಡೆಗಣಿಸುವಂತಾಯಿತು.

ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆಯೇ ದ್ವಂದ್ವಮಾನದ ಜೀವಾಳವೆಂದು ಲೆನಿನ್ ಯಾವಾಗಲೂ ಹೇಳುತ್ತಿದ್ದರು. ವಿಶ್ಲೇಷಣೆಯೇ ತಪ್ಪಾಗಿ ಬಿಟ್ಟರೆ ವಿಕೃತಿಗಳು ಉಂಟಾಗುತ್ತವೆ.

ಪುಟ 15ಕ್ಕೆ

ಸಂಪಾದಕೀಯ

ನಾಗರಿಕ ಸಂಸ್ಥೆಗಳಿಗೆ ನಾಯಕತ್ವ ಬೇಡವೇ ?


'ಜನತೆಯ ಕೈಗೆ ಅಧಿಕಾರ', ಆಡಳಿತದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ತಾತ್ವಿಕ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಪುರಸಭೆ, ನಗರಸಭೆಗಳಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶ ಪ್ರಕಟವಾಗಿ ಇಲ್ಲಿಗೆ ಸುಮಾರು ತಿಂಗಳುಗಳೇ ಗತಿಸಿ ಹೋದವು. ಆದರೆ ಇದುವರೆಗೂ ಆ ಸಂಸ್ಥೆಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯ ಪ್ರಕ್ರಿಯೆ ಇನ್ನೂ ಆರಂಭಗೊಂಡೇ ಇಲ್ಲ. ಆ ಕ್ರಿಯೆ ತಕ್ಷಣದಲ್ಲಿಯೇ ಆರಂಭಿಸುವ ಯಾವ ಸೂಚನೆಗಳೂ ಕಾಣುತ್ತಿಲ್ಲ. ಚುನಾವಣೆಗಳು ನಡೆದು 2 ತಿಂಗಳುಗಳು ಕಳೆದರೂ ಇದುವರೆಗೆ 6 ಮಹಾನಗರ ಪಾಲಿಕೆಗಳಲ್ಲಿ ಮತ್ತು ಎಲ್ಲಾ 209 ಪೌರ ಸಂಸ್ಥೆಗಳಲ್ಲಿ ಪ್ರಥಮ ಸಭೆಯೇ ನಡೆದಿಲ್ಲ. ಇನ್ನು ಇಂತಹ 'ಜನಸಂಸ್ಥೆಗಳು' ನಗರ ನಾಗರೀಕರಿಗೆ ಉತ್ತಮ ಸೌಲಭ್ಯ, ಹಾಗೂ ಅಭಿವೃದ್ಧಿಯಂತಹ ಕೆಲಸಗಳ ಉಸ್ತುವಾರಿ ನೋಡಿಕೊಳ್ಳುವ ಸ್ಥಾಯಿ ಸಮಿತಿಗಳ ರಚನೆ-ಅವುಗಳ ಕಾರ್ಯಾಚರಣೆ ದೂರದ ಮಾತೇ ಆಗಿ ಉಳಿದಿರುವುದು ಗಂಭೀರ ವಿಷಯ.

ಇಂತಹ ವಿಷಯಕ್ಕೆ ರಾಜ್ಯ ರಾಜಕೀಯ ವಿದ್ಯಾಮಾನಗಳಲ್ಲಿನ ಕ್ಷಿಪ್ರ ಬೆಳವಣಿಗೆಗಳ ಕಾರಣ ಎಂಬುದು ಒಂದು ನೆಪವಷ್ಟೆ. ಸ್ಥಳೀಯ ಸಂಸ್ಥೆಗಳ ರಚನೆ, ಅದರ ಆಡಳಿತದ ಬಗ್ಗೆ ಹಿಂದಿನ ವರುಷಗಳಲ್ಲಿ ಬಂದ ಸರ್ಕಾರಗಳು ವರ್ತಿಸಿದ ರೀತಿ ನೋಡಿದರೆ, ಸ್ಥಳೀಯ ಸಂಸ್ಥೆಗಳ ಆಡಳಿತ ವಿಕೇಂದ್ರೀಕರಣದ ವಿರುದ್ಧವಿದ್ದ ಮನೋಭಾವವೇ ಅತಿ ದಟ್ಟವಾಗಿರುವುದು ಕಾಣುತ್ತದೆ. ನಾಗರೀಕರ ಯೋಗಕ್ಷೇಮ, ಕಲ್ಯಾಣ ಕೆಲಸ, ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಹಾಗೂ ಭದ್ರತೆಯಂತಹ ವಿಷಯಗಳ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳುವಂತಹ ಅಪರಿಮಿತ ಅಧಿಕಾರ-ಹೊಣೆಗಾರಿಕೆ ಇರುವ ಈ ಸಂಸ್ಥೆಗಳ ಕೈಕಾಲು ಮುರಿದು, ಒಕ್ಕಣ್ಣು ಮಾಡಿ, ಕೊನೆಗೆ ಕಸ ಎತ್ತುವ, ಬಹಳವೆಂದರೆ ಬೀದಿ ರಸ್ತೆಗೆ ತೇಪೆ ಹಾಕುವಂತಹ ಮಟ್ಟಕ್ಕಷ್ಟೇ ಸೀಮಿತಗೊಳಿಸಲಾಗಿದೆ. ಸಂಪನ್ಮೂಲಗಳ ಕೊರತೆಯಿಂದ ಸಹ ಬಳಲುವ ಇಂತಹ ಸ್ಥಿತಿಗೆ 'ಮುನ್ಸಿಪಾಲಿಟಿ' ಎಂಬಂತಹ ಸಾರ್ವತ್ರಿಕ ಅನ್ವರ್ಥ ನಾಮ ದೊರೆಯುವಂತೆ ಮಾಡಲಾಗಿರುವುದು ಜನರ ಪ್ರಜಾಪ್ರಭುತ್ವದ ದ್ವೇಷವಲ್ಲದೇ, ಆಡಳಿತದಲ್ಲಿ ಸರ್ವಾಧಿಕಾರದ ಸ್ಥಾಪನೆಯಲ್ಲದೇ ಮತ್ತೇನು? ಆದರೆ ಇಂತಹ ಯಾವುದೇ ಸನ್ನಿವೇಶ ಎಡರಂಗಗಳ ಸರ್ಕಾರದಡಿ ಕಾಣಲು ಸಾಧ್ಯವೇ ಆಗಿಲ್ಲ ಎಂಬುದನ್ನು ಗಮನಿಸಬೇಕು. ವಿಕೇಂದ್ರೀಕರಣಕ್ಕೆ ವಿರೋಧವಾದ ಮನೋಭಾವದಿಂದಾಗಿ ಈ ಸಂಸ್ಥೆಗಳ ಚುನಾವಣೆಗಳು ನಡೆಯಬೇಕಿದ್ದ ಅವಧಿಗಿಂತ ಸುಮಾರು ವರುಷಗಳ ವಿಳಂಬದ ನಂತರ ಅದು ಹೈಕೋರ್ಟ್-ಸುಪ್ರೀಂಕೋರ್ಟ್‌ಗಳು ರಾಜ್ಯ ಸರ್ಕಾರವನ್ನು ತೀವ್ರ ತರಾಟೆ ತೆಗೆದುಕೊಂಡ ನಂತರವೇ ನಡೆದವೆಂಬುದನ್ನು ಗಮನಿಸಬೇಕು. ನಿಯಮಿತ ಅವಧಿಯಲ್ಲಿ ಚುನಾವಣೆ ನಡೆಯುವುದಕ್ಕೆ ಅಡ್ಡಗಾಲು ಹಾಕಿದವರೇ ನಂತರ 'ವಿಜಯದ' ನಗುವಿನಲ್ಲಿ ಬೀಗಿದ್ದು ಒಂದು ನಾಚಿಕೆಗೇಡಿನ ಸಂಗತಿ. 'ಅಂತಹದ್ದೇ ಮನೋಭಾವ ಪದಾಧಿಕಾರಿಗಳ ಆಯ್ಕೆಯ ವೇಳಾಪಟ್ಟಿ ನಿಗದಿಯಲ್ಲಿಯೂ ಕಾಣುತ್ತಿದೆ.

ಈಗ ಚಳಿಗಾಲ, ಇನ್ನು ಬೇಸಿಗೆ ಕಾಲ... ನಗರವಾಸಿಗಳು ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿರುವುದು ಇದೆ. ಅಲ್ಲಲ್ಲಿ ಸಾಂಕ್ರಾಮಿಕ ರೋಗಗಳು ತಲೆ ಎತ್ತಿವೆ. ಹವಾಮಾನ ಬದಲಾದಂತೆ ಇವುಗಳ ಸ್ವರೂಪವೂ ಬೆಳೆಯುತ್ತದೆ. ಬೀದಿಗಳು ಚರಂಡಿ, ಬೀದಿ ದೀಪಗಳು ಇತ್ಯಾದಿಗಳ ಕನಿಷ್ಠ ಸಾಮಾನ್ಯ ಸಮಸ್ಯೆಗಳು ನಾಗರಿಕರನ್ನು ಭಾದಿಸುತ್ತವೆ. ಈಗಂತೂ ಚುನಾಯಿತವಾದ ರಾಜ್ಯ ಸರ್ಕಾರವಿಲ್ಲ. ಜನ ಪ್ರತಿನಿಧಿ ಶಾಸಕರೂ ಇಲ್ಲ. ಎಲ್ಲವೂ ರಾಜಭವನದ ನಿಯಂತ್ರಣ ಕೊಠಡಿಯಿಂದಲೇ ಆಡಳಿತ. ಹೀಗೆ ದಿಕ್ಕು ದಿಶೆಗೆ ಹುಡುಕಾಡಬೇಕಾದ, ಮುಗಿಲಿಗೆ ಮುಖಮಾಡಿ ತೂಗಬೇಕಾದ ಸ್ಥಿತಿಯಲ್ಲಿ ಜನ ಇರುವಾಗ ಸ್ಥಳೀಯ ಸಂಸ್ಥೆಗಳಾದರೂ ಒಂದು ಸಂಘಟಿತ ನಾಯಕತ್ವದಿಂದ ನೆರವಿಗೆ ಬಂದಾವೆಂದರೆ ಅದೂ ಮರೀಚಿಕೆಯಾದರೆ ಹೇಗೇ? ಇದರತ್ತ ಕಿಂಚಿತ್ತೂ ಯೋಚಿಸದ, ಸದಾ 'ಯಾತ್ರೆ- ವಾರ್ತೆ' ಗಳಲ್ಲೇ ಮುಳುಗಿದ ನಾಯಕರ ನಿರ್ಲಕ್ಷ್ಯದ ವರ್ತನೆಯೂ ಖಂಡನೀಯ. ಆ ಚುನಾವಣಾ ಸಂದರ್ಭದಲ್ಲಿ ಈ ಪಕ್ಷಗಳು ತೋರಿದ ಉತ್ಸಾಹ, ಹರಿಸಿದ ಹೆಂಡ-ಹಣ-ಆಮಿಷಗಳ ಹೊಳೆಯ ನಿಶೆ ಇಳಿಸಿಲ್ಲ ಎನ್ನಿಸುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಮೀಸಲಾತಿ ಪಟ್ಟಿಯನ್ನು ಒಳಗೊಂಡು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಆಯ್ಕೆಗೆ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ನಾಗರಿಕರ ಅಧಿಕಾರದ ಕೀಲಿಯನ್ನು ರಾಜಭವನದ ಭದ್ರ ಕಪಾಟಿನಲ್ಲಿಟ್ಟು ಅಂಕುಶದಲ್ಲಿರಿಸದೇ ನಾಗರಿಕರ ಕೈಗೆ ದಕ್ಕುವಂತಾಗಬೇಕು, ಅದನ್ನು ಜನತೆಯೂ ದಕ್ಕಿಸಿಕೊಳ್ಳಬೇಕು.

ರಾಜಕೀಯದಲ್ಲಿ ಚುರುಕು



ಕರ್ನಾಟಕದ ವಿಧಾನಸಭೆ ವಿಷರ್ಜನೆಯಾಗಿದೆ. ಬಿಜೆಪಿ, ಜೆಡಿ(ಎಸ್) ಪಕ್ಷದ 'ಮರು ಮೈತ್ರಿ ಪತನಗೊಂಡ ನಂತರ ಬಿಸಿಯೇರಿದ ಚರ್ಚೆ ಬಳಿಕ ವಿಧಾನಸಭೆಯ ವಿಸರ್ಜನೆಯನ್ನು ಪಾರ್ಲಿಮೆಂಟ್ ಅಂಗೀಕರಿಸಿದೆ. ಈಗ ರಾಷ್ಟ್ರಪತಿ ಆಡಳಿತ! ಈಗ ರಾಜ್ಯಪಾಲರು ಅವರ ಅಧಿಕಾರಿಗಳ ದರ್ಬಾರು.... ಅಧಿಕಾರಶಾಹಿಗಳ ದರ್ಬಾರು ಶಾಸಕರು ಮಾಜಿಗಳು.

ಇಂತಹ ಸ್ಥಿತಿಯಲ್ಲಿ ವಿಧಾನಸಭೆಗೆ ಚುನಾವಣೆ ನಡೆಸುವುದೊಂದೇ ಉಳಿದಿರುವ ಅನಿವಾರ್ಯ ಮಾರ್ಗ. ಅದರತ್ತಲೂ ರಾಜ್ಯಪಾಲ ರಾಮೇಶ್ವರ ಠಾಕೂರರು ಗಮನಹರಿಸಿದ್ದಾರೆ.. ಒಂದು ಸಭೆಯನ್ನೂ ನಡೆಸಿದ್ದಾರೆ.



ಯಾವುದು ಆರಂಭ?

ಕೇಳಿಬಂದ ಸುದ್ದಿಯಂತೆ ಮೇ ತಿಂಗಳಲ್ಲಿ ಚುನಾವಣೆ ನಡೆಯಬೇಕು.

ಹೋಗುತಿಹುವುದು ಪಾದವೆತ್ತ ?

ಅಂದಹಾಗೇ ಮೈತ್ರಿ ಮುಗಿಯುತ್ತಿದ್ದಂತೆ ಹೊಸ ಮೈತ್ರಿಯೂ ಕುದುರುವ ಅವಕಾಶಗಳೇ ಇಲ್ಲದ್ದರಿಂದ ಪಕ್ಷಗಳು ಚುನಾವಣೆಯತ್ತ ನೋಟ ಹರಿಸಿದ್ದವು. ವಿಸರ್ಜನೆ ಖಾತ್ರಿಯಾಗುತ್ತಿದ್ದಂತೆ ಇಂತಹ ಘಟಾನುಘಟಿ ನಾಯಕರುಗಳು ರಸ್ತೆಗೆ ಒಮ್ಮೆಗೆ ಇಳಿದುಬಿಟ್ಟರೋದು ಒಂದು ರೀತಿ ಮತದಾರರಿಗೆ 'ರಸ್ತೆ ಜಾಮ್' ಆದಂತೆ ಇದೆ. ದಿಗ್ಭ್ರಮೆಯಿಂದ ಅಲ್ಲದಿದ್ದರೂ ಕುತೂಹಲದ, ಪ್ರಶ್ನಾರ್ಥಕದಿಂದ ವೀಕ್ಷಿಸುತ್ತಿದ್ದಾನೆ. ತಮಗೇ ಇವರ ಬೆಂಬಲವೆಂದು ನಂಬಿ, ನಂಬಿಸುವ ಯತ್ನದಲ್ಲಿ ನಾಯಕರು ಯಾತಗೆ ಹೊರಟಿದ್ದಾರೆ. ಕೆಲವರು ಹಳೇ ಗಾಡಿಯನ್ನು ಹತ್ತುವುದೋ, ಹೊಸದಕ್ಕೆ ಕಾಲು ಹಾಕುವುದೋ ಎಂದು ಗೊಂದಲದಲ್ಲಿ ಓಡಾಡುತ್ತಿದ್ದಾರೆ. ಇಲ್ಲಿ ತತ್ವ, ರಾಜಕೀಯ ಜನಕಾಳಜಿಯ ಬದ್ಧತೆಯೆಂಬುದು ಇವರ ಕ್ವಾಲಿಫಿಯೇಷನ್‌ಗೆ ಬರುವುದಿಲ್ಲವಾದ್ದರಿಂದ ವ್ಯವಹಾರಕ್ಕಾಗಿ ವ್ಯವಹಾರದ ನಿಲುವು ತಳೆದಿದ್ದಾರೆ.

ಬುಟ್ಟಿ ಹಿಡಿದ ಬಿಜೆಪಿ

ಒಂದು ವಾರ ಸರಿಯುತ್ತಿದ್ದಂತೆ ಯಡಿಯೂರಪ್ಪನವರ ಆರ್ಭಟ ಸ್ವಲ್ಪ ಇಳಿದಂತೆ ಕಾಣುತ್ತದೆ. ಸರ್ಕಾರ ಪತನವಾದ ಕೂಡಲೇ ಯಡಿಯೂರಪ್ಪ, ಸದಾನಂದಗೌಡ ಇತ್ಯಾದಿ ನಾಯಕಮಣಿಗಳು ಸೀದಾ ರಥವೇರಿ ಕತ್ತಿ, ಗುರಾಣಿ ಕಿರೀಟ ಧರಿಸಿ ಧರ್ಮಯುದ್ಧ ಮಾಡಲು ವಿಶ್ವಾಸದ್ರೋಹದ ಕುದುರೆಯೇರಿ ಹೊರಟೇ ಬಿಟ್ಟರಲ್ಲ. ಭಾಷಣಗಳೇನೋ ಭರ್ಜರಿ, ಈ ತಾಜಾ ಸಿನಿಮಾ ಶೋವನ್ನು ನೋಡಲೆಂದು ಸೇರಿದವರು ಒಂದಿಷ್ಟು ಜನ! ಇದರಿಂದ ಪುಳಕಿತರಾಗಿ ಮತ್ತೆ ಅದೇ ವಿಶ್ವಾಸದ್ರೋಹದ ಬೋರ್ಗರೆತ. ಆದರೆ ಈ ಬಾರಿ ಯಾತ್ರೆಯ ದಾರಿ ಆಯ್ಕೆ ಮಾಡಿಕೊಂಡದ್ದು ದಕ್ಷಿಣ ಕರ್ನಾಟಕದ ಜಿಲ್ಲೆಗಳನ್ನು ಅಂದರೆ ಜಾತ್ಯಾತೀತ ಜನತಾದಳ ಪ್ರಭಾವ, ನೆಲೆ ಬಲವಿರುವ ಪ್ರದೇಶ. ಇಲ್ಲಿ ಅನುಕಂಪ ಹುಟ್ಟಿಸಿ ಮತದಾರರನ್ನು ಸೆಳೆದು ಬಿಜೆಪಿಗೆ ನೆಲೆ ರೂಢಿಸಬೇಕೆಂಬ ಸ್ಪಷ್ಟ ಗುರಿ.... ಇದು ಯಡಿಯೂರಪ್ಪನವರ ಮೆದುಳಿನ ಕೂಸಲ್ಲ... ಇದು ಕುಖ್ಯಾತ ಆರ್.ಎಸ್.ಎಸ್.ನ ದೀರ್ಘಕಾಲೀನ ತಂತ್ರ. ಒಕ್ಕಲಿಗರ ನಡುವೆ ಪ್ರಭಾವ ಬೆಳೆಸಲು ವಿಶ್ವಹಿಂದೂ ಪರಿಷತ್‌ಗೆ ಪ್ರಭಾವಿ ಮಠಾದೀಶ ಆದಿಚುಂಚನಗಿರಿ ಸ್ವಾಮಿಗೆ ಸೆಳೆತ, ಪೂಜೆ ಪುನಸ್ಕಾರ ಸರ್ವಸೇವೆ, ನಂತರ ಹಿಂದೂ ಸಮಾಜೋತ್ಸವ, ಅಲ್ಲಲ್ಲಿ ಕೋಮು ಗಲಭೆಗಳಿಗೆ ಯತ್ನ... ಈಗ ಅನುಕಂಪದ ಅಲೆಯೇರುವ ಬಯಕೆ......... ಅಂತಿಮವಾಗಿ ಮತದಾರರು ಬಿಜೆಪಿ ಬುಟ್ಟಿಗೆ ಬೀಳಿಸಿಕೊಳ್ಳುವ ತವಕ.



ವೇಷ-ಮೋಸ

ಯಡ್ಡಿ - ಅನಂತ್

ಸ್ನೇಹಕ್ಕೆ ಸಿದ್ಧ - ಸಮರಕ್ಕೆ ಬದ್ಧ!!

ಅಂತೂ ಜೆಡಿ(ಎಸ್) ಕುಮಾರಸ್ವಾಮಿ, ದೇವೇಗೌಡರ ವಚನಭ್ರಷ್ಟತೆ, ವಿಶ್ವಾಸದ್ರೋಹದ ಪ್ರಚಾರದ ಎರಡನೇ ಕಂತು ಒಂದು ಹಂತದಲ್ಲಿ ಮುಗಿದಿದೆ, ಮುಂದುವರಿದಿದೆ. ಯಡಿಯೂರಪ್ಪನವರ ಮಾತಿನಲ್ಲಾದರೂ ಜನರ ಸಮಸ್ಯೆಗಳ ಪ್ರಸ್ತಾಪವಿಲ್ಲ. ರಾಷ್ಟ್ರನಾಯಕ ಅನಂತಕುಮಾರ್ ಪೂರ್ಣ ಸಾಥಿ ನೀಡುತ್ತಿಲ್ಲ. ಇನ್ನು ಸದಾನಂದಗೌಡರ ಗುಡುಗು ಒಂದು ಹನಿ ಮಳೆಯನ್ನು ತರಲಿಲ್ಲ. ಇದ್ದ ಆರರಲ್ಲಿ ನಾಲ್ಕು ಜನ ಹೊರಗುಳಿದಿದ್ದಾರೆ. ಇದರಲ್ಲಿ ಭಿನ್ನಮತದ ಭಾವುಟ ಎತ್ತಿ ಈಶ್ವರಪ್ಪ, ಶಂಕರಮೂರ್ತಿ, ಜಗದೀಶ್ ಶೆಟ್ಟರ್‌ರವರು ದೆಹಲಿಗೂ ಹಾರಿ ಹಿಂತಿರುಗಿದ್ದಾರೆ. ಈ ಯಾತ್ರೆ ಯಡ್ಡಿ, ಸದಾನಂದ ಯಾತ್ರೆಯಾಗಿದ್ದು ತಮ್ಮನ್ನು ಕಡೆಗಣಿಸಲಾಗಿದೆಯೆಂಬುದು ವರಿಷ್ಠರಿಗೆ ಅವರ ದೂರು. ಇದಕ್ಕೆ ನಾಯಕರ ಸಹಜ ಸಾಂತ್ವನ. ಆದರೆ ಎಲ್ಲಾ ಅನುಕಂಪ ತನ್ನಿಂದಲೇ ತನಗಾಗಿಯೇ ಎಂಬ ಯಡಿಯೂರಪ್ಪನವರ ಆತುರಾಕಾಂಕ್ಷೆಗೆ ಅನಂತಕುಮಾರರ ಬುಸುಬುಸು! ಧರ್ಮಯಾತ್ರೆ, ಧರ್ಮಯುದ್ಧ ನಿಂತರೂ ಇದು ಬಿಜೆಪಿಯೊಳಗೆ ನಿಲ್ಲದ ಯುದ್ಧ. ಅದಕ್ಕೆ ಎರಡೂ ಬಣಗಳೂ ಸನ್ನದ್ಧ.

ರಾಜಾಶ್ರಯ

ವಿಧಾನಸಭೆ ವಿಸರ್ಜನೆ ಚುನಾವಣೆಯ ಸ್ಥಿತಿಯಿಂದ ಸಂತೋಷಗೊಂಡವರಂತೆ ಕಾಂಗ್ರೆಸ್ ಪಾಳ್ಯ ತೋರಿಸಿಕೊಂಡರೂ ಅದಕ್ಕಾಗಿ ಮೂಲ ಸಿದ್ಧತೆಯಿಲ್ಲದೆ ಇನ್ನೂ ತಡಕಾಟದಲ್ಲಿರುವಂತೆ ಕಾಣುತ್ತಿದೆ. ತನ್ನ ಮುಂದಿನ ವರಸೆಗಳಿಗೆ ರಾಜಭವನವನ್ನು ಆಶ್ರಯಿಸಲು ಬಯಸಿದೆ. ಚುನಾವಣೆಗಳಿಗೆ ಸನ್ನದ್ಧ ಎನ್ನುವಾಗಲೂ ಅದಕ್ಕೆ ಅಗತ್ಯ ಸಿದ್ಧತೆಗಳೂ, ತಂತ್ರಗಳ ಎಳೆ ಇನ್ನೂ ಕಾಂಗ್ರೆಸ್‌ಗೆ ಸಿಕ್ಕಿಲ್ಲ. ಯುವ ಕಾಂಗ್ರೆಸ್‌ನ ಅಧ್ಯಕ್ಷರನ್ನಾಗಿ ದಿ: ಬೈರೇಗೌಡರ ಮಗ ಕೃಷ್ಣ ಭೈರೇಗೌಡರನ್ನು ನೇಮಿಸಿ ಅಭಿನಂದಿಸುತ್ತ ಓಡಾಡುವುದು ಒಂದು ವಿಶೇಷ ಎನ್ನಬಹುದಾದರೆ ಉಳಿದದ್ದು ಜೆಡಿ(ಎಸ್) ಪಕ್ಷವನ್ನು ಮನಸಾರೆ ಧೂಷಿಸುವುದು. ಕಾಂಗ್ರೆಸ್ ತಾಕತ್ತನ್ನು ಹೆಚ್ಚಿಸಿಕೊಳ್ಳಲು ಜನರ ನಡುವೆ ಹೋಗುವುದಕ್ಕಿಂತ ಜೆಡಿ(ಎಸ್) ಪಕ್ಷದಿಂದ ಹೊರಬರುವ ವಲಸೆಗಾರರಿಗೆ ಬಲೆಹಾಕಿ ಕಾಯುತ್ತಿರುವುದು.

ಹೈಕಮಾಂಡನ್ನು ಮಾತನಾಡಿಸಿ ಬಂದಿರುವ ಧರಂ, ಖರ್ಗೆಯವರೇನೋ ಪಕ್ಷದೊಳಗೆ ಹಲವಾರು ಹೊಸ ಬದಲಾವಣೆ ತರುವುದಾಗಿ, ಚೈತನ್ಯಶೀಲ ರಾಗುವುದಾಗಿ ಹೇಳುತ್ತಿದ್ದಾರೆ. ಬದಲಾವಣೆ ಎಂದರೆ ಅದಲುಬದಲೇ ಎಂದು ಪ್ರಶ್ನಿಸಿಕೊಳ್ಳುತ್ತಿರುವ ಜನ ಈ ನಾಯಕರ ಮಾತುಗಳಿಂದ ಉತ್ಸಾಹ ಪಡೆದಂತಿಲ್ಲ. ಇನ್ನೂ ಕಣ್ಣು ಬಿಡುತ್ತಿರುವ ಬಹುಜನ ಸಮಾಜ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡರೆ ಹೇಗೆ ಎಂಬ ಬಗ್ಗೆಯೂ ಕಾಂಗ್ರೆಸ್‌ನ ಕೆಲವು ನಾಯಕರಲ್ಲಿ ಯೋಚನೆಯ ಮಿಂಚು ಹೊಳೆದಿದೆಯಂತೆ. ಇನ್ನು ಸಮಾಜವಾದಿ ಪಕ್ಷದ ನಾಯಕ ಸಾರೇಕೊಪ್ಪ ಬಂಗಾರಪ್ಪನವರು ಸುಮ್ಮನೆ ಕೂಡಲು ಸಾಧ್ಯವೇ! ಬಂದರ್ಥದಲ್ಲಿ ಅವರು

ಪುಟ 12 ಕ್ಕೆ

ಯಡಿಯೂರಪ್ಪ - ಸ್ವಾಮೀಜಿ ಮತ್ತು ಗೋಮಾಂಸ

ನವೆಂಬರ್ 18ರಂದು ಭಾನುವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ಕೋಟಿ 'ನಿರಾಜನ' ಹೆಸರಿನ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಹಂತ ಹಂತವಾಗಿ ರಾಜ್ಯದಲ್ಲಿ ಮೂಲಭೂತವಾದಿಗಳ ಪೈಶಾಚಿಕತೆ ಹೆಚ್ಚುತ್ತ ಸಮಾಜದ ಸ್ವಾಸ್ಥತೆಗಾಗಿ ಹೋರಾಡಬೇಕಾದ ಈ ಸಂದರ್ಭ ಬರುತ್ತಿದೆ ಎಂಬುದಕ್ಕೆ ಗೋ ಸಂರಕ್ಷಣೆಯ ಹೆಸರಿನಲ್ಲಿ ನಡೆದ ಈ ಕಾರ್ಯಕ್ರಮ ಒಂದು ಸಾಕ್ಷಿ ಮಾನವ ಕುಲವನ್ನೇ ಅಂಧಕಾರದಲ್ಲಿಟ್ಟಿದ್ದು ಈಗ ಹಿಂಬಾಗಿಲಿನಿಂದ ರಾಜ್ಯವನ್ನು ಆಳಲು ಹೊರಟಿರುವ ಹಲವು ಮಠಗಳಲ್ಲೊಂದಾದ ರಾಮಚಂದ್ರಪುರ ಮಠದ ರಾಘವೇಶ್ವರ ಭಾರತೀಸ್ವಾಮೀಜಿವರದ್ದು ಇದರ ನೇತೃತ್ವ. ರಾತ್ರಿ ವೇಳೆಗೆ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಯಡ್ಯೂರಪ್ಪನವರು ಭಾಗವಹಿಸಿದ್ದರು. ಇದೇನು, ಬೆಳಗಾದರೆ ವಿಧಾನಸಭೆಯಲ್ಲಿ ಬಹುಮತ ಸಾಬೀತಾಗಬೇಕು, ದೇವೇಗೌಡ್ರು ಷರತ್ತುಗಳಿಗೆ ಸಹಿ ಹಾಕಲೇಬೇಕು ಅಂತಿದ್ದಾಗ ಮುಖ್ಯಮಂತ್ರಿ ಪಟ್ಟ ಮುಳುಗುವಾಗ ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ 'ಶಾಂತ' ವಾಗಿ ಅಲ್ಲಿ ಬಂದು ಕೂರಲು ಸಾಧ್ಯವೇ? ಹೌದು, ಹಣಕಾಸು ಮಂತ್ರಿಯಾಗಿ ಸಿಕ್ಕ ಅವಕಾಶವನ್ನೇ ಬಳಸಿಕೊಂಡು ಜನರ ದುಡ್ಡನ್ನೆಲ್ಲಾ ಕೋಟಿಗಟ್ಟಲೇ ಮಠಗಳಿಗೆ ಕೊಟ್ಟು, ಜನರಿಂದ ಥೂ ಅನಿಸಿಕೊಂಡೂ ಆಗಿದೆ. ಅಂಥದ್ರಲ್ಲಿ, ಮಠದ ಕಾರ್ಯಕ್ರಮ ನಡೆಯುವಾಗ ಬಂದು ಪ್ರಚಾರವನ್ನಾದ್ರು ತಗೊಳ್ಳಿಲ್ಲ ಅಂದ್ರೆ ಹೇಗೆ? ಹೀಗಾಗಿ ಜೀವ ಕೈಯಲ್ಲಿ ಹಿಡಿದುಕೊಂಡೇ ಕೂತಿದ್ರಂತೆ.

ನೈಜಮುಖ

ಪೇಜಾವರ ಮಠದ ಸ್ವಾಮೀಜಿಯಾದಿಯಾಗಿ ಎಂದಿನಂತೆ ಬಂದವರೆಲ್ಲಾ ತಮ್ಮ ಉವಾಚವನ್ನು ಎದುರಿಸುತ್ತಿರುವಾಗಲೇ ರಾಮಚಂದ್ರಪುರ ಮಠದ ರಾಘವೇಶ್ವರ ಭಾರತೀಸ್ವಾಮಿ 'ಗೋವಿನ ಚರ್ಮ ಸುಲಿಯುವವರು ಮತ್ತು ಅದರ ಮಾಂಸ ಬೇಯಿಸುವವರು ರಾಕ್ಷಸರು ಅವರ ಚರ್ಮ ಸುಲಿಯಬೇಕು' ಎಂದು ಸಂಘ ಪರಿವಾರದ ನೈಜ ಅಜೆಂಡಾ ಬಿಚ್ಚಿಟ್ಟರು. ಹಿಂದೆ 'ಶ್ರೇಷ್ಠ' ಗೋಮಾಂಸವನ್ನೇ ಮೃಷ್ಟಾನ್ನವನ್ನಾಗಿ ಸೇವಿಸಿ ಬದುಕುತ್ತಿದ್ದ 'ಆರ್ಯ ವಂಶಜರು' ಇಂದು ಗೋವಿನ ಚರ್ಮ ಸುಲಿಯುವವರು ರಾಕ್ಷಸರು ಎಂದು



ಮುಗ್ಧ ಭಕ್ತಿಯನ್ನು ಮತಾಂಧತೆ ಹರಡಲು ದುರ್ಬಳಕೆ ಮಾಡುವವರ ಸಂಚನ್ನು ಮಹಿಳೆಯರು ಅರಿಯಬಾರದೆ?

ದನದ ಮಾಂಸ ತಿನ್ನುವ ಚಳುವಳಿಯಲ್ಲಿ ಡಿಪಿಐ ಕಾರ್ಯಕರ್ತರು



ಹೇಳುವುದು ವಿಚಿತ್ರವಲ್ಲವೇ! ಜೀವ ಸಂಕುಲದ ಶ್ರೇಷ್ಠ ಪ್ರಾಣಿಯಾದ ಮಾನವನನ್ನೇ ಕೊಂದು (ಇಲ್ಲಿ ದಲಿತರನ್ನು- ಮುಸ್ಲೀಮರನ್ನು ಪಶುಗಳಿಗಿಂತ ಕಡೆಯಾಗಿ ನಿರಂತರವಾಗಿ ಹತ್ಯೆ ಮಾಡಲಾಗುತ್ತಿದೆ) ಗೋ ಸಂರಕ್ಷಣೆ ಮಾಡುತ್ತೇನೆಂದು ಹೊರಟಿರುವುದರ ಅರ್ಥವೇನು? ಬಹುವಾಗಿ ಈ ಆಹಾರ ಪದ್ಧತಿಯನ್ನು ರೂಢಿಸಿಕೊಂಡಿರುವ ದಲಿತರು ಬಹು ಮುಸ್ಲೀಮರ ಮಾರಣ ಹೋಮ ನಡೆಸುವ ಹುನ್ನಾರ ಇದರ ಹಿಂದಿದೆ. ದನಗಳ ಪ್ರಶ್ನೆಯನ್ನು ಭಾವನಾತ್ಮಕಗೊಳಿಸಿ ಮತಾಂಧತೆ ದ್ವೇಷ ಹರಡುವ ಸಂಚಿದೆ. ದಲಿತರು-ಮುಸ್ಲಿಮರಾದಿಯಾಗಿ ದೇಶದ ವಿವಿಧ ಸಮುದಾಯಗಳ ಕೋಟ್ಯಾಂತರ ಬಡ ಜನರು (ಶ್ರೀಮಂತರೂ ತಿನ್ನುತ್ತಾರೆ)ದನದ ಮಾಂಸ ತಿನ್ನುತ್ತಾರೆ. ಇದು ಒಂದು ರೀತಿಯಲ್ಲಿ ಬಡವರಿಗೆ ಅಗ್ಗವಾಗಿ ಸಿಗುವ ಪೌಷ್ಠಿಕ ಆಹಾರವೂ ಹೌದು. ವಿಶ್ವದ ಬಹುತೇಕ ಕಡೆ ದನ ಮಾಂಸದ ಆಹಾರ ಪದ್ಧತಿಯೇ ಹೆಚ್ಚು ಜನಪ್ರಿಯ. ಗೋವಿನ ಸಗಣಿ-ಗಂಜಲವನ್ನೇ ಪವಿತ್ರವಾದದ್ದು ಎಂದು ಬಳಸುವ ಮೇಲ್ಜಾತಿಯ ಕೆಲವು ಪಟ್ಟಭದ್ರ ಜನ ಗೋಮಾಂಸ ತಿನ್ನುವವರನ್ನು ದ್ವೇಷಿಸುವುದು, ಅವರ ವಿರುದ್ಧ ಹಿಂಸೆಗೆ ಪ್ರಚೋದನೆ ನೀಡುವುದು ಅವರ ಪೈಶಾಚಿಕ ನೀತಿಯಾಗಿದ್ದು ಅದನ್ನು ಸೋಲಿಸುವುದು ಪ್ರಗತಿಪರರೆಲ್ಲರ ಕರ್ತವ್ಯವಾಗಿದೆ.

ಸ್ವಾಮೀಜಿಯ ಈ ಹೇಳಿಕೆಯನ್ನು ಖಂಡಿಸಿ ಡಿಪಿಐ ಸಂಘಟನೆಯ ನೇತೃತ್ವದಲ್ಲಿ ದನದ ಮಾಂಸವನ್ನು ಬೇಯಿಸಿ ತಿನ್ನುವ ಒಂದು ಅಪರೂಪವಾದ ಪ್ರತಿಭಟನೆಯು ಬೆಂಗಳೂರಿನ ಪುರಭವನದ ಮುಂದೆ ನಡೆಯಿತು. ಬೇರೆಯವರ ಆಹಾರ ಪದ್ಧತಿಯ ಮೇಲೆ ನಿರ್ಬಂಧ ಹೇರುವ ಕೋಮುವಾದಿಗಳ ಅಜೆಂಡಾವನ್ನು ವಿರೋಧಿಸಿತು.

– ಪ್ರಸಾದ್

ಇದು ಪ್ರಾಣಿ ದಯೆಯೇ?

ಗೋವುಗಳ ರಕ್ಷಣೆಗೆ ಕಾರಣವು ಉಂಟು
ಹಾಲು ತುಪ್ಪವು ಮೊಸರು ಈ ಜನಕೆ ನಂಟು
ಉಳಿದಿರುವ ಪ್ರಾಣಿದಯೇ ಈ ಜನಕೆ ಇಲ್ಲ
ಹುಟ್ಟುವುವು ಸಾಯುವುವು ಅನ್ನುವರು ಎಲ್ಲ.

– ವಿಡಂಬಾರಿ

ವಸಿ ಉಸಾರಾಗಿರಕ್ಕೇಳು

'ಏನ್ಲ ಚೆಡ್ಡಿ ಚಿಕ್ಕ ಮತ್ತೆ ಎಲ್ಲಿಗೊಂಟೆ?' ಎಣ್ಣೆತಮ್ಮಣ್ಣ ಕೇಳಿದ.

'ಥೂ ನಿನ್ನ. ಒಳ್ಳೆ ಕೆಲ್ಸಕ್ಕೆ ವಂಟಾಗ' ಎಲ್ಲಿಗೆ? ಅಂತ ಕೇಳ್ತರೇನ್ಲ? ಅಪಸಕುನ, ಅಪಸಕುನ' ಎಂದ ಚೆಡ್ಡಿ ಚಿಕ್ಕ.

'ಸುಮ್ನಿರ್ಲ ಕಂಡೀವ್ನಿ, ಏನು ಭಾಳ ಘನಂದಾರಿ ಕೆಲ್ಸಕ್ಕೆ ವಂಟಿದ್ದು ತಾವು?'

'ನಿಂಗ್ಯಾಕ್ಲ ಅವೆಲ್ಲ ಏನೋ ಒಂದು ಸುಭ ಕಾರ್ಯ'

'ಏನಪ್ಪ ಅಂಥ ಸುಭ ಕಾರ್ಯ? ಏನು ಹೆಣ್ಣು ನೋಡೋಕೆ ವಂಟಿದಿಯೋ? ಏನು ಉಡುಗಿ ಮಾಟವಾಗವಳ?' ಎಂದು ಕಿಚಾಯಿಸಿದ ಎಣ್ಣೆ ತಮ್ಮಣ್ಣಾ.

'ನೋಡಪ್ಪ, ಮಾಟ ಮಂತ್ರದ ಇಚಾರ ಮಾತ್ರ ತೆಗಿಬೇಡ. ನಮಗೆ ಭಯ ಆಯ್ತದೆ' ಎಂದ ಚೆಡ್ಡಿ ಚಿಕ್ಕ.

(ಥತ್ ನಾನೇನೋ ಏಳಿದ್ರೆ ಈ ದಡ್ಡ ಮುಂಡೇದು ಇನ್ನೇನೋ ಏಳುತ್ತೇ?) 'ಅಲ್ಲ ಕಣಲಾ ಚಿಕ್ಕ, ಓದ್‌ವಾರ ಓಗಿದ್ಕಲ್ಲ, ಪ್ರಮಾಣ ವಚನಕ್ಕೆ, ನಿನ್ನ ಕಾಲುಗುಣದಿಂದ ಏನಾಯ್ತು ನೋಡು. ನೀನು ಇತ್ಲಾಗಿ ವಾಪಸ್ ಬಂದೆ. ಅತ್ಲಾಗೆ ಯಡೂರಪ್ಪ ಬಿದ್ದೋದ್ರು'

'ಲೇ ತಮ್ಮ, ಸುಮ್ನಿರ್ಲ, ಅದು ನನ್ನ ಕಾಲುಗುಣ ಎಂಗಾಯ್ತದ್ಲಾ? ನಾನೊಬ್ನೆನಾ ಓಗಿದ್ದು? ಇಚಾರ ಬೇರೇನೆ ಇದೆ. ಅದಕ್ಕೆ ಈಗ ವಂಟಿರದು ಯಾತ್ರೆ'

'ಥತ್ ನಿನ್ನ, ಮೊನ್ನೆ ಇನ್ನು ಧರ್ಮ ಯಾತ್ರೆ ಕರ್ಮ ಯಾತ್ರೆ ಅಂತ ತಿರುಗ್ದೆ. ಮತ್ತೆಂತ ಯಾತ್ರೆನಲಾ ನಿಮ್ದು?'

'ಜನ ಜಾಗ್ರಣೆ ಯಾತ್ರೆ ಕಣ್ಲಾ ಈಗ ಮಾಡ್ತಿರದು'

'ಅಲ್ಲಪ ಚಿಕ್ಕಣ್ಣ, ಅಧಿಕಾರ ಓಯ್ತು ಅಂತ ನಿಮ್ಮ ಯಡೂರಪ್ಪಂಗೆ ಊಟ ಸೇರಲ್ಲ ನಿದ್ದೆ ಬರಾಕಿಲ್ಲ ಸರಿ. ಆದ್ರೆ ಸಿವರಾತ್ರಿ ಇನ್ನ [illegible] ಲ್ಲೇ ಐತೆ. ಈಗ್ಲೆ ಯಾಕೆ ಜನಗಳಿಗೆ ಜಾಗ್ರಣೆ, ಉಪಾಸ?"

"ಅಂಗಲ್ಲ ಕಣಲಾ ತಮ್ಮ ಜನಗಳಿಗೆ ಎಲ್ಲಾ ಇಚಾರಗಳನ್ನು ಸರಿಯಾಗಿ ತಿಳಿಸಬೇಕು ಅದಕ್ಕೆ ಜಾಗ್ರಣೆ ಅಂತಾರೆ".

"ಅಂಗಂತಿಯಾ? ಜನಗಳಿಗೆ ಏನೂ ಗೊತ್ತೇ ಇಲ್ವಾ?!"

"ಗೊತ್ತಿರ್ತವೆ, ಆದ್ರೆ ಎಲ್ಲಾರೂ ಏಳಿದ್ದೂ ಕೇಳಿರ್ತರಲ್ಲ ಕಣ್‌ಫೂಜ್ ಮಾಡ್ಕಂಡಿರ್ತಾರೆ. ವಸಿ ದೇವ್ರು ದಿಂಡ್ರು, ಮೇಲೆ ಆಣೆ ಪ್ರಮಾಣ ಮಾಡಿ ಏಳಿದ್ರೆ ಜನ ನಾವೇಳಿದ್ದೆ ನಂಬ್ತರೆ".

"ಆಹಹ..., ಅದಿರ್ಲಿ ನಿಮ್ಮ ಯಡೂರಪ್ಪ ಓದ ಕಡೆ ಎಲ್ಲ 'ನನ್ನ ವಂಶ ನಿರ್ವಂಸ ಆಗ್ಲಿ ಅಂತ ಆಕಾಸ ನೋಡಿ ಕೈ ಮುಗುದು ಏಳ್ತರಲ್ಲ, ದೇವ್ರು ಅಂಗೇ ಆಸೀರ್ವಾದ ಮಾಡ್ ಬುಟ್ರೇ?"

"ಥೂ ಬುಡ್ತು ಅನ್ನು, ದ್ಯಾವ್ರು ಅಂಗೆಲ್ಲ ಸುಮ್ ಸುಮ್ನೆ ಕೆಡಕು ಮಾಡಾಕುಲ್ಲ. ಅವ್ರವ್ರು ಮಾಡಿದ್ದು ಅವ್ರವ್ರಿಗೆ ಸರ‍್ಯಾಗಿ ಆಗ್ತವೆ".

"ಅಂಗಾರೆ ನಿಮ್ಮ ಯಡೂರಪ್ಪಂಗೆ ಒಂದು ವಾರಕ್ಕೆ ಮುಕ್ಯಮಂತ್ರಿಗಿರಿ ಓಯ್ತಲ್ಲ, ಏನೋ ಅಳೇ ಕರ್ಮ ಇರ್ಬೇಕು ಅಂತೀಯಾ?"

"ಏ ಸುಮ್ನಿರೋ ತಮ್ಮ, ನೀವು ಏನೇನೋ ಏಳಿ ಕಣ್‌ಫೂಜು ಮಾಡ್ತೀಯಾ, ಯಡೂರಪ್ಪರಿಗೆ ಅಂಗಾಗಿದ್ದು ಮೋಸ ಮಾಡುದ್ರಲ್ಲ ಅದ್ರಿಂದ. ಅದನ್ನೇ ಜಾಗ್ರಣೆ ಮಾಡ್ಬೇಕು ಜನಗಳಿಗೆ, ಮೋಸ ಮಾಡ್‌ದೋರ ಬಗ್ಗೆ ಉಸಾರಾಗಿರಿ ಅಂತ",

"ಅಲ್ಲ ಕಣ್ಲಾ ಚಿಕ್ಕ ಉಸಾರಾಗಿರಬೇಕಾಗಿದ್ದು ಯಾರು? ಜನಗುಳಾ? ಯಡೂರಪ್ಪನಾ?"

"ಏ ಓಗ್ಲಿ ಬುಡ್ಲಾ ನಮ್ಗೇನು ಗೊತ್ತಾಯ್ತದೆ ಯಾವ್ದಾದ್ರೂ 'ಯಾತ್ರೆ' ಅಂದ ಕೂಡ್ಲೆ 'ಜಾತ್ರೆ' ಅನ್ಕಂಡು ಓಗಿ ತಿನ್ಕಂಡು ತಿರ‍್ಗಾಡ್ಕಂಡು ಬತ್ತೀವಿ ಅಷ್ಟೆಯಾ' ಎಂದ ಚೆಡ್ಡಿ ಚಿಕ್ಕ.

"ಓಗ್ಲಿ ನಿಮ್ಮ ಯಡೂರಪ್ಪ ಅವ್ರು ಆಕ್ಕಂಡಿರ ಚೆಡ್ಡಿ ಬಗ್ಗೆ, ಮೊಬೈಲ್ ಬಗ್ಗೆ ಉಸಾರಾಗಿಕ್ಕೇಳು" ಎಂದ ಎಣ್ಣೆ ತಮ್ಮಣ್ಣ.

"ಯಾಕೆ"?

"ಯಾಕೇಂದ್ರೆ, ಅವ್ರಾಕ್ಕಂಡಿರ ಚೆಡ್ಡಿನ ಯಾರಾರು ಮಾಟ ಮಂತ್ರದೋರು ಕಳಚ್ ಕೊಂಡ್ ಓದ್ರೂ ಪಾಪ! ಅವ್ರಿಗೆ ಗೊತ್ತಾಗಕಿಲ್ಲ! ಆ ಮೇಲೆ ಅವ್ರ ಮೊಬೈಲಿಗೇನಾದ್ರು ಕುಮಾರಸಾಮಿದು ಮಿಸ್ ಕಾಲ್ ಬಂದ್ರೆ ಮತ್ತೆ ಅವ್ರ ಬುಡಕ್ಕೆ ಓಗಿ ಬಿದ್ರೆ?! ಅದಕ್ಕೆ ವಸಿ ಉಸಾರಾಗಿರಕ್ಕೇಳು".

– ಶ್ರೀ

ಬಿಜೆಪಿಗೆ ಕರ್ನಾಟಕದ ಬಾಗಿಲು ಮುಚ್ಚಲು ಜೆಡಿ(ಎಸ್) ತಯಾರಿದೆಯೇ?

ಬಿಜೆಪಿಯನ್ನು ಎದುರಿಸಬೇಕೆಂದರೆ ಸೈದ್ಧಾಂತಿಕ ತಿಳುವಳಿಕೆಯ ಜೊತೆಗೇ ಅವರ ಕಾರ್ಯತಂತ್ರದ ಅರಿವು, ಅವರು ಬೆಳೆಯುವುದಕ್ಕೆ ನೀರು, ಗೊಬ್ಬರ ಹಾಕುವ, ನಮ್ಮ ದೇಶದಲ್ಲಿರುವ, ನಮ್ಮ ರಾಜಕೀಯ ಪರಿಸ್ಥಿತಿಯಲ್ಲಿರುವ ಅಂಶಗಳ ಬಗ್ಗೆಯೂ ಗಮನ ಕೊಡಬೇಕು.

ಜಿ.ಎನ್.ನಾಗರಾಜ್

ಯಡಿಯೂರಪ್ಪನವರು ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಮಾಡಿದ ದಿನ ಬೆಂಗಳೂರಿಗೆ ಬಂದಿಳಿದ ಬಿಜೆಪಿಯ ಅಖಿಲ ಭಾರತ ಮುಖಂಡರು, ಇನ್ನೂ ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ತೆರೆಯಿತು ಎಂದು ಘೋಷಿಸಿದರು. ನಾನು ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರದಂತೆ ಮಾಡಿ ಅವರಿಗೆ ದಕ್ಷಿಣ ಭಾರತದ ಬಾಗಿಲು ಮುಚ್ಚಿದ್ದೇನೆ ಎಂದೂ ದೇವೇಗೌಡರು ಲೋಕಸಭೆಯಲ್ಲಿಯೂ ನಂತರ ಜೆಡಿ(ಎಸ್)ನ ಸಮಾವೇಶದಲ್ಲಿಯೂ ಹೇಳಿದ್ದಾರೆ. ದೇವೇಗೌಡರು ಮತ್ತು ಸೆಕ್ಯೂಲರ್ ಎಂಬುದನ್ನು ಹೆಸರಿನಲ್ಲಿಯೇ ಸೇರಿಸಿಕೊಂಡಿರುವ ಅವರ ಪಕ್ಷ ಬಿಜೆಪಿಗೆ ಬಾಗಿಲು ಮುಚ್ಚುವುದು ಎನ್ನುವ ಮಾತಿನ ಅರ್ಥ ಮಾಡಿಕೊಂಡಿದ್ದಾರೆಯೇ? ಅಂತಹುದೊಂದು ಸವಾಲು ಸ್ವೀಕರಿಸಲು ಸಿದ್ದರಿದ್ದಾರೆಯೇ? ಇದು ಕರ್ನಾಟಕದ ಸಾಮಾನ್ಯ ಜನತೆ, ಭಾರತದ ಎಲ್ಲ ಸೆಕ್ಯೂಲರ್ ವಾದದ ಪ್ರೇಮಿಗಳು ಕೇಳಬೇಕಾದ ಪ್ರಶ್ನೆ. ಬಾಗಿಲು ಮುಚ್ಚುವ ಮಾತನಾಡುವವರು ಅದರ ಆಳ, ಉದ್ದ, ಅಗಲವನ್ನು ತಿಳಿದುಕೊಂಡು ಮಾತನಾಡಬೇಕು ತಿಳಿದುಕೊಂಡಿದ್ದಕ್ಕೆ ತಕ್ಕಂತೆ ಆ ಸವಾಲಿಗೆ ಎದೆಯೊಡ್ಡಲು ಸಿದ್ದರಾಗಬೇಕು, ಸನ್ನದ್ಧರಾಗಬೇಕು. ಇದಕ್ಕೆ ದೇವೇಗೌಡರು ಸಿದ್ಧರಿದ್ದಾರೆಯೇ? ಜೆಡಿ(ಎಸ್) ಸಿದ್ಧವಾಗಿದೆಯೇ?

ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಸೆಕ್ಯೂಲರ್ ಎಂದು ಹೆಸರಿಟ್ಟುಕೊಂಡು ಅದರ ಅರ್ಥ ಗೊತ್ತಿಲ್ಲ ಎನ್ನುವ, ಯಾವ ಇಸಮ್ಮೂ (ಯಾವ ವಾದವೂ) ಇಲ್ಲ, ಸಿದ್ಧಾಂತವೇ ಬೇಕಿಲ್ಲ ಎಂದು ಘೋಷಿಸುವುದು, ಕೋಮುವಾದಿಗಳೊಂದಿಗೆ ಜೊತೆಗೂಡಿ ಅಧಿಕಾರ ನಡೆಸುವುದು ಅವರಿಗೆ ಅಧಿಕಾರ ನಡೆಸಲು ಅವಕಾಶ ಮಾಡಿ ಕೊಡುವುದು ಹೇಗೆ ಸಂದರ್ಭ ಸಾಧಕತನವೋ ಹಾಗೆಯೇ ಬಿಜೆಪಿಗೆ ಬಾಗಿಲು ಮುಚ್ಚಿದ್ದೇನೆ ಎನ್ನುವುದೂ ಧೈರ್ಯದ ಮಾತಾಗುವುದಿಲ್ಲ ಹುಂಬತನದ ಮಾತಾಗುತ್ತದೆ ಅಥವಾ ಅಲ್ಪಸಂಖ್ಯಾತರ, ಕೆಳಜಾತಿಗಳವರ ಮತಕ್ಕಾಗಿ ಹೇಳಿದ ಅವಕಾಶವಾದಿ ತಂತ್ರವಾಗುತ್ತದೆ.

ಪ್ರಶ್ನೆಗಳು, ವಿಪುಲ ಪ್ರಶ್ನೆಗಳು

ಬಿಜೆಪಿ ಎಂದರೇನು? ಆರೆಸ್ಸೆಸ್‌ಗೂ ಬಿಜೆಪಿಗೂ ಏನು ಸಂಬಂಧ? ಏಕೆ ಸಂಬಂಧ? ಕೋಮುವಾದ ಎಂದರೇನು? ಸೆಕ್ಯುಲರ್‌ವಾದ ಎಂದರೇನು? ಅವೆರಡರ ನಡುವೆ ವೈರುಧ್ಯವೇಕೆ? ಸೆಕ್ಯುಲರಿಸಂ ಎಲ್ಲಿ ಹೇಗೆ, ಏಕೆ ಹುಟ್ಟಿತು? ನಮ್ಮ ದೇಶ ಏಕೆ ಸೆಕ್ಯುಲರಿಸಂ ಅನ್ನು ಅನುಸರಿಸಬೇಕು? ಪ್ರಜಾಪ್ರಭುತ್ವಕ್ಕೂ ಸೆಕ್ಯೂಲರ್‌ವಾದಕ್ಕೂ ಇರುವ ಕರುಳುಬಳ್ಳಿಯ ಸಂಬಂಧವೇನು? ಬಿಜೆಪಿ ಏಕೆ ಸೆಕ್ಯುಲರ್‌ವಾದವನ್ನು ವಿರೋಧಿಸುತ್ತದೆ? ಕೋಮುವಾದಿ ರಾಜಕಾರಣವನ್ನು ಏಕೆ ಆಯ್ಕೆ ಮಾಡಿಕೊಂಡಿದೆ? ಕೋಮುವಾದಕ್ಕೂ ಅವರು ಭಾಷೆಯ ಬಗೆಗೆ, ಸಮಾಜದ ಬಗ್ಗೆ, ಜಾತಿ ಪದ್ಧತಿಯ ಬಗ್ಗೆ, ಮೀಸಲಾತಿಯ ಬಗ್ಗೆ, ಆರ್ಥಿಕ ನೀತಿಯ ಬಗ್ಗೆ, ತೆಗೆದುಕೊಳ್ಳುವ ನಿಲುವಿಗೂ ಇರುವ ಅಂತರಿಕ ಸಂಬಂಧವೇನು? ಅವರು ಘೋಷಿಸುವ ರಾಷ್ಟ್ರೀಯತೆಯ ಬಗೆಗಿನ ಉಗ್ರ ಪ್ರೇಮಕ್ಕೂ ಅಮೇರಿಕ ಮೊದಲಾದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಡೊಗ್ಗು ಸಲಾಮು ಹೊಡೆಯುವ ವಿರೋಧಾಭಾಸದ ನೀತಿಗೂ ಇರುವ ಸಂಬಂಧವೇನು? ಈ ಎಲ್ಲಾ ನೀತಿಗಳಿಂದ ಭಾರತದ ಶ್ರೀ ಸಾಮಾನ್ಯರ ಮೇಲೆ ಆಗುವ ಪರಿಣಾಮವೇನು?

ಈ ಎಲ್ಲಾ ಪ್ರಶ್ನೆಗಳಿಗೆ ದೇವೇಗೌಡರು ಮತ್ತು ಅವರ ಪಕ್ಷ ಉತ್ತರವನ್ನು ಹುಡುಕಿಕೊಳ್ಳಬೇಕು. ಆಗ ಮಾತ್ರವೇ ಅವರಿಗೆ ಅವರಾಡಿದ ಮಾತಿನ ಆಳ ಗೊತ್ತಾದೀತು. ಮೊದಲಿಗೆ ದೇವೇಗೌಡರು ಮತ್ತು ಅವರ ಉತ್ತರಾಧಿಕಾರಿಗಳಿಂದ ಇಬ್ಬರು ಮಕ್ಕಳಿಗೆ, ಅವರ ಪಕ್ಷದ ನಾಯಕ ಗಣಕ್ಕೆ ಈ ಎಲ್ಲಾ ಪ್ರಶ್ನೆಗಳಿವೆ ಎಂಬುದು, ಕೋಮುವಾದ ಮತ್ತು ಸೆಕ್ಯೂಲರ್‌ವಾದ ಮುಸ್ಲಿಂ ಪರ ಅಥವಾ ವಿರೋಧ ಮಾತ್ರವೇ ಅಲ್ಲ ಎಂದು ಅರ್ಥವಾಗಬೇಕು. ಇಷ್ಟೊಂದು ಪ್ರಶ್ನೆಗಳಿವೆ ಎಂದು ಉತ್ತರ ಹುಡುಕುವ ಕ್ರಿಯೆಯ ಆರಂಭ.

ಮುಸ್ಲಿಮರೊಬ್ಬರನ್ನು ಪಕ್ಷದ ಅಧ್ಯಕ್ಷರನ್ನಾಗಿಸಿಬಿಟ್ಟರೆ ಸೆಕ್ಯುಲರ್ ಆಗಿಬಿಡಬಹುದೇ?



ಹೀಗೆ ಅಪಹಾಸ್ಯಕ್ಕೊಳಗಾಗುತ್ತಿರಲಿಲ್ಲ

ಅವರ ಪಕ್ಷದ ಹೆಸರಾದ ಹೀಗೆ ಸೆಕ್ಯೂಲರ್ ವಾದವನ್ನೂ ಅವರ ಪಕ್ಷದ ನಾಯಕ ಗಣ, ಅವರ ಶಾಸಕರು ಸ್ವಲ್ಪವಾದರೂ ಅರ್ಥಮಾಡಿಕೊಂಡಿದ್ದರೆ ಜನತಾದಳಕ್ಕೆ ಈಗ ಬಂದ ಗತಿ ಬರುತ್ತಿರಲಿಲ್ಲ. ಬೆಳಿಗ್ಗೆ ಬಿಜೆಪಿಯ ಜೊತೆಯಲ್ಲಿ ಮಧ್ಯಾಹ್ನ ಕಾಂಗ್ರೆಸ್ ಜೊತೆಯಲ್ಲಿ ಸಂಜೆ ಆರ್.ಎಸ್.ಎಸ್. ಜೊತೆಯಲ್ಲಿ ಮೈತ್ರಿಗೆ ಮುಂದಾಗುವ ಕುಮಾರಣ್ಣ ಮತ್ತವರಗೆಳೆಯರು ಪಕ್ಷವನ್ನು ಇಡೀ ದೇಶದಲ್ಲಿ ಅಪಹಾಸ್ಯಕ್ಕೆ ಗುರಿ ಮಾಡುವ ಸ್ಥಿತಿ ಬರುತ್ತಿರಲಿಲ್ಲ.

ಏಕೆಂದರೆ ಬಿಜೆಪಿಯವರು ಕರ್ನಾಟಕದಲ್ಲಿ ತಮಗೆ ಇನ್ನೂ ಅಧಿಕಾರದ ಬಾಗಿಲು ತೆರೆದಿಲ್ಲ. ಜೆಡಿ(ಎಸ್)ನವರು ಒಂದು ಕನ್ನಗಿಂಡಿಯನ್ನು ತೆರೆದು ಒಳಗೆ ಬಿಟ್ಟಿಕೊಂಡಿದ್ದಾರೆ ಅಷ್ಟೇ ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದಾರೆ. ಈಗ ವಚನ ಭ್ರಷ್ಟತೆ, ಲಿಂಗಾಯತನೊಬ್ಬನಿಗೆ ಕುರ್ಚಿ ತಪ್ಪಿದ್ದೇ ಬ್ರಹ್ಮಾಸ್ತ್ರವಾಗಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಏಕಪಕ್ಷ ಅಧಿಕಾರ ಸ್ಥಾಪಿಸಲು ನೆರವಾಗಬಹುದೆಂದು ಕೊಂಡಿದ್ದಾರೆ. ಕೇವಲ ಬಿಜೆಪಿಯ ಬೆಂಬಲಿಗರು, ಮತದಾರರು ಮಾತ್ರವಲ್ಲ ಅವರ ಪರಿಧಿಯ ಹೊರಗಿನವರೂ ಕೂಡ ಹಾಗೆ ಭಾವಿಸಿದ್ದಾರೆ. ಹೀಗಾಗಿ ಕರ್ನಾಟಕದಲ್ಲಿ ಬಿಜೆಪಿ ಬಾಗಿಲು ಮುಚ್ಚುವುದೇ ಮುಂದಿನ ಕಾಯಕವಾಗಬೇಕು.

ಅದಕ್ಕಾಗಿ ಜೆಡಿ(ಎಸ್) ನಾಯಕಗಣ ತಾವು ಸೆಕ್ಯೂಲರ್‌ವಾದ ಮತ್ತು ಕೋಮುವಾದಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅದನ್ನು ಪಕ್ಷದ ತಳಮಟ್ಟದ ಕಾರ್ಯಕರ್ತರಿಗೂ ಅರ್ಥ ಮಾಡಿಸಬೇಕು. ಅವರ ಮತದಾರರು ಕೂಡ ಪತ್ರಿಕೆಗಳ ಮಾಧ್ಯಮಗಳ ಮೂಲಕ, ಅವುಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಸಂಘ ಪರಿವಾರದ ಸೈನಿಕರು, ಸೇನಾನಿಗಳು ಮಾಡುವ ಅಪಪ್ರಚಾರ, ಅಬ್ಬರ, ಆರ್ಭಟಗಳಿಗೆ ಬಲಿಬೀಳದೆ ಕೋಮುವಾದದ ವಿರುದ್ಧ, ಸೆಕ್ಯುಲರ್ ವಾದದ ಪರವಾಗಿ ದೃಢವಾಗಿ ನಿಲ್ಲುವಂತಾಗಬೇಕು. ಅದಕ್ಕಾಗಿ ಜೆಡಿ(ಎಸ್) ಒಂದು ಜನಾಂದೋಲನ ಕೈಗೊಳ್ಳಬೇಕು.

ಬಿಜೆಪಿಗೆ ದಕ್ಷಿಣ ಭಾರತದ ಬಾಗಿಲಿರಲಿ ಅವರವರ ರಾಜ್ಯದಲ್ಲಿ ಬಿಜೆಪಿಗೆ ಬಾಗಿಲು ಮುಚ್ಚುವ ಕೆಲಸವನ್ನು ಆಯಾ ರಾಜ್ಯದ ಜನತೆ ಮಾಡಿಕೊಳ್ಳಲಿ. ಕರ್ನಾಟಕದವರು ಕರ್ನಾಟಕದ ಬಾಗಿಲು ಮುಚ್ಚುವ ಕೆಲಸ ಮಾಡೋಣ.

ಬಿಜೆಪಿ ಬೆಳವಣಿಗೆಯ ಕಾರಣಗಳು

ಬಿಜೆಪಿಯನ್ನು ಎದುರಿಸಬೇಕೆಂದರೆ ಸೈದ್ಧಾಂತಿಕ ತಿಳುವಳಿಕೆಯ ಜೊತೆಗೇ ಅವರ ಕಾರ್ಯತಂತ್ರದ ಅರಿವು, ಅವರು ಬೆಳೆಯುವುದಕ್ಕೆ ನೀರು, ಗೊಬ್ಬರ ಹಾಕುವ, ನಮ್ಮ ದೇಶದಲ್ಲಿರುವ, ನಮ್ಮ ರಾಜಕೀಯ ಪರಿಸ್ಥಿತಿಯಲ್ಲಿರುವ ಅಂಶಗಳ ಬಗ್ಗೆಯೂ ಗಮನ ಕೊಡಬೇಕು. ಕರ್ನಾಟಕದಲ್ಲಿ ಬಿಜೆಪಿ ಏಕೆ ಹೇಗೆ ಬೆಳೆಯಿತು ಎಂಬುದನ್ನು ಅನ್ವೇಷಿಸಬೇಕು. ಬಿಜೆಪಿ ಎಂಭತ್ತು ಶಾಸಕ ಸ್ಥಾನಗಳು, 18 ಲೋಕಸಭಾ ಸ್ಥಾನಗಳನ್ನು ಪಡೆದುಕೊಳ್ಳಬೇಕೆಂದರೆ ಅದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಧಾನವಾದ ಕಾರಣ ಕಾಂಗ್ರೆಸ್ ಪಕ್ಷದ ಬಗ್ಗೆ ಜನರಿಗಿರುವ ಅತೃಪ್ತಿ ಮತ್ತು ಕಾಂಗ್ರೆಸ್‌ನ ಆರ್ಥಿಕ ನೀತಿಗಳು ಜನರಿಗೆ ಉಂಟುಮಾಡುತ್ತಿರುವ ಸಂಕಟ, ಅದರಿಂದ ಕಾಂಗ್ರೆಸ್‌ನ ಬಗ್ಗೆ ಜನರಿಗಿರುವ ಸಕಾರಣ ಕೋಪ, ಇದೇ ಜನತಾಪಕ್ಷ ಬೆಳೆಯಲು, 1983ರಲ್ಲಿ ಅಧಿಕಾರಕ್ಕೆ ಬರಲು ಕಾರಣವಾಗಿದ್ದು, ಆದರೆ ಕೆಲಕಾಲ ಜನತಾ ಪಕ್ಷದ ಭಾಗವಾಗಿದ್ದ ಬಿಜೆಪಿ ಕಾಂಗ್ರೆಸ್ ವಿರುದ್ಧದ ಅತೃಪ್ತಿಯನ್ನು ಕಿತ್ತುಕೊಂಡಿತು. ಕಾಂಗ್ರೆಸ್ ವಿರುದ್ಧ ಕೋಪದಿಂದ ಜನ ಬಿಜೆಪಿಗೆ ಮತಹಾಕಿ 80 ಶಾಸಕ ಸ್ಥಾನಗಳನ್ನು ನೀಡಿದ್ದಾರೆ ನಿಜ. ಆದರೆ ಬಿಜೆಪಿಯ ವಿರುದ್ಧ ಅತ್ಯಂತ ಮಹತ್ವದ ಅಸ್ತ್ರವೆಂದರೆ ಇದೇ. ಆರ್ಥಿಕ ನೀತಿ ಕಾಂಗ್ರೆಸ್‌ನ ಆರ್ಥಿಕ ನೀತಿಯಿಂದ ಸಂಕಟಕ್ಕೊಳಗಾಗುವ ಜನ ಬಿಜೆಪಿಗೆ ಮತ ನೀಡುವುದೆಂದರೆ ಬೆಂಕಿಯಿಂದ ಬಾಣಲೆಗೆ ಹಾರಿದಂತೆ ಎಂಬುದು. ಜೆಡಿ(ಎಸ್) ಕೆಲ ವಿಷಯಗಳಲ್ಲಿ ರೈತರಿಗೆ ಸಾಲ ಮನ್ನಾ, ಬಡ್ಡಿದರ ಕಡಿತ, ರೇಷನ್ ವ್ಯವಸ್ಥೆ ಇತ್ಯಾದಿ ಕಾಂಗ್ರೆಸ್‌ಗಿಂತ ಭಿನ್ನ ನೀತಿಯನ್ನು ಅನುಸರಿಸುತ್ತಿದೆ. ಆ ಮೂಲಕ ಆರ್ಥಿಕ ನೀತಿಯೇ ಜನರ ಬದುಕನ್ನು ಅವರ ಮತದಾನವನ್ನು ನಿರ್ಣಯಿಸುವ ಪ್ರಧಾನ ವಿಷಯ ಎಂಬುದನ್ನು ಅರ್ಥ ಮಾಡಿಕೊಂಡಿದೆ. ಬಿಜೆಪಿ ದೇಶವನ್ನಾಳುವಾಗ, ಮತ್ತು ಬಿಜೆಪಿ ಆಳುವ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಆರ್ಥಿಕ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂಬುದನ್ನು ಗಮನಿಸಿದೆ. ನಮ್ಮ ರಾಜ್ಯದಲ್ಲಿ ಬಿಜೆಪಿಯ ಕೈಗೆ ಹಣಕಾಸು ಸಚಿವ ಸ್ಥಾನವನ್ನು ಕೊಟ್ಟಾಗ ಇಂತಹ ನೀತಿಗಳಿಗೆ ಅವರು ಮಾಡಿದ ವಿರೋಧವನ್ನು ಜೆಡಿ(ಎಸ್) ಹತ್ತಿರದಿಂದ ಕಂಡಿದೆ. ಕಾಂಗ್ರೆಸ್ ಹಾಗೂ ಬಿಜೆಪಿಯ ಆರ್ಥಿಕ ನೀತಿಗಳು ಅದನ್ನು ಮರೆಮಾಚುವುದಕ್ಕೆ ಕೋಮುವಾದದ ವೇಶ ಎಂಬುದನ್ನು ಜನರಿಗೆ ವ್ಯಾಪಕವಾಗಿ ಮನವರಿಕೆ ಮಾಡಿಕೊಡಬೇಕಾಗಿದೆ. ಕೋಮುವಾದಿ ಚಟುವಟಿಕೆಗಳ ವಿರುದ್ಧ

ಪುಟ 14ಕ್ಕೆ

ಪರ್ಯಾಯ ಆರ್ಥಿಕ ನೀತಿಗಳು ಎಂಬ ಸವಾಲು

ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ನೀತಿಯ ಬಗ್ಗೆ ಜನರಿಗೆ ಮನವರಿಗೆ ಮಾಡಿಕೊಡಬೇಕೆಂದರೆ ಅದರ ಬಗ್ಗೆ ವ್ಯಾಪಕ ಪ್ರಚಾರಾಂದೋಲನ ಕೈಗೊಳ್ಳಬೇಕು. ಆದರೆ ಅಷ್ಟೇ ಸಾಲದು. ಜೆಡಿ(ಎಸ್) ಕೇವಲ ಕೆಲ ನೀತಿಗಳಲ್ಲಿ ಮಾತ್ರ ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಭಿನ್ನವಾಗಿದ್ದರೆ ಸಾಲದು ಪಕ್ಷಗಳ ಆರ್ಥಿಕ ನೀತಿಗಳಿಗೆ ಪರ್ಯಾಯವಾದ ಒಂದು ಸಮಗ್ರ ಆರ್ಥಿಕ ನೀತಿಯನ್ನು ಅಳವಡಿಸಿಕೊಳ್ಳಬೇಕು ಹಾಗೂ ಪಾಲಿಸಬೇಕು. ಇಡೀ ಭಾರತದಲ್ಲಿ ಎಲ್ಲಾ ಪಕ್ಷಗಳೂ ಕೂಡ ಅಧಿಕಾರಕ್ಕೆ ಬಂದ ಕೂಡಲೇ ಸೋಲನ್ನನುಭವಿಸುವುದು. Anti Incumbency ಎಂಬ ರೋಗಕ್ಕೆ ಬಲಿಯಾಗಿರುವಾಗ ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ 25-30 ವರ್ಷಗಳ ಕಾಲ ನಿರಂತರ ಗೆಲುವು ಸಾಧ್ಯವಾಗಿದ್ದೇ ಪರ್ಯಾಯ ನೀತಿಗಳಿಂದಾಗಿ, ಪರ್ಯಾಯ ಆರ್ಥಿಕ ನೀತಿಗಳಿಂದಾಗಿ, ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಬಿಜೆಪಿ ಒಂದು ಶಾಸಕ ಸ್ಥಾನವನ್ನು ಪಡೆಯಲು ಸಾಧ್ಯವಾಗಿಲ್ಲ ಎಂಬುದು ಈ ಕಾರಣಕ್ಕಾಗಿಯೇ. ಹೀಗೆ ಪರ್ಯಾಯ ನೀತಿಗಳನ್ನು ಅಳವಡಿಸಿಕೊಂಡಾಗ ಅನುಸರಿಸಿದಾಗ, ಜನರಿಗೆ ಮನವರಿಕೆ ಮಾಡಿಕೊಟ್ಟಾಗ ಮಾತ್ರ ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿಯೇ ಪರ್ಯಾಯ ಎಂದು ಬಿಂಬಿಸುವುದನ್ನು ತಪ್ಪಿಸುವುದು ಸಾಧ್ಯ. ಬಿಜೆಪಿಗೆ ಬಾಗಿಲು ಮುಚ್ಚುವುದು ಸಾಧ್ಯ. ಹೀಗೆ ಪರ್ಯಾಯ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುವುದು ಎಂದರೇನು? ಹೇಗೆ? ಯಾವ ನೀತಿಗಳು ಹೇಗೆ ಜನರ ಜೀವನ ಮೇಲೆ ಪರಿಣಾಮ ಉಂಟು ಮಾಡುತ್ತದೆ ಎಂಬ ಪ್ರಶ್ನೆಗಳನ್ನು ಜೆಡಿ(ಎಸ್) ಅಗ್ರನಾಯಕರು, ಅಗ್ರರಲ್ಲದ ನಾಯಕರು ಕೇಳಿಕೊಳ್ಳಬೇಕು. ಕರ್ನಾಟಕದ ಜನರ ಪರಿಸ್ಥಿತಿಗನುಗುಣವಾಗಿ ಉತ್ತರ ಹುಡುಕಿಕೊಳ್ಳಬೇಕು. ಇಂತಹ ಸವಾಲನ್ನು ಜೆಡಿ(ಎಸ್) ನಾಯಕತ್ವ ಸ್ವೀಕರಿಸಲು ಸಿದ್ಧವಿದೆಯೇ?

ಬಿಪಿಎಲ್ ಕಾರ್ಮಿಕ ಮುಖಂಡರಿಗೆ ನ್ಯಾಯ ದೊರೆತಿಲ್ಲ

ಕರ್ನಾಟಕದಲ್ಲಿ ಬಿಪಿಎಲ್ ಮೊಕದ್ದಮೆಗೆ ಒಂದು ವಿಶಿಷ್ಠತೆಯಿದೆ. ನಾವು ಇತ್ತೀಚೆಗೆ ನ್ಯಾಯ ದೊರೆಯದಿರುವುದನ್ನು ವಿರೋಧಿಸಲು ಮಾಧ್ಯಮಗಳಿಂದ ವಿಚಾರಣೆಯ ಹಲವು ಉದಾಹರಣೆಗಳನ್ನು ನೋಡಿದ್ದೇವೆ. ಈಗ ಬಿಪಿಎಲ್ ನ ಹನ್ನೆರಡು ಕಾರ್ಮಿಕ ಮುಖಂಡರ ವಿಷಯದಲ್ಲಿಯೂ ನ್ಯಾಯ ದೊರೆತಿಲ್ಲ ಎಂಬುದು ಸ್ಪಷ್ಟ. ಬಿಪಿಎಲ್ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿದ ಅಪರಾಧಕ್ಕೆ ಸಿಐಟಿಯು ಮುಖಂಡರು ಜೀವಾವಧಿ ಶಿಕ್ಷೆ ಅನುಭವಿಸುವಂತೆ ಮಾಡಲಾಗಿದೆ. ಅವರ ನೆರವಿಗೆ ದುಡಿವ ಜನ ಬಂದು ಬಿಪಿಎಲ್ ಆಡಳಿತದ ಹೊಲಸು ವ್ಯವಹಾರಗಳನ್ನು ಮತ್ತು ಅವರ ಈ ದುಷ್ಟ ಚಟುವಟಿಕೆಗಳಲ್ಲಿ ಅವರು ಹೇಳಿದಂತೆ ಕೇಳಲು ತಕ್ಷಣವೇ ಸಿದ್ಧವಾದ ಅಧಿಕಾರಶಾಹಿಗಳನ್ನು ಬಯಲಿಗೆಳೆಯಬೇಕಾಗಿದೆ ಎನ್ನುತ್ತಾರೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ವಿ ಜೆ ಕೆ ನಾಯರ್.

ಕರ್ನಾಟಕ ಉಚ್ಚ ನ್ಯಾಯಾಲಯ ಇತ್ತೀಚೆಗೆ ಆರ್.ಶ್ರೀನಿವಾಸ್, ಟಿ ಕೆ ಎಸ್ ಕುಟ್ಟಿ (ಬಿಪಿಎಲ್ ನೌಕರರ ಸಂಘದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ) ಮತ್ತು ಇತರ ಐದು ಕಾರ್ಮಿಕ ಮುಖಂಡರು-ಧರಣೇಶ್, ಶರತ್, ರಮೇಶ್, ರವಿನಂದನ್ ಮತ್ತು ಜಗದೀಶ್ ಇವರಿಗೆ ವಿಧಿಸಿದ ಜೀವಾವಧಿ ಶಿಕ್ಷೆಯನ್ನು ಎತ್ತಿ ಹಿಡಿದಿದೆ. 1999ರಿಂದ ಜೈಲುವಾಸದಲ್ಲಿರುವ ಈ 7 ಸಂಗಾತಿಗಳಿಗಲ್ಲದೆ ಈ ಹಿಂದೆ ಖುಲಾಸೆಯಾಗಿದ್ದ 5 ಸಂಗಾತಿಗಳಿಗೂ ಈಗ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಅವರೆಂದರೆ ಬಾಬು, ನಾಗರಾಜ್, ಮಹೇಶ್, ಎಡ್ವಿನ್ ಮತ್ತು ಭರತ್. ಬಸ್ ಬೆಂಕಿ ಪ್ರಕರಣದಲ್ಲಿ 37 ಕಾರ್ಯಕರ್ತರ ವಿಚಾರಣೆ ನಡೆಸಿದ್ದ ಸೆಶನ್ಸ್ ನ್ಯಾಯಾಲಯ ಈ ಹಿಂದೆ ಅಕ್ಟೋಬರ್ 2003ರಲ್ಲಿ ಮೂವತ್ತು ಮಂದಿಯನ್ನು ಖುಲಾಸೆಗೊಳಿಸಿತ್ತು. ಜೀವಾವಧಿ ಶಿಕ್ಷೆಗೊಳಗಾದ ಏಳು ಸಂಗಾತಿಗಳು ವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಅಪೀಲು ಹೋಗಿದ್ದರು. ಇದು ಉಚ್ಚ ನ್ಯಾಯಾಲಯದ ಮುಂದೆ ಇತ್ತು. ರಾಜ್ಯ ಸರಕಾರವೂ ಖುಲಾಸೆಯಾದವರನ್ನು ಶಿಕ್ಷೆಗೊಳಪಡಿಸಬೇಕು ಹಾಗೂ ಜೀವಾವಧಿ ಶಿಕ್ಷೆಯಾದ ಏಳು ಮಂದಿಗೆ ಮರಣದಂಡನೆ ವಿಧಿಸಬೇಕು ಎಂದು ಪ್ರಾರ್ಥಿಸಿ ಅಪೀಲು ಹೋಗಿತ್ತು. ಈ ಅಪೀಲು ಮತ್ತು ಪ್ರತಿಅಪೀಲು ಇವೆರಡನ್ನೂ ಕಳೆದ ನಾಲ್ಕು ವರ್ಷಗಳಿಂದ ಹೈಕೋರ್ಟಿನ ಹಲವು ಪೀಠಗಳು ವಿಚಾರಣೆ ನಡೆಸಿದ ನಂತರ ಅಂತಿಮವಾಗಿ ಈ ತಿಂಗಳು ಏಳರ ಬದಲಿಗೆ ಹನ್ನೆರಡು ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಈ 37 ಮಂದಿಯ ಮೇಲಿದ್ದ ಆರೋಪವೆಂದರೆ 25 ಮಾರ್ಚ್ 1999ರಂದು ಆನೆಪಾಳ್ಯದ ಬಳಿ ಬಿಪಿಎಲ್ ಇಂಜಿನಿಯರಿಂಗ್ ಲಿ. ನ ಕಾರ್ಮಿಕರನ್ನು ಒಯ್ಯುತ್ತಿದ್ದ ಒಂದು ಬಸ್ಸಿಗೆ ಇವರು ಬೆಂಕಿ ಹಾಕಿದರು ಮತ್ತು ಹಲವು ಮಹಿಳಾ ಕಾರ್ಮಿಕರಿಗೆ ಸುಟ್ಟ ಗಾಯಗಳಾದವು ಹಾಗೂ ನಾಗರತ್ನ ಮತ್ತು ಸಿನಿಜ ಎಂಬ ಇಬ್ಬರು ಮಹಿಳಾ ಕಾರ್ಮಿಕರು ನಂತರ ಸತ್ತರು. ಹೊರಗಡೆಯ ಮುಖಂಡರಾದ ಆರ್. ಶ್ರೀನಿವಾಸ್ ಮತ್ತು ಟಿಕೆಎಸ್. ಕುಟ್ಟಿ ಬಿಟ್ಟು 25 ಮಾರ್ಚ್ 1999ರಂದು ಬಂಧಿಸಲ್ಪಟ್ಟ ಉಳಿದ ಎಲ್ಲಾ 35 ಮಂದಿ ಕಾರ್ಮಿಕರು. 37ರಲ್ಲಿ 27 ಕಾರ್ಮಿಕರು ವಿಧಾನ ಸೌಧದ ಬಳಿ ಕೆ.ಆರ್. ಸರ್ಕಲ್‌ನಲ್ಲಿ ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರ ನಡೆಸುತ್ತಿದ್ದರು. 27 ಮಂದಿ ಕೆ.ಆರ್. ಸರ್ಕಲ್ ನಲ್ಲಿ 22 ಮಾರ್ಚ್ 1999ರಿಂದ(10.30ರಿಂದ) 25 ಮಾರ್ಚ್ 1999ರಂದು ಅವರನ್ನು ಬಂಧಿಸಿ ಆಸ್ಪತ್ರೆಗೆ ಸೇರಿಸುವ ವರೆಗೆ ಅನಿರ್ದಿಷ್ಟ ಕಾಲದ ಮುಷ್ಕರದಲ್ಲಿದ್ದರು ಎಂಬುದು ವಿಚಾರಣಾ ನ್ಯಾಯಾಲಯದಲ್ಲಿ ಸಾಬೀತಾಗಿತ್ತು. ಆದರೂ 27 ರಲ್ಲಿ ಇಬ್ಬರಿಗೆ ಅಂದರೆ ರವೀಂದ್ರ ಮತ್ತು ಜಗದೀಶ್‌ಗೆ ವಿಚಾರಣಾ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿತು. ಈಗ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದ 5 ಮಂದಿ, ಬಾಬು, ನಾಗರಾಜ್, ಮಹೇಶ್ , ಎಡ್ವಿನ್ ಮತ್ತು ಭರತ್ ಕೂಡಾ 22 ಮಾರ್ಚ್‌ನಿಂದ ಉಪವಾಸ ಮುಷ್ಕರದಲ್ಲಿದ್ದರು. ಹೀಗೆ ಈ ಏಳು ಮಂದಿ ಕೆ. ಆರ್. ಸರ್ಕಲ್‌ನಲ್ಲಿ ಸಾರ್ವನಿಕರ ಎದುರು, ಅಲ್ಲದೆ ಪೋಲೀಸರ ಎದುರು ಉಪವಾಸ ಮುಷ್ಕರದಲ್ಲಿದ್ದರು ಎಂದು ವಿಚಾರಣಾ ನ್ಯಾಯಾಲಯದಲ್ಲಿ ಸಾಬೀತಾಗಿರುವಾಗ ಅವರನ್ನು ಎಷ್ಟೋ ದೂರದಲ್ಲಿರುವ ಒಂದು ಸ್ಥಳದಲ್ಲಿ ಸಂಭವಿಸಿದ ಒಂದು ಅಪರಾಧದಲ್ಲಿ ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿರಲಿಲ್ಲ.

ಕಾರ್ಮಿಕ ಸಂಘ ತಡೆಯುವ ಧೋರಣೆ

ಬೆಂಗಳೂರಿನಲ್ಲಿ ಬಿಪಿಎಲ್ ಆರಂಭವಾದಂದಿನಿಂದಲೂ ಆಡಳಿತ ವರ್ಗ ಯಾವುದೇ ಕಾರ್ಮಿಕ ಸಂಘ ಅಲ್ಲಿ ಬರದಂತೆ ತಡೆಯುವ ಧೋರಣೆ ಅನುಸರಿಸಿಕೊಂಡು ಬಂತು. ಶಾಂತಿನಗರದ ಡಬ್ಬಲ್ ರೋಡಿನಲ್ಲಿದ್ದ ಒಂದು ಬಾಡಿಗೆ ಕಟ್ಟಡದಲ್ಲಿ ಆರಂಭವಾದ ಈ ಕಂಪನಿ ಬೆಂಗಳೂರಿನಲ್ಲಿ ಮೂವತ್ತು ವರ್ಷಗಳ ಕಾಲ ಬೆಳೆಯಿತು. ಪಾಲ್ಘಾಟ್‌ನಲ್ಲಿ ಹೋರಾಟ ನಡೆಸಿದ್ದಕ್ಕಾಗಿ ವರ್ಗಾಯಿಸಲ್ಪಟ್ಟ ಕಾರ್ಮಿಕರನ್ನು ಎಪ್ಪತ್ತರ ದಶಕದಲ್ಲಿ ಬಲಿ ಹಾಕಲಾಯಿತು. ಮೆಲ್ಲನೇ ಈ ಕಂಪನಿ ಬಳಕೆದಾರ ಇಲೆಕ್ಟ್ರಾನಿಕ್ಸ್ ರಂಗದಲ್ಲಿ ತಳವೂರಿತು. ಅದು ಟೆಲಿವಿಶನ್ ಸೆಟ್‌ಗಳು ಮತ್ತು ರೆಫ್ರಿಜರೇಟರ್‌ಗಳು ಇತ್ಯಾದಿಗಳನ್ನು ಉತ್ಪಾದಿಸಲಾರಂಭಿಸಿತು. 1998ರಲ್ಲಿ ಯೂನಿಯನ್‌ನ್ನು ಸಂಘಟಿಸುವ ವೇಳೆಗೆ ಕಂಪನಿಯ ವಾರ್ಷಿಕ ವ್ಯವಹಾರಗಳ ಮೊತ್ತ 5000 ಕೋಟಿ ದಾಟಿತ್ತು. ಶಾಂತಿನಗರದ ಘಟಕವಲ್ಲದೆ ಬೆಂಗಳೂರಿನ ಸುತ್ತಮುತ್ತಲೆಲ್ಲಾ, ತುಮಕೂರು ರಸ್ತೆ, ಮೈಸೂರು ರಸ್ತೆ(ಎರಡೂ ಬೆಂಗಳೂರು ಜಿಲ್ಲೆಗಳ ಹೊರಗೆ), ಹಳೆ ಮದ್ರಾಸ್ ರಸ್ತೆ, ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆಯಲ್ಲಿ ಫ್ಯಾಕ್ಟರಿಗಳು ಸ್ಥಾಪನೆಗೊಂಡವು. ಬಿಪಿಎಲ್ ಕಚೇರಿಗಳು ಬೆಂಗಳೂರಿನಲ್ಲೆಲ್ಲ, ಮಹಾತ್ಮಾ ಗಾಂಧಿ ರಸ್ತೆ ಬಳಿ(ಚರ್ಚ್ ರಸ್ತೆ), ಕಸ್ತೂರಿಬಾ ರಸ್ತೆ, ಅರಮನೆ ರಸ್ತೆ , ರಿಚ್‌ಮಂಡ್ ರಸ್ತೆ ಇತ್ಯಾದಿ ಕಡೆಗಳಲ್ಲಿ ಹರಡಿದವು.

ತೀವ್ರ ಶೋಷಣೆ


ಕಂಪನಿ ಬೆಳೆದದ್ದು ಮುಖ್ಯವಾಗಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಯುವ ಮಹಿಳಾ ಕಾರ್ಮಿಕರ ಮತ್ತು ಇತರ ಯುವಜನರ ತೀವ್ರ ಶೋಷಣೆಯಿಂದ. 1998ರಲ್ಲಿ ಯೂನಿಯನನ್ನು ಸಂಘಟಿಸುವ ವೇಳೆಗೆ ಬೆಂಗಳೂರಿನಾದ್ಯಂತ ವಿವಿಧೆಡೆಗಳಲ್ಲಿ ಸುಮಾರು 8000 ಕಾರ್ಮಿಕರು ಇದ್ದರು. ಅಲ್ಲಿನ ಆಡಳಿತ ವರ್ಗ ಅನುಸರಿಸುತ್ತಿದ್ದ ಒಂದು ಧೋರಣೆಯೆಂದರೆ ಒಂದು ಪ್ರದೇಶದಲ್ಲಿ ಕಾರ್ಮಿಕರನ್ನು ಭರ್ತಿ ಮಾಡಿಕೊಂಡು ಅವರನ್ನೆಲ್ಲ ದೂರದ ಒಂದು ಸ್ಥಳದಲ್ಲಿ ದುಡಿಸಿಕೊಳ್ಳುವುದು. ಅಂತಹ ಕಾರ್ಖಾನೆಯ ಸುತ್ತಮುತ್ತಲಿಂದ ಯಾವ ಕಾರ್ಮಿಕನನ್ನೂ ಅಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲ. ಕಾರ್ಮಿಕರನ್ನು ಓರಿಯೆಂಟಲ್ ಟ್ರಾನ್ಸ್‌ಪೋರ್ಟ್ ಎಂಬ ಕಂಪನಿ ಬಸ್ಸುಗಳಲ್ಲಿ ತಂದು ಕಾರ್ಖಾನೆಯ ಒಳಗೇ ಒಯ್ಯಲಾಗುತ್ತಿತ್ತು. ಕಾರ್ಖಾನೆ ದ್ವಾರದ ಬಳಿ ಅವರು ಸೇರಲು ಅವಕಾಶವನ್ನೆ ಕೊಡುತ್ತಿರಲಿಲ್ಲ.

ಮದುವೆಯಾದರೆ ಮಹಿಳೆಗೆ ರಾತ್ರಿ ಪಾಳಿ

ಯುವ ಮಹಿಳಾ ಕಾರ್ಮಿಕರಿಗೆ ಮದುವೆಯಾಯಿತೆಂದರೆ ಅವರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಹಚ್ಚಲಾಗುತ್ತಿತ್ತು. ವಿವಾಹಿತ ಹುಡುಗಿ ಗರ್ಭಿಣಿಯಾದಾಗ ಆಕೆಯನ್ನು ಯಾವಾಗಲೂ ನಿಂತೇ ಮಾಡಬೇಕಾದ ಕೆಲಸಕ್ಕೆ ಹಚ್ಚಲಾಗುತ್ತಿತ್ತು. ಇದರ ಹಿಂದಿದ್ದ ವಿಚಾರವೆಂದರೆ ಮಹಿಳಾ ಕಾರ್ಮಿಕರಿಗೆ ಕಿರುಕುಳ ಕೊಟ್ಟು ಮದುವೆಯಾದಾಗ ಮತ್ತು ಮಕ್ಕಳಾಗುವ ಸಂದರ್ಭದಲ್ಲಿ ಅವರು ಕೆಲಸ ಬಿಟ್ಟು ಹೋಗುವಂತೆ ಮಾಡುವುದು. ಕಾರ್ಖಾನೆ ಕಾನೂನಿನಲ್ಲಿ ಶಿಶುಪಾಲನಾ ಸೌಲಭ್ಯಗಳನ್ನು ಒದಗಿಸಿ ಮಹಿಳಾ ಕಾರ್ಮಿಕರು ತಮ್ಮ ಚಿಕ್ಕ ಮಕ್ಕಳನ್ನು ತಂದು ಅಲ್ಲಿ ನೋಡಿಕೊಳ್ಳುವಂತಾಗಬೇಕು ಎಂದಿದ್ದರೂ ಇಂತಹ ಯಾವ ಸೌಲಭ್ಯವನ್ನೂ ಒದಗಿಸಿರಲಿಲ್ಲ. ಯೂನಿಯನ್ ರಚಿಸುವ ವೇಳೆಗೆ ಕಾರ್ಮಿಕರ ಕೂಲಿಗಳು ಕನಿಷ್ಟ ಕೂಲಿಗಿಂತಲೂ ಕಡಿಮೆಯಿತ್ತು. ಸುಮಾರು 50 ಕಾರ್ಮಿಕರನ್ನು ಟ್ರೈನೀಗಳೆಂದು ಪರಿಗಣಿಸಲಾಗಿತ್ತು. ಯೂನಿಯನ್ ಆರಂಭವಾದ ಮೇಲೆ ಆಡಳಿತ ವರ್ಗ ಒಂದು ಸಾವಿರಕ್ಕೂ ಹೆಚ್ಚು ಟ್ರೈನಿಗಳು ಮತ್ತು ಇತರರು ಕೆಲಸ ಮಾಡದಂತೆ ನಿಲ್ಲಿಸಿತು.

ಮುಷ್ಕರದ ಕರೆ

ಯೂನಿಯನ್ 19 ನವಂಬರ್ 1998ರಿಂದ ಒಂದು ಮುಷ್ಕರಕ್ಕೆ ಕರೆ ನೀಡಿತು. ಆಡಳಿತ ವರ್ಗವು ಯೂನಿಯನ್ ಇಡೀ ಬಿಪಿಎಲ್ ಗುಂಪಿಗೆ ರಚಿಸಿದ್ದೆಂದು ನೆಪ ಹೂಡಿ ಅದರೊಂದಿಗೆ ಮಾತುಕತೆ ನಡೆಸಲು ನಿರಾಕರಿಸಿತು. ಆಗಿದ್ದ ಕಾರ್ಮಿಕ ಆಯುಕ್ತ ಶ್ರೀ ವಳ್ಳತ್ತರೈ ಬಿಪಿಎಲ್ ಗ್ರೂಪ್ ಯೂನಿಯನ್‌ನ ರಿಜಿಸ್ಟ್ರೇಶನ್ ಒಪ್ಪತಕ್ಕುದಲ್ಲ ಎಂದು ಒಂದು ಷರಾ ಕೊಟ್ಟರು. ಇದು ಸ್ಪಷ್ಟವಾಗಿಯೂ ಒಂದು ಕಾನೂನುಬಾಹಿರ ನಿಲುವಾಗಿತ್ತು. ಯೂನಿಯನ್ ತನ್ನ ಸಂವಿಧಾನವನ್ನು ತಿದ್ದುಪಡಿ ಮಾಡಿ ಅದನ್ನು ಕರ್ನಾಟಕಕ್ಕೆ ಸೀಮಿತಗೊಳಿಸಿದರೂ ಮಾಲಕರು ಸಂಧಾನ ಮಾತುಕತೆಗಳ ಸಭೆಗಳಿಗೆ ಹಾಜರಾಗಲಿಲ್ಲ. ಯೂನಿಯನ್ ಎಲ್ಲ ಕಾರ್ಖಾನೆಗಳಲ್ಲಿ ಮುಷ್ಕರವನ್ನು ಕಾದುಕೊಳ್ಳಲು ಬಹಳ ಕಷ್ಟಪಡಬೇಕಾಯಿತು. ನಿರಂತರವಾಗಿ ಪೋಲೀಸ್ ಒತ್ತಡಗಳನ್ನು ಎದುರಿಸ ಬೇಕಾಯಿತು. ಈ ನಡುವೆ ಯೂನಿಯನ್ ನ್ಯಾಯಾಲಯ ದಿಂದ ಸಂಘದ ರಿಜಿಸ್ಟ್ರೇಶನ್ ಪರವಾಗಿ ಆದೇಶ ತಂದಿತು. ಇದು ಆಡಳಿತ ವರ್ಗ ಮತ್ತು ಕಾರ್ಮಿಕ ಆಯುಕ್ತರ ನಿಲುವಿಗೆ ವಿರುದ್ಧವಾದ ಆದೇಶ. ಆಗ ಅಧಿಕಾರದಲ್ಲಿದ್ದ ಜೆ.ಹೆಚ್.ಪಟೇಲ್ ಮಂತ್ರಿ ಮಂಡಳಕ್ಕೆ ಅಧಿಕಾರಶಾಹಿಯ ಮೇಲೆ ಯಾವ ಹತೋಟಿಯೂ ಇರಲಿಲ್ಲ. ಅಧಿಕಾರಶಾಹಿಗಳೇ ಸರಕಾರಕ್ಕೆ ನಿರ್ದೇಶನ ಕೊಡುವಂತಾಗಿತ್ತು.



ಆರ್. ಶ್ರೀನಿವಾಸ್

ಯೂನಿಯನ್ ಸಾರ್ವಜನಿಕರ ಗಮನ ಸೆಳೆಯಲು ಸತತವಾಗಿ ಚಟುವಟಿಕೆಗಳಲ್ಲಿ ತೊಡಗಿತ್ತು. ಮುಷ್ಕರನಿರತ ಕಾರ್ಮಿಕರು ಬೃಹತ್ ಪ್ರಮಾಣದಲ್ಲಿ ನಗರದಲ್ಲೆಲ್ಲ ಹರಡಿದ್ದು ಅವರ ಸಂಪರ್ಕಗಳಿಂದಾಗಿ ರಾಜಕೀಯದಲ್ಲಿ ಎಲ್ಲೆಡೆಗಳಿಂದ ಬೆಂಬಲ ದೊರೆಯಿತು. ಸರಿಯಾದ ಕಾರ್ಮಿಕ ವರ್ಗದ ಕಣ್ಣೋಟವಿಲ್ಲದ ಹಲವು ಸಂಘಟನೆಗಳು ಚಳುವಳಿಯ ಒಳಗೆ ತೂರಿಕೊಂಡವು. ಯೂನಿಯನ್ ಮೇಲಿನ ಒತ್ತಡದಿಂದಾಗಿ ಕಾರ್ಮಿಕರು ಹೊರಗಿನ ಶಕ್ತಿಗಳ ಸಲಹೆಗಳನ್ನು ಅನುಸರಿಸುವಂತಾಯಿತು.

ಸಿಐಟಿಯು ಮುಖಂಡತ್ವ ಒಂದು ರೀತಿಯ ಪರಿಹಾರ ತರಲು ಮಧ್ಯಪ್ರವೇಶಿಸಿತು. ಸಿಐಟಿಯು ಅಧ್ಯಕ್ಷ ಸೂರ್ಯನಾರಾಯಣ ರಾವ್ ರವರ ಮನವಿಯ ಆಧಾರದಲ್ಲಿ ಕಾರ್ಮಿಕ ಮಂತ್ರಿ ಶ್ರೀ ಸಿದ್ಧರಾಮಯ್ಯನವರು ಈ ಪ್ರಶ್ನೆಗಳನ್ನು ನ್ಯಾಯಪಂಚಾಯ್ತಿಗೆ ಕಳಿಸಿ ಸೆಕ್ಷನ್ 10ಬಿ ಪ್ರಕಾರ ಒಂದು ಆದೇಶ ಹೊರಡಿಸುವಂತಾಯಿತು. ಇದರಿಂದ ಕಾರ್ಮಿಕರಿಗೆ ಕೆಲವು ಪರಿಹಾರಗಳು ದೊರೆತವು. ದುರದೃಷ್ಟವಶಾತ್, ಇದರಿಂದ ಕಾರ್ಮಿಕರು ತೃಪ್ತರಾಗಲಿಲ್ಲ, ಮುಷ್ಕರವನ್ನು ಸುಮಾರು ಒಂದು ತಿಂಗಳ ಕಾಲ ಹಿಂತೆಗೆದುಕೊಳ್ಳಲಾಗಲಿಲ್ಲ. ಈ ನಡುವೆ ಮುಖ್ಯ ಮಂತ್ರಿಗಳು ತಕ್ಷಣವೇ ಶ್ರೀ ಸಿದ್ಧರಾಮಯ್ಯನವರಿಂದ ಕಾರ್ಮಿಕ ಇಲಾಖೆಯನ್ನು ಕಿತ್ತುಕೊಂಡು, ಇದಕ್ಕೆ ಸಂಬಂಧಪಟ್ಟ ಕಡತಗಳನ್ನು ತರಿಸಿಕೊಂಡು ನಿರ್ಣಯಗಳನ್ನು ಕೈಗೊಂಡರು. ಇದು ಮುಂದೆ ಒಂದು ಹೈಕೋರ್ಟ್ ತೀರ್ಪಿನಲ್ಲಿ ಬಯಲಾಯಿತು. ಈ ನಡುವೆ ಕೆಲವು ದುಷ್ಕರ್ಮಿಗಳು ಹೊಸೂರು ರಸ್ತೆಯಲ್ಲಿ ಆನೆಪಾಳ್ಯದ ಬಳಿ ಬಿಪಿಎಲ್ ಇಂಜಿನಿಯರಿಂಗ್ ಘಟಕದ ಮಹಿಳಾ ಕಾರ್ಮಿಕರನ್ನು ಒಯ್ಯುತ್ತಿದ್ದ ಒಂದು ಬಸ್ಸಿಗೆ ಬೆಂಕಿ ಹಚ್ಚಿದ್ದರು. ಸಿಐಟಿಯು ತಕ್ಷಣವೇ ಇದನ್ನು ಖಂಡಿಸಿತು. ಆದರೆ ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ಪೋಲೀಸರು ದುಷ್ಕರ್ಮಿಗಳ ಈ ದೂಷಣೀಯ ಕೃತ್ಯವನ್ನು ಬಳಸಿಕೊಂಡು ಸಂಘದ ಮುಖಂಡರನ್ನು ಅಂದರೆ ಅಧ್ಯಕ್ಷರಾದ ಆರ್. ಶ್ರೀನಿವಾಸ್ ಮತ್ತು ಪ್ರಧಾನ ಕಾರ್ಯದರ್ಶಿ ಟಿಕೆಎಸ್ ಕುಟ್ಟಿಯವರನ್ನು ಬಂಧಿಸಿದರು. ಅಲ್ಲದೆ ಕೆ. ಆರ್ .ಸರ್ಕಲ್‌ನಲ್ಲಿ ಅನಿರ್ದಿಷ್ಟ ಉಪವಾಸ ಮುಷ್ಕರದಲ್ಲಿದ್ದ ಎಲ್ಲ 27 ಕಾರ್ಮಿಕರನ್ನು ಬಂಧಿಸಿ ಹೆಚ್ಚಿನವರ ಮೇಲೆ ಕೊಲೆ ಪ್ರಯತ್ನದ ಆರೋಪ ಹೊರಿಸಿದರು.

ಬಸ್ಸಿಗೆ ಬೆಂಕಿ ಹಚ್ಚಿದ್ದರಿಂದ ಸುಟ್ಟ ಗಾಯಗಳಾದ ಕೆಲವು ಮಹಿಳಾ ಕಾರ್ಮಿಕರನ್ನು ಪೋಲೀಸರು ಮೊದಲು ಸ್ಪೆಂಟ್ ಜಾನ್ ಆಸ್ಪತ್ರೆಗೆ ಒಯ್ದರು. ನಂತರ ಅವರನ್ನು ಬೌರಿಂಗ್ ಮತ್ತು ವಿಕ್ಟೋರಿಯ ಆಸ್ಪತ್ರೆಗೆ ಒಯ್ಯಲಾಯಿತು. ಗಾಯಗೊಂಡ ಮಹಿಳೆಯರು ಈ ಎಲ್ಲಾ ಆಸ್ಪತ್ರೆಗಳಲ್ಲಿ ಬಸ್ಸನ್ನು ಸುಟ್ಟವರು ಅಪರಿಚಿತ ವ್ಯಕ್ತಿಗಳು ಎಂದು ಹೇಳಿಕೆ ನೀಡಿದ್ದರು. ನಂತರ ಅವರನ್ನು ಒಂದು ಖಾಸಗಿ ಆಸ್ಪತ್ರೆಯಾದ ಡಿಜಿ ಹಾಸ್ಪಿಟಲ್‌ಗೆ ವರ್ಗಾಯಿಸಲಾಯಿತು. ಅಲ್ಲಿಯೂ ಆರಂಭದಲ್ಲಿ ಬಸ್ಸಿಗೆ ಬೆಂಕಿ ಹಚ್ಚಿದವರು ಯಾರು ಎಂದು ತಮಗೆ ತಿಳಿದಿಲ್ಲ ಎಂದು ಅವರು ಹೇಳಿದರು. ಬೆಂಕಿಯಲ್ಲಿ ಸುಟ್ಟು ಗಾಯಗೊಂಡವರಲ್ಲಿ ಒಬ್ಬಳಾದ ನಾಗರತ್ನ 19ದಿನಗಳ ನಂತರ ಡಿಜಿ ಹಾಸ್ಪಿಟಲ್‌ನಲ್ಲಿ ಮೃತಳಾದಳು. ಆಕೆ ಸಾಯುವಾಗ ನೀಡಿದ ಹೇಳಿಕೆಯನ್ನು ದಾಖಲಿಸಿಕೊಂಡು ಪೋಲೀಸರು ಕಾರ್ಮಿಕ ಸಂಘದ ಮುಖಂಡರನ್ನು ಆರೋಪಿಗಳಾಗಿ ಮಾಡಿದರು. ಈ ಸಾವಿನಿಂದಾಗಿ ಇದು ಕೊಲೆ ಪ್ರಯತ್ನದ ಮೊಕದ್ದಮೆಯ ಬದಲು ಕೊಲೆ ಮೊಕದ್ದಮೆಯಾಯಿತು. ನಾಗರತ್ನಳ ಸಾವಿನ ಒಂದು ವಾರದ ನಂತರ 21 ಎಪ್ರಿಲ್ 1999ರಂದು

ಪುಟ 12 ಕ್ಕೆ

- ತೃಣಮೂಲ ಗೂಂಡಾಗಳು ಮಾವೋವಾದಿಗಳಾದರು!
- ಭಯಾನಕ ಶಸ್ತ್ರಾಸ್ತ್ರಗಳು
- ಅದಕ್ಕೆಂದು ಕಾರ್ಖಾನೆ ಸ್ಥಾಪನೆ ಮತ್ತು ಇನ್ನೇನು?

ನಂದಿಗ್ರಾಮ ಘಟನೆ ಹಿಂದಿನ ನಗ್ನ ಸತ್ಯಗಳು

ಹದಿನಾರು ವರ್ಷದ ಯುವತಿ ರಾಧ ಗೋರ್ರೈ ಶಸ್ತ್ರಾಸ್ತ್ರಗಳನ್ನು ಹಿಡಿದು ದಾಳಿಗೆ ಮುಂದಾದಾಗ ಕೇಂದ್ರ ಮೀಸಲು ಪೊಲೀಸ್ ಪಡೆಯ ಅನುಭವಿ ಪೇದೆಗಳು ದಂಗಾದರು. ರಾಧ ಆಧುನಿಕ ಶಸ್ತ್ರಾಸ್ತ್ರಗಳನ್ನು ಸುಲಲಿತವಾಗಿ ಬಳಕೆ ಮಾಡುವುದು ಮಾತ್ರವಲ್ಲ ದಾಳಿ ಸಂದರ್ಭಗಳಲ್ಲಿ ಯಾವರೀತಿ ತಪ್ಪಿಸಿಕೊಳ್ಳುತ್ತಾಳೆ.. ಯಾವರೀತಿ ಪೊಸಿಷನ್ ತೆಗೆದುಕೊಂಡು ದಾಳಿ ನಡೆಸುತ್ತಾಳೆ.. ಹಳ್ಳಗಳಲ್ಲಿ ಮೊಣಕಾಲಿನಲ್ಲಿ ಚಿರತೆಯಂತೆ ವೇಗವಾಗಿ ತೆವಳುತ್ತಾ ಚಲಿಸುವುದನ್ನು ನೋಡಿ ಹಿರಿಯ ಅಧಿಕಾರಿಗಳು ಭೀತಗೊಂಡರು. ನಂದಿಗ್ರಾಮ ಪ್ರದೇಶದ ಸೋನಾಚುರ ಗ್ರಾಮದ ಸಮೀಪ ನಡೆದ ಈ ಘಟನೆಯನ್ನು ನೋಡಿದ ರಕ್ಷಣಾ ಪಡೆಗಳ ಅಧಿಕಾರಿಗಳ ಹೃದಯ ಒಂದು ಕ್ಷಣ ತಲ್ಲಣಿಸಿತು.

ನಂದಿಗ್ರಾಮ ಪ್ರದೇಶದಲ್ಲಿ ಘರ್ಷಣೆಗಳು ಆರಂಭವಾದಾಗಿನಿಂದ ಮಾವೋವಾದಿಗಳು ಅಪಾರ ಪ್ರಮಾಣದಲ್ಲಿ ಈ ಪ್ರದೇಶಕ್ಕೆ ನುಗ್ಗಿದ್ದಾರೆ. ಸೋನಾಚುರ ಗ್ರಾಮವನ್ನು ಸುರಕ್ಷಿತ ಪ್ರದೇಶವೆಂದು ಆಯ್ಕೆ ಮಾಡಿಕೊಂಡು ಹಲವು ರೀತಿಯ ಶಸ್ತ್ರಾಸ್ತ್ರ ತರಬೇತಿಯಲ್ಲಿ ತೊಡಗಿದ್ದರು. ಈ ಪ್ರದೇಶದಲ್ಲಿ ಘರ್ಷಣೆಗಳು ಆರಂಭವಾದಾಗ ಸೋನಾಚುರ ಗ್ರಾಮದಲ್ಲಿನ ತೃಣಮೂಲ ಕಾಂಗ್ರೆಸ್ ಮುಖಂಡ ಮತ್ತು ಮಾವೋವಾದಿಗಳು ಒಗ್ಗೂಡಿ ಸಿಪಿಎಂ ಪಕ್ಷದ ಕಾರ್ಯಕರ್ತರು ಮತ್ತು ಹಿತೈಷಿಗಳು, ಬೆಂಬಲಿಗರನ್ನು ಊರಿಂದಾಚೆಗೆ ತಳ್ಳಿದ್ದರು.



ಬಿಹಾರದಲ್ಲೂ ನಕ್ಸಲೀಯರಿಂದ ಸಿಪಿಐ(ಎಂ) ನಾಯಕನ ಕೊಲೆ

ಸೋನಾಚುರ ಗ್ರಾಮ ತೃಣ ಮೂಲ ಕಾಂಗ್ರೆಸ್ ಹಿಡಿತದಲ್ಲಿದ್ದು, ರಾಜಕೀಯವಾಗಿ ಮಾವೋವಾದಿಗಳಿಗೆ ಸುರಕ್ಷಿತ ಪ್ರದೇಶವಾಗಿದೆ. ಗ್ರಾಮದ ನೆರೆಯಲ್ಲಿ ಹಾಲ್ದಿ ನದಿ ಇದ್ದು ಕಣಿವೆ ಮಾದರಿಯ ಪ್ರದೇಶವಾಗಿರುವುದರಿಂದ ತಮ್ಮ ಕಾರ್ಯಾಚರಣೆ ನಡೆಸಲು ಮತ್ತು ತಪ್ಪಿಸಿಕೊಳ್ಳಲು ಅನುಕೂಲವಾಗಿರುವುದರಿಂದ ಮಾವೋವಾದಿಗಳು ಸೋನಾಚುರ ಗ್ರಾಮವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ತೆಲುಗು ಮಾತನಾಡುವ ಮಾವೋವಾದಿಗಳ ನಾಯಕ ನಾರಾಯಣ್ ಮತ್ತು ಆತನ ಸಂಗಡಿಗರು ಇಲ್ಲಿಗೆ ಆಗಮಿಸಿ ತೃಣಮೂಲ ಕಾಂಗ್ರೆಸ್ ಗೂಂಡಾಗಳೊಂದಿಗೆ ಯೋಜನೆ ರೂಪಿಸಿ ಕಾರ್ಯಾಚರಣೆ ಆರಂಭಿಸಿದರು.

ಅಲ್ಲಿರುವ ತೃಣಮೂಲ ಕಾಂಗ್ರೆಸ್ ನಾಯಕರ ಮನೆಗಳಲ್ಲೇ ಮಾವೋವಾದಿಗಳು ನೆಲೆನಿಂತರು. ಅವರ ಮಾತುಗಳಲ್ಲಿ ಹೇಳುವುದಾದರೆ ಸಿಪಿಎಂ ಪಕ್ಷದ ಹಿಡಿತದಿಂದ ತಾಯ್ನಾಡನ್ನು ವಿಮೋಚನೆಗೊಳಿಸುವ ಸಂಘರ್ಷ ಮುಂದಿನ ದಿನಗಳಲ್ಲಿ ನಡೆಯಲಿದ್ದು ನೀವೆಲ್ಲಾ ಸಶಸ್ತ್ರ ಬಳಕೆ ತರಬೇತಿಗಳನ್ನು ಪಡೆಯಬೇಕೆಂದು ಅವರನ್ನು ಪ್ರಚೋದಿಸಿದರು. ಇದರಿಂದ ಅವರೂ ಸಹ ಮಾವೋವಾದಿಗಳಾಗಿ ರೂಪುಗೊಳ್ಳಲು ಒಪ್ಪಿಕೊಂಡರು. ಅವರಿಗೆ ತರಬೇತಿ ನೀಡಲು ಶುರು ಮಾಡಿದರು. ಅಂತವರಲ್ಲೊಬ್ಬ ಯುವತಿ ಈ ರಾಧ.

ಎಲ್ಲರನ್ನೂ ಬಲವಂತವಾಗಿ ಮಾವೋವಾದಿಗಳಾಗಲು ಒತ್ತಾಯ ಮಾಡಲಿಲ್ಲ. ಸಿಪಿಎಂ ಪಕ್ಷದ ಕಾರ್ಯಕರ್ತರ ವಿರುದ್ಧ ಈ ಹಿಂದೆ ಹಲವಾರು ದಾಳಿಗಳನ್ನು ಕೈಗೊಂಡಿರುವ, ಅಪರಾಧ ಕೃತ್ಯಗಳ ಹಿನ್ನೆಲೆ ಹೊಂದಿರುವ ತೃಣಮೂಲ ಕಾಂಗ್ರೆಸ್‌ನ ಕೋಕನ್ ಶೀಟ್, ಬಿಮಲ್ ಮಂಡಲ್, ಸುಭಾಷ್ ಪಾಯಕ್ ಮತ್ತಿತರರು ತನ್ನಿಂತಾನೆ ಮಾವೋವಾದಿಗಳಾದರು! ಸಶಸ್ತ್ರ ತರಬೇತಿ ಪಡೆಯಲು ಮುಂದಾದರು. ಸಿಪಿಎಂ ಕಾರ್ಯಕರ್ತ ಸಮಂತರನ್ನು ಹತ್ಯೆ ಮಾಡಿದ ಗೂಂಡಾ ಪಡೆಗೆ ಕೋಕನ್ ನಾಯಕನಾಗಿದ್ದ. ಸೋನಾಚುರ ಮತ್ತಿತರ ಕಡೆ ಕೆಲವು ಯುವ ಜನರನ್ನು ಬಲವಂತವಾಗಿ ಮಾವೋವಾದಿಗಳಾಗಿ ಪರಿವರ್ತಿಸಲಾಗಿದೆ. ರಾಧ ಮತ್ತು ಜರ್ನರಂತಹ ಯುವತಿಯರು ಅಂತವರಾಗಿದ್ದಾರೆ.



ಭಿರ್‌ಬೂಮ್‌ನಲ್ಲಿ ರೈಲ್ವೆ ಹಳಿ ನಾಶ - ಮಾವೋವಾದಿಗಳಿಂದ

ತೃಣಮೂಲ ಕಾಂಗ್ರೆಸನ್ನು ಬೆಂಬಲಿಸುವ ಸುತ್ತ ಮುತ್ತಲ ಗ್ರಾಮಗಳು ಹತ್ತಾರು ಶ್ರೀಮಂತ ರೈತ ಕುಟುಂಬಗಳು ಮಾವೋವಾದಿಗಳಿಗೆ ಉದ್ದೇಶ ಪೂರ್ವಕವಾಗಿ ಬೆಂಬಲ ನೀಡಿದ್ದರೆ ಮತ್ತೆ ಕೆಲವು ಕುಟುಂಬಗಳು ಅನಿವಾರ್ಯಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಕತ್ತಲಾಗುತ್ತಿದ್ದಂತೆ ಅವರು ಮನೆಗೆ ಆಗಮಿಸುತ್ತಿದ್ದರು. ಉಂಡು ಮಲಗಿ ಬೆಳಕು ಹರಿಯುವ ಮುನ್ನವೇ ಮನೆಯಿಂದ ತೆರಳುತ್ತಿದ್ದರು ಎಂದು ಅಂತಹ ಕುಟುಂಬವೊಂದರ ಮಹಿಳೆ ಅರ್ಪಣಾ ಹೇಳುತ್ತಾರೆ. ಗ್ರಾಮದ ಸಮೀಪದ ನಿರ್ಜನ ಪ್ರದೇಶಗಳಲ್ಲಿ ರಾಜಕೀಯ ಚರ್ಚಾ ತರಗತಿಗಳನ್ನು ನಡೆಸುತ್ತಿದ್ದರು ಎಂದು ಅರ್ಪಣಾ ವಿವರಿಸಿದ್ದಾರೆ.

ಭಾರಿ ಶಸ್ತ್ರಾಸ್ತ್ರ ಪತ್ತೆ:

ನವೆಂಬರ್ 11ರಂದು ಸಿಆರ್‌ಪಿಎಫ್ ಪಡೆ ರಾಧ ಮನೆಗೆ ಧಾಳಿ ನಡೆಸಿದಾಗ 48 ಅತ್ಯಾಧುನಿಕ ರೈಫಲ್‌ಗಳು, ದೂರವ್ಯಾಪ್ತಿಯ ಹತ್ತು .12 ಬೋರ್ ಗನ್‌ಗಳು, ನೂರಾರು ಸ್ಫೋಟಕ ಸಾಮಗ್ರಿಗಳು, 151 ಡೆಟೋನೇಟರ್ಸ್, 800 ಸುತ್ತು ಮದ್ದುಗುಂಡುಗಳು ಸೇರಿದಂತೆ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಬೆಂಗಾಲಿ, ತೆಲುಗು, ಒರಿಯಾ ಬಾಷೆಯಲ್ಲಿರುವ ಹಲವಾರು ದಸ್ತಾವೇಜುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದೇ ರೀತಿಯ ಶಸ್ತ್ರಾಸ್ತ್ರಗಳನ್ನು ಸತೇನ್‌ಗಬರಿ, ಗೋಕುಲ್‌ನಗರ್, ರಾಣಿಚಕ್ ಮತ್ತು ಗಂಗಾಚರ್‌ಗಳಲ್ಲೂ ವಶಪಡಿಸಿಕೊಳ್ಳಲಾಯಿತು. ಇದಕ್ಕೂ ಹಿಂದೆ ನವೆಂಬರ್ 10ರಂದು ಗಂಗಾಚರ್ ಗ್ರಾಮದಲ್ಲಿ 75 ಡಟೋನೇಟರ್‌ಗಳು, 25 ಕೆಜಿಯಷ್ಟು ಬಾಂಬ್ ತಯಾರಿಕೆ ಸಾಮಗ್ರಿಗಳು, ಹಲವಾರು ಅತ್ಯಾಧುನಿಕ ಗನ್‌ಗಳು, ಲ್ಯಾಂಡ್‌ಮೈನ್‌ಗಳು ಸೇರಿದಂತೆ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತು.

ಭಯಾನಕವಾದ ಮತ್ತೊಂದು ಸಂಶೋಧನೆ ಎಂದರೆ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಯನ್ನು ಇದೇ ಸಂದರ್ಭದಲ್ಲಿ ಪತ್ತೆಹಚ್ಚಿದ್ದು. ಸೋನಾಚುರ ಗ್ರಾಮದ ಸಮೀಪದಲ್ಲಿ ಲೇತ್ ಮೆಷಿನ್, ಡ್ರಿಲ್‌ಗಳು, ಟ್ಯಾಪ್‌ಗಳು, ಬೋರ್ ಮತ್ತು ಅಧಿಕ ಸಾಮರ್ಥ್ಯದ ಕಟರ್‌ಗಳನ್ನು ಪತ್ತೆಹಚ್ಚಲಾಯಿತು. ಹಲವಾರು ಬೋಲ್ಟ್‌ಗಳು, ನೆಟ್‌ಗಳು ದೊರೆತಿದ್ದು ಇವನ್ನೆಲ್ಲ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಸ್ಥಾಪಿಸಲಾಗಿದೆ ಎಂಬುದನ್ನು ದೃಢೀಕರಿಸುತ್ತದೆ. ಇದಲ್ಲದೆ ಇನ್ನೂ ಹಲವಾರು ಕಡೆಗಳಲ್ಲಿ ಮಾವೋವಾದಿಗಳ ರಾಜಕೀಯ ಧೋರಣೆಗೆ ಸಂಬಂಧಿಸಿದ ಸಾಹಿತ್ಯ, ಕಾರ್ಯತಂತ್ರಗಳ ವರದಿಗಳು ಸಹ ಲಭ್ಯವಾಗಿವೆ.

ಹಿಂಸಾಚಾರದ ಹಿಂದೆ ಸ್ವಾರ್ಥ ಸಾಧಕ ಗುಂಪುಗಳ ಕೈವಾಡ

- ದೇಬೇಶ್ ರಾಯ್
ಖ್ಯಾತ ಅಂಕಣಕಾರ



ಸೋನಾಚುರದ ಶಸ್ತ್ರಾಸ್ತ್ರ ತಯಾರಿಸುತ್ತಿದ್ದ ಮನೆ

ಬಂಗಾಳದಲ್ಲಿ ನವೆಂಬರ್ 9ರಂದು ಸಿಪಿಐ(ಎಂ) ನಂದಿಗ್ರಾಮವನ್ನು 'ಮತ್ತೆ ವಶಪಡಿಸಿಕೊಂಡ' ಮೇಲೆ ಈಗ ನಂದಿಗ್ರಾಮ 'ರಕ್ಷಣಾ ಪಡೆ'ಯ ನಗರದ ಕೆಲವು 'ಬುದ್ಧಿಜೀವಿ ಮತ್ತು ನಾಗರಿಕ ತುಕಡಿ'ಗಳು ಕೊಲ್ಕತದಲ್ಲಿ ರಾಜ್ಯಸರಕಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಸೃಷ್ಟಿಸುವುದರಲ್ಲಿ ನಿರತರಾಗಿದ್ದಾರೆ. ಆದರೆ ಇದರ ಹಿಂದೆ ಇರುವವರು ಕೆಲವು ಸ್ವಾರ್ಥಸಾಧಕ ಗುಂಪುಗಳು ಎನ್ನುತ್ತಾರೆ ಬಂಗಾಳದ ಪ್ರಖ್ಯಾತ ಚಿಂತಕರು ಮತ್ತು ಅಂಕಣಕಾರರಾದ ದೇಬೇಶ್ ರಾಯ್.

ರಾಜ್ಯದ ರಾಜಕೀಯವನ್ನು ವಿಶ್ಲೇಷಿಸುತ್ತ ಅವರು ಈಗಲೂ ಅದರಲ್ಲಿ 32ಶೇ.ದಿಂದ 38ಶೇ.ದವರೆಗೆ ಸಿಪಿಐ(ಎಂ) ವಿರೋಧಿಗಳಿದ್ದಾರೆ ಎನ್ನುವ ಅವರು ಇವರಲ್ಲಿ ಕಾಂಗ್ರೆಸ್, ತೃಣಮೂಲ ಮತ್ತು ಹಳೆಯ ಸೋಶಲಿಸ್ಟರು ಸೈದ್ಧಾಂತಿಕ ಕಾರಣಗಳಿಗೆ ವಿರೋಧಿಸುವವರು ಇದ್ದಾರೆ. ತೃಣಮೂಲದ ನೆಲೆ ನಗರಗಳ ಯುವಜನರಾದರೆ ಇತರ ವಿರೋಧಿಗಳಿಗೆ ಸೈದ್ಧಾಂತಿಕ ಆಧಾರಗಳಿಲ್ಲ ಎನ್ನುತ್ತಾರೆ ಅವರು.

ಇವರಿಗೆ ಮತ್ತು ಇನ್ನು ಕೆಲವು ವ್ಯಕ್ತಿಗಳಿಗೂ ಬುದ್ಧದೇವ್ ಸರಕಾರದ ಕೈಗಾರಿಕೀಕರಣ ಕಾರ್ಯಕ್ರಮ ಪ್ರತಿರೋಧ ಒಡ್ಡಲು ಒಂದು ಒಳ್ಳೆಯ ವಿಷಯ ಎಂದೆನಿಸಿತು. ಸಿಂಗೂರ್‌ನಲ್ಲಿ ರೈತರನ್ನು ಹಿಂಡಿಹಾಕುವ ಬಂಡವಾಳಶಾಹಿ ವಿಧಾನವನ್ನು ಅನುಸರಿಸದೆ ಅವರ ಆಸ್ತಿ, ಬದುಕು ಇವನ್ನು ಉಳಿಸಿಕೊಳ್ಳುವ ಮಾದರಿಯೊಂದನ್ನು ಕಮ್ಯೂನಿಸ್ಟರು ಮುಂದಿಟ್ಟಿದ್ದಾರೆ ಎನ್ನುತ್ತಾರೆ ಅವರು. ಸಿಂಗೂರಿನಲ್ಲಿ ಪ್ರತಿರೋಧಕ್ಕೆ ಅವಕಾಶ ತಪ್ಪಿಹೋದ ವಿರೋಧಿಗಳು ನಂತರ ನಂದಿಗ್ರಾಮದ ಮೇಲೆ ಗಮನ ಕೇಂದ್ರೀಕರಿಸಿದರು ಎನ್ನುತ್ತಾರೆ.

ಸಿಂಗೂರಿನ ಬಗ್ಗೆ ಮಾತನಾಡುತ್ತಾ ಅವರು ಅಲ್ಲಿ ಅಷ್ಟೊಂದು ವಿಶಾಲ ಪ್ರಮಾಣದ ಜಮೀನನ್ನು ಸುತ್ತಮುತ್ತಲ ರಿಯಲ್ ಎಸ್ಟೇಟ್ ಬೆಲೆಗಳನ್ನು ಏರಲು ಬಿಡದೆ, ರೈತರಿಂದ ಹಿಡಿದು ಗೇಣಿದಾರರವರೆಗೂ ಪರಿಹಾರ ಕೊಟ್ಟು ಖರೀದಿಸಲಾಯಿತು ಎನ್ನುತ್ತಾರೆ. ಇದರಿಂದ ಅಲ್ಲಿ ಡೆವಲಪರುಗಳು, ಪ್ರಮೋಟರುಗಳ ಹೊಸ ವರ್ಗವೇನೂ ಚಿಗುರಲು ಅವಕಾಶವಾಗಲಿಲ್ಲ, ಅಲ್ಲಿ ಪರಿಹಾರವಾಗಿ ನೀಡಿದ ಬೆಲೆ ಇಡೀ ದೇಶದಲ್ಲೆ ಅತಿ ಹೆಚ್ಚು ಇರಬೇಕು ಎನ್ನುತ್ತಾರೆ ದೇಬೇಶ್ ರಾಯ್.

ಅಭಿವೃದ್ಧಿಯ ಹೆಸರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವವರಿಗೆ ಈ ವಿಧಾನ ಮತ್ತು ಶೈಲಿ ಸರಿಬರಲಿಲ್ಲ. ಮಧ್ಯಮ ವರ್ಗಗಳಲ್ಲಿ ಸರಕಾರೀ ಪ್ರಾಜೆಕ್ಟ್‌ಗಳಿಂದ ಬೇಗನೆ ದುಡ್ಡು ಮಾಡಿಕೊಳ್ಳುವ ಒಂದು ಅದೃಶ್ಯ ಪರಂಪರೆ ಬೇರೆಡೆಗಳಂತೆ ಬಂಗಾಳದಲ್ಲಿಯೂ ಇದೆ. ಈ ಹಿಂದೆ ಎರಡು ಮಹಾಯುದ್ಧಗಳು, 1943ರ ಕ್ಷಾಮ, ಯುದ್ಧಾನಂತರದ ದಂಗೆಗಳು ಬೇಗನೆ ಶ್ರೀಮಂತರಾಗಲು ಕೆಲವು ವ್ಯವಹಾರಸ್ಥರಿಗೆ, ರಾಜಕೀಯ ವ್ಯಕ್ತಿಗಳಿಗೂ ನೀಡಿದ ಅವಕಾಶಗಳನ್ನು ಈಗಲೂ ನೆನಪಿಸಿಕೊಳ್ಳಲಾಗುತ್ತದೆ.

ಆದರೆ ಈಗ ಹೊಸ ಪ್ರಾಜೆಕ್ಟ್‌ಗಳಲ್ಲಿ ಸರಕಾರ ನೇರವಾಗಿ ಭಾಗವಹಿಸಿತು, ವಿಶೇಷವಾಗಿ ಮೂಲರಚನೆಯ ವಲಯದಲ್ಲಿ, ಭೂಸ್ವಾಧೀನ ಮತ್ತು ಪೂರೈಕೆಗಳ ಮೇಲೆ ಹತೋಟಿಯಿಡುವಲ್ಲಿ, ಮಾರುಕಟ್ಟೆ ಶಕ್ತಿಗಳಿಗೆ ಯಾವ ಅವಕಾಶವೂ ಇರಲಿಲ್ಲ, ಇದರಿಂದ ಕೆಲವು ವ್ಯಕ್ತಿಗಳಿಗೆ, ಆಸ್ತಿ ಒಡೆಯರಿಗೆ, ಇತರ ಆಸಕ್ತ ಗುಂಪುಗಳಿಗೆ ನಿರಾಸೆಯಾಯಿತು, ತಮಗೆ ವಿಶ್ವಾಸಘಾತವಾಗಿದೆ ಎಂದು ಅವರು ಬಗೆದರು ಎನ್ನುತ್ತಾರೆ ದೇಬೇಶ್ ರಾಯ್. ಎಡರಂಗದ ಹೊಸ ಕೈಗಾರಿಕೀಕರಣ ಧೋರಣೆಯೂ ಹಿಂದೆ 1952ರಲ್ಲಿ ಕಾಂಗ್ರೆಸ್ ಜಮೀಂದಾರಿಯನ್ನು ನಿರ್ಮೂಲಗೊಳಿಸಿದಾಗ, ಜಮೀಂದಾರರು ಜೋತೆದಾರರುಗಳಾದಾಗ ರೈತಾಪಿಗಳನ್ನು ಲೂಟಿ ಹೊಡೆಯಲು ಅವಕಾಶ ನೀಡಿದಂತೆ ಹೊಸದೊಂದು ಅವಕಾಶ ನೀಡಬಹುದು ಎಂಬ ಕೆಲವು ಆಸಕ್ತ ಗುಂಪುಗಳ ನಿರೀಕ್ಷೆ ಈ ಬಾರಿ ಈಡೇರಲಿಲ್ಲ.

ಹೀಗೆ ಕೈಗಾರಿಕೀಕರಣ ಕಾರ್ಯಕ್ರಮದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲಾಗದ್ದೇ ಅವರು ನಂದಿಗ್ರಾಮದಲ್ಲಿ ಇಂತಹ ಹಿಂಸಾಚಾರದ ರಾಜಕೀಯಕ್ಕೆ ಇಳಿಯಲು ಕಾರಣ ಎಂದು ದೇಬೇಶ್ ರಾಯ್ ಅಭಿಪ್ರಾಯಪಡುತ್ತಾರೆ.

(ಕೃಪೆ: ಡೆಕ್ಕನ್ ಹೆರಾಲ್ಡ್, 25 ನವೆಂಬರ್ 2007)

ಬಿಜೆಪಿಯ ಉದಾಸಿ-ಬೆಲ್ಲದರ ಲೂಟಿಗೆ


ಕಾರ್ಮಿಕ-ರೈತರ ಬಲಿ

ಸಕ್ಕರೆ ಕಾರ್ಖಾನೆಯೊಂದರ ದುರಂತ ಕಥನ

ನಾರಾಯಣ ಕಾಳೆ

ಬಿಜೆಪಿಯ ಮಾಜಿ ಮಂತ್ರಿ ಉದಾಸಿ ಮತ್ತು ಬೆಲ್ಲದ್ ಮುಂತಾದವರು ಸೇರಿ ಹಾವೇರಿಯ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಕಬ್ಬು, ಸಕ್ಕರೆ ಮುಕ್ಕಿದ್ದಲ್ಲದೇ ಕಾರ್ಖಾನೆಗೆ ಕಬ್ಬು ಪೂರೈಸುವ ರೈತ ಜೀವ, ಅಲ್ಲಿ ದುಡಿಯುವ ಕಾರ್ಮಿಕರ ಜೀವವನ್ನೂ ಮುಕ್ಕುತ್ತಿದ್ದಾರೆ.

ಕಾರ್ಖಾನೆಗಾಗಿ ಆವಶ್ಯಕ ಕಾರ್ಮಿಕನ ಬಲಿ: ಹಾವೇರಿ ಹತ್ತಿರದ ಸಂಗೂರು ಗ್ರಾಮದಲ್ಲಿರುವ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಕಳೆದ 18 ತಿಂಗಳುಗಳಿಂದ ವೇತನ ನೀಡದ ಆಡಳಿತ ಮಂಡಳಿಯ ಕ್ರಮಕ್ಕೆ ಬೇಸತ್ತು ಕಾರ್ಮಿಕನೋರ್ವ ಕಾರ್ಖಾನೆಯ ಆವರಣದಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಾರ್ಖಾನೆಯ ಕಾರ್ಯಾಗಾರದಲ್ಲಿ ಸಹಾಯಕ ಎಂದು ಕಾರ್ಯನಿರ್ವಹಿಸುತ್ತಿದ್ದ ಹೊಸಳ್ಳಿ ಗ್ರಾಮದ ದುರ್ಗಪ್ಪ ಎಚ್.ತಳವಾಜರ (45) 19-11-07ರಂದು ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿ, ಕಾರ್ಡ್ ಪಂಚ್ ಮಾಡಿದ ನಂತರ ಕಾರ್ಖಾನೆಯ ಆವರಣದಲ್ಲೇ 'ರೋಗರ್' ಕ್ರಿಮಿನಾಶಕ ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡಾಗ ಆತನನ್ನು ತಕ್ಷಣವೇ ಹಾವೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದ ಕಾರಣ ತಕ್ಷಣ ಆತನನ್ನು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಯೂ ಚಿಕಿತ್ಸೆ ಫಲ ನೀಡದೆ ಕಾರ್ಮಿಕ ದುರ್ಗಪ್ಪ ಮೃತಪಟ್ಟನು. ಆತ ಪತ್ನಿ, ಮೂವರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅಗಲಿದ್ದಾನೆ. ವಿಷ ಸೇವಿಸುವ ಮುನ್ನ ಆತ ಬರೆದಿಟ್ಟ ಚೀಟಿಯೊಂದು ದೊರೆತಿದ್ದು ಅದರಲ್ಲಿ 'ನಾನು ಡಿ.ಹೆಚ್.ತಳವಾರ ನನ್ನ ಹೆಂಡತಿಯ ತಾಳಿಯನ್ನು ಮಾರಿ ವಿಷಯ ಸೇವಿಸಿದ್ದೇನೆ. ಇದಕ್ಕೆ ಕಾರ್ಖಾನೆಯ ನಿರ್ದೇಶಕರ ಮಂಡಳಿಯ ಅಧ್ಯಕ್ಷ ಸದಾಶಿವ ಬೆಲ್ಲದ ಮಾಜಿ ಸಚಿವ, ಹಾನಗಲ್ಲ ಶಾಸಕ ಸಿ.ಎಂ.ಉದಾಸಿ ಕಾರಣರು' ಎಂದು ಆತ ದೂರಿದ್ದಾನೆ. ಪೋಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿದು ಬಂದಿದೆ.



ಭ್ರಷ್ಟ ಉದಾಸಿ

ರೈತ ರಾಮಣ್ಣ ಮೊದಲ ಬಲಿ:

1987ರಲ್ಲಿ ಆರಂಭವಾದ ಸಂಗೂರ ಸಕ್ಕರೆ ಕಾರ್ಖಾನೆಯು ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಒಳಗೊಂಡ ಅಖಂಡ ಧಾರವಾಡ ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆಯಾಗಿದೆ. ಕಾರ್ಖಾನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದು, ಕಾರ್ಖಾನೆಯನ್ನು ದಿವಾಳಿಯೆಬ್ಬಿಸಿ, ಅತ್ತ ಕಬ್ಬನ್ನು ಖರೀದಿಸದೇ ರೈತ ಕುಟುಂಬಗಳನ್ನು, ಇತ್ತ ಸಂಬಳ ನೀಡದೇ ಕಾರ್ಮಿಕ ಕುಟುಂಬಗಳನ್ನು ಬೀದಿಗೆ ತಂದ ಕೀರ್ತಿ ಮಾಜಿ ಮಂತ್ರಿ ಸಿ.ಎಂ.ಉದಾಸಿ ಅವರಿಗೆ ಮತ್ತು ಅವರ ಬಲಗೈ ಬಂಟ ಸದಾಶಿವ ಬೆಲ್ಲದ ಅವರಿಗೆ ಸಲ್ಲುತ್ತದೆ. ಉದಾಸಿಯವರು ಜನತಾದಳದಲ್ಲಿದ್ದು ಮಂತ್ರಿಯಾಗಿದ್ದ ಕಾಲದಿಂದಲೂ ಈ ಕಾರ್ಖಾನೆಯ ಸಕ್ಕರೆ ಸಿಹಿಯನ್ನು ಉಣ್ಣುತ್ತಾ ಬಂದವರು. ಇವರ ವ್ಯಕ್ತಿಗತ ಕಮೀಷನ್ ರೇಟಿಗೆ ಹೆದರಿ ಯಾರೂ ಕಾರ್ಖಾನೆಯನ್ನು ಗುತ್ತಿಗೆಗೆ ಪಡೆಯಲು ಮುಂದೆ ಬರುತ್ತಿಲ್ಲ. ಕಳೆದ ವರ್ಷ ಕಾರ್ಖಾನೆಯನ್ನು ಪಡೆದಿದ್ದ ಸೌದತ್ತಿಯ ರೇಣುಕಾ ಷುಗರ್ಸ್ 1.60 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು 1,60,000 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿ ಕಬ್ಬು ಬೆಳೆಗಾರರಲ್ಲಿ ಆಶಾಭಾವನೆ ಮೂಡಿಸಿತ್ತು. ಪ್ರಾರಂಭದಲ್ಲಿ ಪ್ರತಿ ಟನ್ ಕಬ್ಬಿಗೆ 1,050 ರೂಪಾಯಿಗಳನ್ನು ನೀಡಿದ್ದ ಕಂಪನಿಯು ಹೆಚ್ಚೆಚ್ಚು ಕಬ್ಬು ಬಂದು ಬೀಳುತ್ತಿದ್ದಂತೆ ರೇಟನ್ನು ಇಳಿಸುತ್ತಾ ಕೊನೆಗೆ 650 ರೂಪಾಯಿಗಳಿಗೆ ತಂದು ನಿಲ್ಲಿಸಿತು. ಅನ್ಯಾಯಕ್ಕೊಳಗಾದ ರೈತರು ಆಕ್ಷೇಪಿಸತೊಡಗಿದಾಗ ರೇಣುಕಾ ಷುಗರ್ಸ್ ಕಂಪನಿಯು ಸುಮಾರು 42 ಲಕ್ಷ ರೂಪಾಯಿಗಳಷ್ಟು ಕಾರ್ಮಿಕರ ಬಾಕಿ ಸಂಬಳವನ್ನು ಎತ್ತಿಹಾಕಿ ರಾತ್ರೋರಾತ್ರಿ ಪರಾರಿಯಾಯಿತು.

ಇದರಿಂದ ಕಬ್ಬು ಬೆಳೆದ ರೈತರಿಗೆ ಮತ್ತು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ಅನ್ಯಾಯವಾಯಿತೇ ಹೊರತು ಆಡಳಿತ ಮಂಡಳಿಯವರಿಗೆ ನಷ್ಟವಾಗಲಿಲ್ಲ. ಅಧ್ಯಕ್ಷ ಬೆಲ್ಲದ ಪ್ರತಿ ಟನ್‌ಗೆ 50 ರೂಪಾಯಿಯಂತೆ ಸುಮಾರು 60 ಲಕ್ಷ ರೂಪಾಯಿ ರೈತರ ಹಣವನ್ನು ಕೊಳ್ಳೆ ಹೊಡೆಯುವುದರಲ್ಲಿ ಯಶಸ್ವಿಯಾದ ಮಾತ್ರವಲ್ಲ ಕಂಪನಿಯು ರಾತೋರಾತ್ರಿ ಓಡಿಹೋಗಲು ಸಹಕರಿಸಿದಕ್ಕಾಗಿ ಬಿಟ್ಟು ಹೋದ 1000 ಚೀಲ ಸಕ್ಕರೆಯನ್ನು ಮೇಯ್ದು ಬಿಟ್ಟನು.



ವಿಷ ಕುಡಿದ ಕಾರ್ಮಿಕ ದುರ್ಗಪ್ಪ ಹೆಚ್.ತಳವಾರ

ಕಾರ್ಖಾನೆಯಲ್ಲಿ ಕಬ್ಬು ಅರೆಯುವುದನ್ನು ಅರ್ಧಕ್ಕೆ ನಿಲ್ಲಿಸಿದ್ದರ ಪರಿಣಾಮವಾಗಿ ಸುಮಾರು 50 ಸಾವಿರ ಟನ್ ಕಬ್ಬು ಕಟಾವಾಗದೇ ಹೊಲದಲ್ಲಿಯೇ ಒಣಗಿ ರೈತರು ತೀವ್ರ ಹಾನಿ ಅನುಭವಿಸುವಂತಾಯಿತು. ಈ ಬೇಗುದಿ ತಾಳಲಾರದೆ ಹತ್ತಿರದ ಬಾಳಂಬೀಡ್. ಗ್ರಾಮದ ಸಣ್ಣ ರೈತ ರಾಮಣ್ಣ ದುಂಡಣ್ಣನವರ (60) ತನ್ನ ಹೊಲದಲ್ಲಿ ಒಣಗುತ್ತಿದ್ದ ಕಬ್ಬಿಗೆ ಬೆಂಕಿ ಹಚ್ಚಿಕೊಂಡು ತಾನೂ ಅದರಲ್ಲಿ ಸುಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದನು. ಉಸ್ತುವಾರಿ ಮಂತ್ರಿ ಉದಾಸಿಯವರ ಸೂಚನೆಯ ಮೇರೆಗೆ ಅದೊಂದು ಆಕಸ್ಮಿಕವಾಗಿ ಸಂಭವಿಸಿದ ಘಟನೆಯೆಂದು ಪೋಲಿಸರಿಂದ ಪ್ರಕರಣ ದಾಖಲು ಮಾಡಿಸಿ ಆ ಬಡ ರೈತ ಕುಟುಂಬಕ್ಕೆ ಪರಿಹಾರ ಸಿಗದಂತೆ ಮಾಡಲಾಗಿದೆ.

ಮಹಿಳೆಯರ ಹೋರಾಟಕ್ಕೆ ವ್ಯಾಪಕ ಅನುಕಂಪ: ಕಳೆದ 18 ತಿಂಗಳುಗಳಿಂದ ಪ... ಇಲ್ಲದ್ದರಿಂದ ಕಾರ್ಖಾನೆಯ ಕೆಲಸವನ್ನೇ ಅವಲಂಬಿಸಿರುವ ಸುಮಾರು 150 ಕಾರ್ಮಿಕ ಕುಟುಂಬಗಳು ತೀವ್ರ ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿದ್ದವು. ಜೀವನ ನಡೆಸುವುದೇ ಅವರಿಗೆ ಕಷ್ಟವಾಗಿತ್ತು. ಶಾಲೆ ಕಾಲೇಜುಗಳಿಗೆ ಹೋಗುತ್ತಿದ್ದ ಕಾರ್ಮಿಕರ ಮಕ್ಕಳು ಶಾಲಾ ಶುಲ್ಕ, ಪರೀಕ್ಷಾ ಶುಲ್ಕಗಳನ್ನು ಕಟ್ಟಲಾಗದೆ ತಮ್ಮ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸುವ ಪರಿಸ್ಥಿತಿ ಬಂದಿತ್ತು. ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಕಾರ್ಮಿಕ ಕುಟುಂಬಗಳ ಮಹಿಳೆಯರು ಮತ್ತು ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು ಸೇರಿಕೊಂಡು ಹಾವೇರಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಿದರು. ಮಹಿಳೆಯರ ಈ ಹೋರಾಟಕ್ಕೆ ನಗರದ ವಿವಿಧ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಹೋರಾಟಕ್ಕೆ ಬೆಂಬಲ ಘೋಷಿಸಿದ ಮಠಾಧೀಶರು ಸತ್ಯಾಗ್ರಹಿಗಳಿಗೆ ಅನ್ನಪ್ರಸಾದ ವಿತರಣೆ ಮಾಡಿದರು. ಜಿಲ್ಲೆಯ ಕಬ್ಬು ಬೆಳೆಗಾರ ರೈತರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಕಾರ್ಯ ಆರಂಭಿಸಬೇಕೆಂದೂ ಕಾರ್ಮಿಕರ ವೇತನ ಮತ್ತು ರೈತರ ಬಾಕಿ ಹಣವನ್ನು ಪಾವತಿ ಮಾಡಬೇಕೆಂದು ಆಗ್ರಹಿಸಿದ್ದರು. ಆದರೆ ಇದ್ಯಾವುದಕ್ಕೂ ಕಾರ್ಖಾನೆಯ ಆಡಳಿತ ಮಂಡಳಿಯಾಗಲಿ, ಸರ್ಕಾರವಾಗಲಿ ಸ್ಪಂದಿಸಲಿಲ್ಲ. ಈ ನಡುವೆ ಕಾಂಗ್ರೆಸ್ ಮುಖಂಡರಾದ ಎಚ್.ಕೆ.ಪಾಟೀಲ್, ಬಸವರಾಜ ಶಿವಣ್ಣನವರ, ಐ.ಜಿ.ಸನದಿ, ಮನೋಹರ್ ತಹಶಿಲ್ದಾರ, ಕೆ.ಬಿ.ಕೋಳಿವಾಡ ಅಲ್ಲದೆ ಜೆಡಿ(ಯು)ನ ಬಸವರಾಜ ಬೊಮ್ಮಾಯಿ ಮೊದಲಾದವರು ಸತ್ಯಾಗ್ರಹಿಗಳನ್ನು ಕಂಡು ತಮ್ಮ ಬೆಂಬಲ ಸೂಚಿಸಿದರು.

ಆಡಳಿತವರ್ಗದ ಅಮಾನವೀಯತೆ: ಕಾರ್ಖಾನೆಯ ಪುನರಾರಂಭಕ್ಕೆ ಒತ್ತಾಯಿಸಿ ಇಪ್ಪತ್ತು ಇಪ್ಪತ್ತೈದು ದಿನಗಳಿಂದ ಅಹೋರಾತ್ರಿ ಹೋರಾಟ ನಡೆಯುತ್ತಿದ್ದಾಗ್ಯೂ ಕಾರ್ಖಾನೆಯ ಆಡಳಿತ ಮಂಡಳಿಯ ಅಧ್ಯಕ್ಷ ಬೆಲ್ಲದ್ ಅವರಾಗಲಿ, ಇತರ ಸದಸ್ಯರಾಗಲಿ ಅತ್ತ ಮುಖ ತಿರುಗಿಸಿ ನೋಡಲಿಲ್ಲ. ಬದಲಾಗಿ ಆಡಳಿತ ಮಂಡಳಿ ಕಾರ್ಖಾನೆಯ ಕಾರ್ಮಿಕರ ಕಾಲೋನಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಸರಬರಾಜು ಮಾಡುವುದನ್ನು ನಿಲ್ಲಿಸಿ ಗಾಯದ ಮೇಲೆ ಬರೆ ಎಳೆಯಿತು. ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ವಾಹನವನ್ನು ...ಗೆದುಕೊಂಡು ಮುಗ್ಧ ಮಕ್ಕಳ ಭವಿಷ್ಯವನ್ನೇ ಕತ್ತಲೆಗೆ ನೂಕಿತು. ಹೀಗಾಗಿ ಹೋರಾಟ ತೀವ್ರಗೊಳ್ಳುವಂತಾಯಿತು. ಕಾರ್ಖಾನೆಯ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಸರ್ಕಾರವೇ ಆಡಳಿತಾಧಿಕಾರಿ ಯನ್ನು ನೇಮಿಸಿ ಕಾರ್ಖಾನೆಯನ್ನು ನಡೆಸುವ ಮೂಲಕ ರೈತರ ಹಾಗೂ ಕಾರ್ಮಿಕರ ಹಿತರಕ್ಷಣೆಗೆ ಮುಂದಾಗಬೇಕೆನ್ನುವ ಬೇಡಿಕೆ ಮುಖ್ಯವಾಯಿತು.

ಜನಪ್ರತಿನಿಧಿಗಳಿಗೆ ಇತ್ತ ಗಮನ ಕೊಡಲಿಕ್ಕೆ ಸಮಯವೇ ಇರಲಿಲ್ಲ. ಉಸ್ತುವಾರಿ ಮಂತ್ರಿ ಸಿ.ಎಂ.ಉದಾಸಿ ಅವರೂ ಸೇರಿದಂತೆ ಇನ್ನುಳಿದ

ಪುಟ 10ಕ್ಕೆ

ಎಸ್ಎಫ್ಐ ನೇತೃತ್ವದ ಬೃಹತ್ ಪ್ರತಿಭಟನೆಯಲ್ಲಿ ಜಿ.ವಿ.ಶ್ರೀರಾಮರೆಡ್ಡಿ, ವಿದ್ಯಾರ್ಥಿ ಮುಖಂಡರು



ಬಿಜೆಪಿ ಸರ್ಕಾರ ಬಿದ್ದಮೇಲೆ ಮೂಡಿದ ಭರವಸೆ

ರಾಜ್ಯದಲ್ಲಿ ಯಡಿಯೂರಪ್ಪ ಸರ್ಕಾರ ಪತನಗೊಂಡ ನಂತರ ಹಾವೇರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕ ಕುಟುಂಬಗಳ ಜೀವನವನ್ನು ಆವರಿಸಿದ ಕತ್ತಲೆ ದೂರವಾಗುವ ಲಕ್ಷಣಗಳು ಕಾಣತೊಡಗಿವೆ. ಕಾರ್ಖಾನೆಯ ಆಡಳಿತ ಮಂಡಳಿಯನ್ನು ವಜಾಮಾಡಿ ಜಿಲ್ಲಾಧಿಕಾರಿ ಪಿ.ಎಸ್. ವಸ್ತ್ರದ ಅವರನ್ನು ಕಾರ್ಖಾನೆಯ ಆಡಳಿತಾಧಿಕಾರಿಯಾಗಿ ನೇಮಿಸುವ ಆದೇಶವನ್ನು ರಾಜ್ಯ ಸಕ್ಕರೆ ಆಯುಕ್ತರು ಹೊರಡಿಸಿದ್ದು ಕಾರ್ಖಾನೆಯಲ್ಲಿ ಕಬ್ಬು ನುರಿಸುವುದನ್ನು ಗುತ್ತಿಗೆಗೆ ನೀಡಲು ಟೆಂಡರ್ ಕರೆಯಲಾಗಿದೆ ಎಂದು ಜಿಲ್ಲಾಧಿಕಾರಿ ವಸ್ತ್ರದ ತಿಳಿಸಿದ್ದಾರೆ. ಕಾರ್ಮಿಕರಿಗೆ ಬಾಕಿ ಇರುವ ಸಂಬಳವನ್ನು ಪಾವತಿ ಮಾಡಲು ಕ್ರಮ ಕೈಗೊಳ್ಳುವ ಭರವಸೆಯನ್ನು ಅವರು ನೀಡಿದ್ದಾರೆ. ಕಬ್ಬು ಪೂರೈಸಿದ ರೈತರಿಗೆ ಬಾಕಿ ಇರುವ ಹಣದಲ್ಲಿ ಮೊದಲ ಕಂತು 22 ಲಕ್ಷ ರೂ.ಗಳನ್ನು ರಾಜ್ಯ ಸಕ್ಕರೆ ಆಯುಕ್ತರು ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ 25 ದಿನ ನಡೆದ ಕಾರ್ಮಿಕ ಕುಟುಂಬಗಳ ಹೋರಾಟವನ್ನು ಹಿಂತೆಗೆದುಕೊಳ್ಳಲಾಗಿದೆ.

ಹಾಸನ : ಅಭಿವೃದ್ಧಿಯ ಮರೆಮಾಚಿದ ಮುಖ

ರಾಜಕೀಯ ಘಟಾನುಘಟಿಗಳಿರುವ ಹಾಸನ ಜಿಲ್ಲೆ ಭಾರಿ ಅಭಿವೃದ್ಧಿಯಾಗುತ್ತಿದೆ ಎಂಬ ಭಾವನೆ ಹರಡಲಾಗಿದೆ. ಭಾರಿ ಹಣವೂ ಹರಿದುಬಂದಿದೆ. ಆದರೆ ಜನರ ಅಭಿವೃದ್ಧಿ ಆಗುತ್ತಿದೆಯೇ?

ಅಂಗರಾಜು ಬಿ.ಎಸ್
ಹಾಸನ

ಎಲ್ಲಾ ಆಸ್ಪತ್ರೆಗಳ ಮುಂದೆ ಈಗ 'ಕ್ಯಾನ್ಸರನ್ನು ಆರಂಭದಲ್ಲೆ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ ಅದನ್ನು ಗುಣಪಡಿಸಲು ಸಾಧ್ಯ' ಎಂದು ಬರೆಯಲಾಗಿದೆ ನಿಜ. ಈ ಕ್ಯಾನ್ಸರ್ ದೇಹಕ್ಕೆ ಸಂಬಂಧಿಸಿದ್ದು. ಸಮಾಜಕ್ಕೆ ಹಲವು ರೀತಿಯ ಕ್ಯಾನ್ಸರ್ ಆಕ್ರಮಿಸುತ್ತವೆ. ಇವುಗಳನ್ನು ಆರಂಭದಲ್ಲೇ ಸರಿಯಾದ ಚಿಕಿತ್ಸೆಗೆ ಒಳಪಡಿಸದಿದ್ದರೆ ಇಡೀ ಸಮಾಜವನ್ನೆ ದುರ್ಬಲಗೊಳಿಸುತ್ತವೆ. 'ಜಾತಿ ರಾಜಕೀಯ, ಜಾತಿಯ ದುರಭಿಮಾನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕೋಮುವಾದ, ನಕ್ಸಲ್‌ವಾದ ಎಂಬ ಇನ್ನೂ ಹಲವು ರೀತಿಯ ಕ್ಯಾನ್ಸರ್‌ಗಳು ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನು ಸುಡುತ್ತಿವೆ. ಇವುಗಳಿಗೆ ಜನತೆಯ ಹೋರಾಟ ಎಂಬ ತುರ್ತು ಚಿಕಿತ್ಸೆಯೂ ಹಾಗೂ ಜನಜಾಗೃತಿ ಎಂಬ ಔಷಧೋಪಚಾರವು ಆಗಬೇಕಿದೆ.



ನವೆಂಬರ್ 17, 18, 2007ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಹಾಸನ ನಗರದ ಕನ್ನಡ ಸಾಹಿತ್ಯ ಪರಿಷತ್‌ಭವನದ ಕಾಂ.ಟಿ.ಎಸ್.ಮಣಿ ವೇದಿಕೆಯಲ್ಲಿ ತನ್ನ 7ನೇ ಜಿಲ್ಲಾ ಸಮ್ಮೇಳನವನ್ನು ಸಂಘಟಿಸಿತ್ತು. ಹಾಸನ, ಚಿಕ್ಕಮಗಳೂರು ವ್ಯಾಪ್ತಿಯಲ್ಲಿನ ರಾಜಕೀಯ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿ ಹೋರಾಟ ರೂಪಿಸುವ ಸಲುವಾಗಿ ಈ ಸಮ್ಮೇಳನವನ್ನು ಸಂಘಟಿಸಿತ್ತು. ಅಲ್ಲಿ ವಿಶ್ಲೇಷಿಸಿದ ಹಾಸನ ಜಿಲ್ಲೆಯ ಪರಿಸ್ಥಿತಿ ಹೀಗಿದೆ.


ಒಕ್ಕಲಿಗರ ಪ್ರಾಬಲ್ಯ

ಹೇಳಿಕೇಳಿ ಹಾಸನ ಒಕ್ಕಲಿಗ ಸಮುದಾಯ ಪ್ರಾಬಲ್ಯ ಹೊಂದಿರುವ ಜಿಲ್ಲೆ. ಒಟ್ಟು ಜನಸಂಖ್ಯೆಯಲ್ಲಿ ಅವರೇ ಬಹುಸಂಖ್ಯಾತರು. ಜಿಲ್ಲೆಯಲ್ಲಿನ ಭೂಮಿಯಲ್ಲಿ ಶೇ.72ರಷ್ಟು ಭಾಗ ಒಕ್ಕಲಿಗ ಸಮುದಾಯದ ಕೈಯಲ್ಲಿದೆ. ಅವರಲ್ಲಿ ಶೇ.90ರಷ್ಟು ಜನರಿಗೆ ಸ್ವಂತ ಭೂಮಿ ಇದೆ. ಹೀಗಾಗಿ ಜಿಲ್ಲೆಯ ರಾಜಕೀಯದಲ್ಲಿ ಇವರದೇ ಮೇಲುಗೈ. ಭೂ ಒಡೆತನದ ಹಿನ್ನೆಲೆಯಿಂದಾಗಿ ಇವರ ಸ್ವಭಾವ ಸ್ವಲ್ಪ ರಫ್ ಮತ್ತು ಟಫ್. ಇವರಲ್ಲಿ ಇರುವ ಭೂಹೀನರು ಮತ್ತು ಸಣ್ಣ ಹಿಡುವಳಿಗಾರರು ಕನಿಷ್ಠ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಿರ್ವಹಿಸುತ್ತಿದ್ದರೂ ಜಾತಿ ಅಭಿಮಾನದ ಅಲೆಯಲ್ಲಿ ಇದೆಲ್ಲವನ್ನು ಮರೆತುಬಿಡುತ್ತಾರೆ. ಹೀಗಾಗಿ ಹಾಸನ ಜಿಲ್ಲೆಯು ಜಾತಿ ರಾಜಕಾರಣದ ಬೆಳವಣಿಗೆಗೆ ಹುಲುಸಾದ ನೆಲವನ್ನು ಒದಗಿಸಿದಂತಾಗಿದೆ. ಗ್ರಾಮ ಪಂಚಾಯತಿ ಸದ್ಯಸತ್ವದಿಂದ ಹಿಡಿದು ಲೋಕಸಭಾ ಸದಸ್ಯತ್ವದವರೆಗೂ ಅವರದೇ ಹಿಡಿತ. ಭೂಮಿ, ವ್ಯಾಪಾರ, ಗುತ್ತಿಗೆ ಮೊದಲಾದವುಗಳಲ್ಲಿ ಅವರದೇ ಸಿಂಹಪಾಲು ಇರುವುದರಿಂದ ಇಡೀ ಸಮುದಾಯದ ಮೇಲೆ ಅವರು ಬಿಗಿ ಹಿಡಿತ ಹೊಂದಿದ್ದಾರೆ.

2000ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ 5, ಕಾಂಗ್ರೆಸ್ 3 ಸ್ಥಾನ ಪಡೆದರೆ 2004ರ ಚುನಾವಣೆಯಲ್ಲಿ 5 ಜೆಡಿ(ಎಸ್)ಗೆ, ಬಿಜೆಪಿ, ಕಾಂಗ್ರೆಸ್ ತಲಾ ಒಂದನ್ನು ಪಡೆದವು. ನಂತರ ನಡೆದ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ನಗರಸಭಾ ಚುನಾವಣೆಗಳಲ್ಲಿ ಜೆಡಿ(ಎಸ್) ಹಿಡಿತ ಸಾಧಿಸಿತು. ಇಂದಿನ ಎಂಪಿ.ಯೂ ಜೆಡಿ(ಎಸ್)ನ ಎಚ್.ಡಿ. ದೇವೇಗೌಡರೇ ಆಗಿದ್ದಾರೆ. ಹೊಳೆನರಸೀಪುರ ತಾಲ್ಲೂಕು ಪಂಚಾಯತಿ ಹಾಗೂ ಪಟ್ಟಣ ಪಂಚಾಯತಿಯಲ್ಲಿ ಬೇರೆ ಯಾವ ಪಕ್ಷಕ್ಕೂ ಸ್ಥಾನವೇ ಇಲ್ಲ. ಎಲ್ಲಾ ಜೆಡಿ(ಎಸ್)ಮಯ. ಜೆಡಿ(ಎಸ್) ಮೇಲೆ ಏನೋ ಒಂಥರಾ ವ್ಯಾಮೋಹ. ನಮ್ಮದೇ ಎನ್ನುವ ಅಭಿಮಾನ ಈ ಚುನಾವಣೆಯಲ್ಲಿ ಮೂಡಿದೆ. ಬೇರೆ ಎಲ್ಲಾ ಪಕ್ಷಗಳಲ್ಲೂ ಒಕ್ಕಲಿಗ ಸಮುದಾಯದ ನಾಯಕರಿದ್ದಾರೆ. ಜಾತಿ ರಾಜಕೀಯದ ಲಾಭವನ್ನು ಜೆಡಿ(ಎಸ್) ಬಿಟ್ಟರೆ ಬೇರೆ ಯಾರಿಗೂ ಪಡೆಯಲಾಗಿಲ್ಲ.

ದಲಿತರದ್ದು ಪ್ರಶ್ನಿಸಲಾರದ ಸ್ಥಿತಿ :

ದಲಿತರದು ಪ್ರಶ್ನಿಸಲಾರದ ಸ್ಥಿತಿ. ತಮ್ಮ ಶೇ.18ರ ಮೀಸಲು ಹಣವು ಏನಾಗುತ್ತಿದೆ ಎಂದು ಬಹಿರಂಗವಾಗಿ ಕೇಳಲಾರದ ಸ್ಥಿತಿ. ದಲಿತ ಸಂಘಟನೆಗಳಲ್ಲಿ ದಲಿತರೇ ನಾಯಕರಿದ್ದಾರೆ. ಆದರೆ ದಲಿತರಿಗೇ ಅವುಗಳ ಮೇಲೆ ವಿಶ್ವಾಸವಿಲ್ಲ. ಜಾತಿ ರಾಜಕೀಯವು ಪರಾಕಾಷ್ಠೆ ತಲುಪಿರುವ ಜಿಲ್ಲೆಯಲ್ಲಿ ಕಾಂಗ್ರೆಸ್, ಬಿಜೆಪಿಯಲ್ಲೂ ಕೂಡ ಜಾತಿ ಪ್ರಧಾನ ಅಂಶ. ಆದರೆ ಲಾಭ ಮಾಡಿಕೊಂಡಿದ್ದು ಜೆಡಿ(ಎಸ್), ಕಾಂಗ್ರೆಸ್‌ನಲ್ಲಿ ಒಕ್ಕಲಿಗ ಸಮುದಾಯದ ನಾಯಕರೇ ಇದ್ದರೂ ಅದು ಗತವೈಭವದ ಕನಸಿನಲ್ಲಿ ತೇಲುತ್ತಿದೆ. ಪಿಚ್‌ನಲ್ಲಿ ಕಾಂಗ್ರೆಸ್ ನಾಯಕರು ನಿಲ್ಲುತ್ತಿಲ್ಲ. ಎಲ್ಲಕ್ಕೂ ಮೇಲಕ್ಕೆ ನೋಡುವುದೇ ಆಗಿದೆ. ಇದುವರೆಗೂ ಕಾಂಗ್ರೆಸ್‌ನ ಬೆಂಬಲಿಗರಾಗಿದ್ದ ದಲಿತ, ಅಲ್ಪಸಂಖ್ಯಾತರ ಮಧ್ಯೆ ಬಿಎಸ್‌ಪಿ ಬಂದಿದೆ. ಇದು ಕಾಂಗ್ರೆಸ್‌ಗೆ ಹೊಡೆತ ನೀಡಿದ್ದರೆ ಬಿಜೆಪಿ ಲಾಭ ಗಿಟ್ಟಿಸಲು ಪ್ರಯತ್ನಿಸುತ್ತಿದೆ. ರಾಜ್ಯದ ರಾಜಕೀಯದಲ್ಲಾದ ಬದಲಾವಣೆ ಜಿಲ್ಲೆಯಲ್ಲಿ ಯಾವ ಪರಿಣಾಮ ಬೀರ'ಲಿದೆ' ಎಂಬುದನ್ನು ಕಾದು ನೋಡಬೇಕಾಗಿದೆ.



'ಅಭಿವೃದ್ಧಿ'ಗಾಗಿ ಒಡೆದುಹಾಕಲಾದ ಕಟ್ಟಡ

ಸಿಪಿಐ(ಎಂ)ನ ಸಮ್ಮೇಳನದಲ್ಲಿ ಚರ್ಚಿಸಲಾದ, ವರದಿಯಲ್ಲಿ ಜಾತಿ ರಾಜಕೀಯದ ಬಗ್ಗೆ, ಅದರ ಒಟ್ಟು ಪರಿಣಾಮದ ಬಗ್ಗೆ ಆತಂಕ ವ್ಯಕ್ತವಾಗಿದೆ. ಜಾತಿಯ ಅಭಿಮಾನವು ದುರಭಿಮಾನವಾಗಿ ಬೆಳೆದು ಜನತೆಯ ನಿಜವಾದ ಸಮಸ್ಯೆಗಳು, ಪ್ರಶ್ನೆಗಳು ಗಣನೆಗೆ ಬರುವುದಿಲ್ಲ. ಜಾತಿ ಆಧಾರಿತವಾಗಿ ರಾಜಕಾರಣ ಬೆಳೆದು ಜಾತಿ ಧೃವೀಕರಣಕ್ಕೆ ಒತ್ತು ನೀಡುವುದರಿಂದ ಸಮಾಜದಲ್ಲಿ ಜನತೆಯ ವಿಭಜನೆಯಾಗಿ ಒಟ್ಟು ಸಮಾಜದ ಪ್ರಗತಿಗೆ ಅಡ್ಡಿಯುಂಟಾಗುತ್ತದೆ. ಜಾತಿ ರಾಜಕೀಯ ಹಾಗೂ ಜಾತಿ ಧೃವೀಕರಣದ ಬದಲಿಗೆ ಎಲ್ಲ ಶೋಷಿತರನ್ನು, ಬಡವರನ್ನು, ಸೌಲಭ್ಯಗಳಿಂದ ವಂಚಿತರಾಗುವವರನ್ನು ಅವರ ಸಮಸ್ಯೆಗಳ ಆಧಾರದಲ್ಲಿ ಒಂದು ಪ್ರಗತಿಪರ ನೆಲೆಗಟ್ಟಿನಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸಿ ಸಮಾಜದ ಅಭಿವೃದ್ಧಿಯಲ್ಲಿ ಭಾಗೀದಾರರನ್ನಾಗಿಸಲು ಸಮ್ಮೇಳನ ನಿರ್ಧರಿಸಿದೆ. ಈ ರೀತಿಯ ದೋರಣೆಗಳಿಂದಾಗಿಯೇ ಸಿಪಿಐ(ಎಂ) ಜನತೆಗೆ ಇತರ ಪಕ್ಷಗಳಿಗಿಂತ ಭಿನ್ನವಾಗಿ ಕಾಣಿಸುತ್ತದೆ ಅಂತ ಅನಿಸುತ್ತದೆ.



ಹೆಚ್.ಡಿ.ರೇವಣ್ಣ

ಜನ ಕಳೆದುಕೊಂಡದ್ದೆ ಹೆಚ್ಚು :

ಜಿಲ್ಲೆಯ ಅಭಿವೃದ್ಧಿಯ ಹೆಸರಿನಲ್ಲಿ ಸಾಕಷ್ಟು ಹಣ ಹರಿದುಬಂದಿದ್ದರೂ ಅದು ಕೇವಲ ಕಟ್ಟಡ ಕಟ್ಟುವ ಕೆಲಸಕ್ಕೆ ಸೀಮಿತವಾಗಿದೆ. ಟರ್ಮಿನಲ್ ಮಾರುಕಟ್ಟೆಗಳು, ವಿಮಾನ ನಿಲ್ದಾಣ, ಚಾಲಕರ ತರಬೇತಿ.ಕೇಂದ್ರ, ಪೈಲಟ್ ತರಬೇತಿ ಕೇಂದ್ರ ಥರ್ಮಲ್ ವಿದ್ಯುತ್ ಉತ್ಪಾದನಾ ಕೇಂದ್ರ, ಗಾಲ್ಫ್ ಕ್ಲಬ್ ಹೀಗೆ ಯೋಜನೆಗಳು ಶಂಕುಸ್ಥಾಪನೆ ಕಂಡವು. ಭೂಮಿ ವಶಪಡಿಸಿ ಕೊಳ್ಳಲಾಯಿತು. ಅಲ್ಲಿದ್ದ ಹಳೆ ಕಟ್ಟಡಗಳನ್ನು ಕೆಡವಲಾಯಿತು. ಈಗ ಭೂಮಿ ವ್ಯರ್ಥವಾಗಿ ಬಿದ್ದಿದೆ. 200 ಕೋಟಿ ವೆಚ್ಚದಲ್ಲಿ ಹೊರವರ್ತುಲ ರಸ್ತೆಗೆ ಯೋಜನೆ ಸಿದ್ದಗೊಂಡಿತ್ತು. ಲೋಕದ ಕಣ್ಣಿಗೆ ಎಲ್ಲವೂ ಹಾಸನಕ್ಕೆ ಬಂತು. ಆದರೆ ಏನೂ ಆಗಲಿಲ್ಲ. ಜನ ಕಳೆದುಕೊಂಡಿದ್ದೆ ಹೆಚ್ಚು. ಹಾಸನ ನಗರ ಇದರಿಂದ ಹಾಳುಬಿದ್ದಂತೆ ಆಗಿದೆ. ಜೊತೆಗೆ ಜೀವನ ದುಬಾರಿಯೂ ಆಯಿತು. ಭೂಮಿ ಬೆಲೆ ಚದರ ಅಡಿಗೆ 3000 ರೂಪಾಯಿಯಿಂದ 4000ಕ್ಕೆ ಏರಿತು. ಹಾಸನದ ಪಶ್ಚಿಮಕ್ಕೆ 27 ಸ್ಲಂಗಳ ಏರಿಯಾ ಗುರುತಿಸಲಾಯಿತು. ಅಧಿಕೃತವಾಗಿ 18 ಸ್ಲಂ ಏರಿಯಾಗಳ ಅಭಿವೃದ್ಧಿಗೆ ಯೋಜನೆಗೆ ಸಿದ್ಧವಾಯಿತು. ಜಾರಿಯಾಗಲಿಲ್ಲ. ಕನಿಷ್ಟ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿಲ್ಲ. ನೂತನ ನಗರಸಭೆ ವಿರುದ್ಧ ಆ ಪ್ರದೇಶದ ಜನ ಹೋರಾಟಕ್ಕೆ ಮುಂದಾಗಿದ್ದಾರೆ.

ಪುಟ 13ಕ್ಕೆ


ಹಾಸನ ಅಭಿವೃದ್ಧಿ ಆಗುತ್ತಿದೆಯೇ?

2004ರ ಚುನಾವಣೆಯ ನಂತರ ಹಾಸನ ಜಿಲ್ಲೆ ಅಭಿವೃದ್ಧಿ ಪಥದಲ್ಲಿ ತ್ವರಿತಗತಿಯಲ್ಲಿ ಸಾಗುತ್ತಿದೆ ಎಂದು ಹೊರಗಿನವರಿಗೆ ಅನ್ನಿಸಿದ್ದು ಸಹಜವೇ. ಹುಲುಸಾದ ಖಾತೆಗಳನ್ನು ಹೊಂದಿದ್ದ ರೇವಣ್ಣ, ಸಿ.ಎಂ. ಕುಮಾರಸ್ವಾಮಿ, ಜೆಡಿ(ಎಸ್)ಗೆ ಪರಮಪೂಜ್ಯ ನಾಯಕರಾಗಿರುವ ದೇವೇಗೌಡ ಈ ಮೂವರು ಜಿಲ್ಲೆಯವರೇ ಆಗಿದ್ದು ಸರ್ವಬಲ ಪ್ರಯೋಗಕ್ಕೆ ಅವಕಾಶವಿದ್ದುದರಿಂದ ಸುಮಾರು 36,000 ಕೋಟಿ ರೂಪಾಯಿಯಷ್ಟು ಹಣ ಹರಿಯಿತು ಜಿಲ್ಲೆಗೆ ಎಂದು ದಾಖಲೆ ಹೇಳುತ್ತದೆ. ಹಾಸನ ನಗರ ಇನ್ನೇನು ಹಾಸನದ ಮ್ಯಾಂಚೆಸ್ಟರ್ ಆಗಿ ಹೋಯಿತು ಎಂದು ನೆರೆಹೊರೆಯ ಜಿಲ್ಲೆಯವರು ಮಾತಾಡಿಕೊಂಡರು. ಹಳೆಕಟ್ಟಡ ಒಡೆಯಲಾಯಿತು. ಸಾಕಷ್ಟು ಯೋಜನೆಗಳು ಜಾರಿಯಾದವು. ರಸ್ತೆ ಅಗಲೀಕರಣಕ್ಕೆ ಅಂತ ರಸ್ತೆ ಬದಿಯನ್ನು ಅಗೆಯಲಾಯಿತು. ಈಗ ಸರ್ಕಾರ ಬಿದ್ದುಹೋಯಿತು. ಗುಂಡಿಬಿದ್ದ ರಸ್ತೆಗಳು, ಅರ್ಧ ಒಡೆದ ಕಟ್ಟಡಗಳು ಹಾಗೇ ಉಳಿದಿವೆ. ಶೈಕ್ಷಣಿಕವಾಗಿ ಹಾಸನಕ್ಕೆ ಮೆಡಿಕಲ್ ಕಾಲೇಜು, ಎಂಜನಿಯರಿಂಗ್, ಪಾಲಿಟೆಕ್ನಿಕ್ ಹೊಸ ಕೋರ್ಸ್‌ಗಳು, ಕಾನೂನು ಕಾಲೇಜು, ಪಶು ವೈದ್ಯಕೀಯ ಕಾಲೇಜು, ಐಟಿಐ ಮುಂತಾದವು ಬಂದವು. ಮೆಡಿಕಲ್ ಕಾಲೇಜನ್ನು ನಗರದ ಮಧ್ಯಕ್ಕೆ ಪ್ರತಿಷ್ಠಾಪಿಸಿದ್ದರಿಂದ ಸಾಕಷ್ಟು ಸಮಸ್ಯೆಯಾಯಿತು. ಇದರಿಂದ ಮೆಡಿಕಲ್ ಕಾಲೇಜಿಗೆ ಸರಿಯಾದ ಕ್ಯಾಂಪಸ್ ಇಲ್ಲ. ಮುಂದೆ ಕಾಲೇಜನ್ನು ವಿಸ್ತರಿಸಲೂ ಕಷ್ಟವಾಗಿದೆ. ಮೆಡಿಕಲ್ ಕಾಲೇಜನ್ನು ಕಟ್ಟಲು, ಕಟ್ಟಿ ಮೂರೇ ವರ್ಷ ಆಗಿರುವ ಈಗಿನ ಜಿಲ್ಲಾಸ್ಪತ್ರೆ ಕಟ್ಟಡ, ನ್ಯಾಯಾಲಯ ಸಂಕೀರ್ಣ ಎರಡು ಪಿ.ಯು.ಕಾಲೇಜುಗಳು ಬಲಿಯಾಗಿವೆ. ಬ್ರಿಟೀಷರು ಕರ್ನಾಟಕದ ಶ್ರೀಗಂಧ ದೋಚಿದ ಕತೆ ಹೇಳುವ ಗಂಧದ ಕೋಡಿ ಬಲಿಯಾಯಿತು. ಹೊಸ ಆಸ್ಪತ್ರೆಗಾಗಿ, ವಸತಿಗೃಹ ವಿಸ್ತರಣೆಗೆ ಹಾಗೂ ಕ್ಯಾಂಪಸ್ ವಿಸ್ತರಣೆಗೆ ಪಕ್ಕದ ಹೈಸ್ಕೂಲು ಮೈದಾನ ಬಲಿಯಾಗಲಿದೆ. 2 ಪಿ.ಯು ಕಾಲೇಜುಗಳನ್ನು ಒಡೆದಿದ್ದರಿಂದ ಅಲ್ಲಿನ 5,000 ವಿದ್ಯಾರ್ಥಿಗಳು ಸಮುದಾಯಭವನ, ಛತ್ರಗಳಲ್ಲಿ ಪಾಠ ಹೇಳಬೇಕಾಯಿತು. ಹೊಸ ಕಾಲೇಜುಗಳ ಕಾಮಗಾರಿ ನಿಂತು ನಿಂತು ನಡೆಯುತ್ತಿದೆ.

ಹಾಸನದ ಬಸ್ ನಿಲ್ದಾಣದ ಪಕ್ಕದಲ್ಲಿ ಮಾರ್ಕೆಟ್ ಇದೆ. ಅದನ್ನು ಅಭಿವೃದ್ಧಿಪಡಿಸಲು ಯಾರದೂ ವಿರೋಧವಿಲ್ಲ. ಆದರೆ ಅಲ್ಲಿರುವ ವ್ಯಾಪಾರದಿಂದಲೇ ಜೀವನ ನಿರ್ವಹಿಸುತ್ತಿರುವ 3,000ಕ್ಕೂ ಅಧಿಕ ಕುಟುಂಬಗಳಿವೆ. ಅವುಗಳಿಗೆ ಸರಿಯಾದ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡದೆ ಅಲ್ಲಿಂದ ಓಡಿಸುವುದು ನ್ಯಾಯವಲ್ಲ. ಸೂಪರ್ ಮಾರ್ಕೆಟ್ ಮಾಡಿ ದೊಡ್ಡವರಿಗೆ ನೀಡಿ ಬಡ ಸಣ್ಣ ವ್ಯಾಪಾರಸ್ಥರನ್ನು ಬೀದಿಪಾಲು ಮಾಡಲಾಗುತ್ತಿದೆ. ಬಡ ವ್ಯಾಪಾರಸ್ಥರು ತಮಗೂ ಅವಕಾಶ ನೀಡುವಂತೆ ಸಂಘರ್ಷಕ್ಕೆ ಮುಂದಾಗುತ್ತಿದ್ದಾರೆ.



ಕೆ.ನೀಲಾ



ನಾವು ಮೆಟ್ಟಿಲಿಳಿದು ಬರುವಾಗ ಇಳಿವಯಸ್ಸಿನ ಆಶಾಬಾಯಿಯು ನನ್ನ ಕೈಗಳೆರಡನ್ನು ಒತ್ತಿ ಹಿಡಿದು, ಅನಂತರ ಸತ್ಯಗಳನ್ನಡಗಿಸಿ ಕೊಂಡ ಕಣ್ಣಾಲಿಗಳಿಂದ ಹನಿ ನೀರು ಚೆಲ್ಲಿ, ನಡುಗುವ ತುಟಿಗಳ ನಡುವಿಂದ ಒಂದೇ ಒಂದು ಮಾತು ಕೇಳಿದಳು, ಅಲ್ಲಲ್ಲ ಹೇಳಿದಳು "ನನ್ನ ಕೈ-ಕಾಲು ನಡೆಯುವಾಗಲೇ ಬೇಗ 'ಸಾವು' ಬರಲೆಂದು ನನ್ನನ್ನು ಹಾರೈಸು ಮಗಳೇ..." ನಾನು ತಲ್ಲಣಿಸಿ ಹೋದೆ.

ಬಾಳ ಸಂಜೆಯ ಬಯಕೆ

ವಾರಣಾಸಿಯ ಗಂಗೆ ನನ್ನೊಳಗಿನ ಅನಂತ ಭಾವನೆಗಳ ಪ್ರತೀಕವಾಗಿ ಹರಿಯುತ್ತಿದೆ. ಘನ ಗಂಭೀರವಾಗಿ ಸದ್ದು-ಸಪ್ಪಳ ಮಾಡದೆ, ಅದಮ್ಯ ಶಕ್ತಿಯೇ ಸಂಚಯನಗೊಂಡಂತೆ. ಭಕ್ತಾದಿಗಳ ಹುಚ್ಚು ಭಕ್ತಿಗೆ ಗಂಗೆ ಮಲಿನಗೊಳ್ಳುವ ರೀತಿ ಬೇಸರ ತರುತ್ತಿತ್ತು. ಈ ಗಂಗೆ ಅಸಂಖ್ಯ ಜನಕೋಟಿಯ ತುತ್ತಿನ ಚೀಲ ತುಂಬುವ ಜೀವ ಜಲವೇ ಹೌದು. ಆದರೆ ಗಂಗೆಗೊಂದು ವಂದನೆ ಸಲ್ಲಿಸುವ ಆಚರಣೆಗಳು ಮುಗ್ಧಭಕ್ತಿಯಾಗಿಯೇನು ಉಳಿದಿಲ್ಲ. ವಿಕೃತ ಮನಸಿನ ಮತೀಯ ಆಟಗಳೆಲ್ಲ ಗಂಗೆಯ ತಟದಲ್ಲಿ ನಡೆಯುತ್ತಿವೆ. ಸಂಘ ಪರಿವಾರಗಳು ಬೇರೆಲ್ಲಕ್ಕಿಂತಲೂ ಹೆಚ್ಚು ಗಂಗೆಯನ್ನು ಆಯುಧವಾಗಿಸಿಕೊಂಡಿದ್ದಾರೆ. ಸಾಯಂಕಾಲದ ಆರತಿ ಸಂಭ್ರಮ ಪ್ರವಾಸಿಗರನ್ನು ಸೆಳೆವ ಪರಿಗೆ ಗಾಬರಿಯಾಗುತ್ತದೆ. ಹಿಂದುಳಿದ ವರ್ಗಕ್ಕೆ ಸೇರಿದ ಎಳೆ ಕಂದಮ್ಮಗಳು ಬುಟ್ಟಿಯಲ್ಲಿ ಹೂವು ಮತ್ತು ಮೇಣದ ಪುಟ್ಟ ಪಣತಿ ಮಾರಲು ತುಂಬ ಚಾಕುಚಕ್ಯತೆಯಿಂದ ದೋಣಿಯಿಂದ ದೋಣಿಗೆ ಜಿಗಿಯುವ ರೀತಿಗೆ ಬೆರಗಾಗಲೇಬೇಕು. ಗಂಗೆಯ ಸೆರಗ ಉಡಿಯಲ್ಲಿ ಎಷ್ಟೊಂದು ದೋಣಿಗಳು! ಹರೆಯದ ಗಂಗಾಪುತ್ರರು ಪ್ರವಾಸಿಗರನ್ನು ವಿಶ್ವನಾಥ ದೇವಾಲಯುದವರೆಗೆ ಬಲು ಭಕ್ತಿಯಿಂದ ತಲುಪಿಸುವರು. ನೋಡನೋಡುತ್ತಲೇ ನಾಟಕೀಯವಾಗಿ ಶುರುವಾಗುವ ಆರತಿ, ಗಂಟೆ-ಜಾಗಟೆಗಳು ಮೊಳಗತೊಡಗಿದವು. ಲೆಕ್ಕಕ್ಕೆ ಸಿಗದಷ್ಟು ಪತ್ರೋಳಿಯ ಬಟ್ಟಲು ದೀಪ ಮತ್ತು ಹೂವಿನೊಂದಿಗೆ ಗಂಗೆಯ ಮೈ ತುಂಬಿ ಮಿನುಗಿ ಹರಿಯತೊಡಗಿದವು. ಎಲ್ಲೋ ಒಂದು ಕಡೆ ಗಂಗೆಯ ಒಡಲು ಸೇರಿ ತಿಳಿ ನೀರನ್ನು ಹೊಲಸು ಮಾಡುವುದು ಖರೆ ಎಂಥ ಹುಚ್ಚುತನ! ಒಂದೆಡೆ ಹೆಣಗಳ ರಾಶಿ ಮತ್ತೊಂದೆಡೆ ತರಹೇವಾರಿ ವಸ್ತುಗಳು.

ಹೌದು ಹೆಣಗಳ ರಾಶಿ

ಹೌದು, ಹೆಣಗಳ ರಾಶಿ! ಬರೀ ಹೆಣಗಳ ರಾಶಿ!! ಸಂಗಾತಿಗಳೆಲ್ಲ ಕುತೂಹಲದಿಂದ ಬೆರಗಿನಿಂದ, ಗಾಬರಿಯಿಂದ ಒಂದಿಷ್ಟು ಅಳುಕುತ್ತ-ನಿರಂತರ ಬರುವ ಹೆಣಗಳ ಮೆರವಣಿಗೆ, ಸ್ನಾನ ಮತ್ತು ದಹ ವೀಕ್ಷಿಸುತ್ತಿದ್ದರು. ವಾರಣಾಸಿಯ ಚುನಾಯಿತ ಪ್ರತಿನಿಧಿಯ ತಾಯಿಯ ಹೆಣವು ದೊಡ್ಡ ಬೆಂಕಿಯ ಹೊಂಡದಲ್ಲಿ ತುಸು ಎತ್ತರದ ಕಟ್ಟೆಯ ಮೇಲೆ ಬೇಯುತ್ತಿತ್ತು. ನಮ್ಮ ಪಕ್ಕದಲ್ಲಿ ಕೂತ ಮಗ, ಆ ಹೊತ್ತಲ್ಲೂ ಜೊತೆಗಾರರೊಂದಿಗೆ ರಾಜಕೀಯ ದೇಶಾವರಿಯ ಮಾತಾಡುತ್ತಿದ್ದ. ಅನತಿ ದೂರದಲ್ಲಿ ಮಧ್ಯಮ ವರ್ಗದ, ಬಡವರ ಹೆಣಗಳು ಪುಟ್ಟಜ್ವಾಲೆಯ ಕುಂಡದಲ್ಲಿ ಸುಡುತ್ತಿದ್ದವು. ಹೆಂಗಸರು ಬರುವುದಿಲ್ಲ. ಹೆಣದ ಪುರುಷ ಸಂಬಂಧಿಕರು ಅಲ್ಲಲ್ಲಿ ನಿಂತಿದ್ದರು. ಇದೆಂಥ ಲೋಕ! ಗಂಗೆಯ ತಟದ ಹಿಂಬದಿಯ ಮೇಲೆ ಡೋಮರಾಜರ ಮನೆಗಳು. ಹೆಣಸುಡುವ ಕಾಯಕದವರು. ಅವರ ಮಕ್ಕಳು ಅಲ್ಲೇ ತುಸುವೇ ದೂರದ ಬಯಲಲ್ಲಿ ಕ್ರಿಕೆಟ್ ಆಡುತ್ತಿರುವರು. ಹೆಂಗಸರು ಮನೆಗೆಲಸದಲ್ಲಿ ನಿರತರಾಗಿರುವರು. ಗಂಡಸರು ಹೆಣಗಳಿಗಾಗಿ ಕಟ್ಟಿಗೆಯ ಹಾಸಿಗೆ ಸಿದ್ದಪಡಿಸುತ್ತಿರುವರು. ಕೆಲ ಮಕ್ಕಳು ತಂದೆಯವರಿಗೆ ನೆರವಾಗುತ್ತಿರುವರು. ಕಟ್ಟಿಗೆ ಒಟ್ಟುವುದೂ ಅದ್ಭುತ ಕಲೆ. ಮಲಗಿದ ಹೆಣ ಸುಡು-ಸುಡುತ್ತಲೂ ಉರುಳಿ ಬೀಳದಂತೆ ಕಟ್ಟಿಗೆಗಳ ಹಾಸು. ಹರಿಶ್ಚಂದ್ರ ಘಾಟ್ ಎಂಬ ಪ್ರಪಂಚವು ನಾನಾ ನಮೂನೆಯ ವಿದ್ಯಮಾನಗಳಿಂದ ತುಂಬಿದೆ. ಈ ಪಕ್ಕದಲ್ಲಿ ಹೆಣ ಆ ಪಕ್ಕದಲ್ಲಿ ಬಾಲ ಮುದುರಿಕೊಂಡು ಮಲಗಿದ ನಾಯಿಗಳು ಮತ್ತು ಗೊರಕೆ ಹೊಡೆಯುತ್ತಿರುವ ಕೆಲವು ಮುದಿ ಜೀವಗಳು.

ಬಾಳ ಸಂಜೆಯ ಮುದಿ ಜೀವಗಳು

ಹೌದು ಬಾಳ ಸಂಜೆಯ ಮುದಿ ಜೀವಿಗಳು. ತರಹೇವಾರಿ ರಾಜ ಮಹಾರಾಜರುಗಳ ಮನೆಯ ಜನ ಸತ್ತರೆ ಸುಡಲು ನಿರ್ಮಿಸಿಕೊಂಡ ಘಾಟ್‌ಗಳು. ಮೈಸೂರು ಮಹಾರಾಜರ ಕರ್ನಾಟಕ ಘಾಟ್ ಸಹ ಇದೆ. ಈಗ ಅಲ್ಲೆಲ್ಲ ದೊಡ್ಡ ಹೋಟೆಲ್‌ಗಳು ತಲೆಯೆತ್ತಿವೆ. ಕೆಳಗೆ ಹೆಣಸುಡುವ ವಿಶಾಲ ಬಯಲು ಹಾಗೇ ಇದೆ. ಮೇಲೆ ಅಲ್ಲಲ್ಲಿ ಮಂದಿರಗಳು ಇವೆ. ಅದರೊಳಗೆ ಜೀವನದ ಕೊನೆಯ ಕ್ಷಣಗಳನ್ನು ಎಣಿಸುತ್ತಿರುವ ವೃದ್ಧರು. ಅವರ ಕೊನೆಯ ಬಯಕೆ ಗಂಗೆಯ ಮಡಿಲಲ್ಲಿ ಜೀವ ಬಿಡುವುದು. ಪ್ರತಿದಿನವೂ ನೂರಾರು ಹೆಣಗಳು ಸುಡುವುದನ್ನು ನೋಡಿ ನೋಡಿ ಒಂದು ನಮೂನೆಯ ಭಾವರಹಿತ ಜೀವಗಳಾಗಿದ್ದಾರೆ. ಒಮ್ಮೊಮ್ಮೆ ತಮ್ಮ ಕಣ್ಮುಂದೆಯೇ ತಮ್ಮ ಹೆಣ ಸುಡುವುದನ್ನೂ ಕಾಣಬಲ್ಲರು. ಜೀವನಪೂರ್ತಿ ಪಯಣದ ಎಲ್ಲ ಏರು-ತಗ್ಗುಗಳನ್ನು ಕಂಡುಂಡ ಆ ಮುದಿ ಜೀವಗಳು ಕೊನೆಯಲ್ಲಿ 'ಸತ್ಯ'ದ ಭೇಟಿಯಾಗಿದ್ದರಿಂದ ದಿವ್ಯ ನಿರ್ಲಿಪ್ತತೆಯೇ ಮೈವತ್ತಂತೆ ತೆವಳುತ್ತಿರುವರು. ಅವರೆಲ್ಲ ಮೇಲ್ಜಾತಿಯವರೇ. ಗಂಗೆಯ ತಟದಲ್ಲಿ ದಲಿತರ ಹೆಣಗಳು ಸುಡುವುದಿಲ್ಲ.

ರೋಗ, ಮುಪ್ಪು, ಸಾವುಗಳು ಯಾರನ್ನು ಕಾಡಲಿಲ್ಲ ಹೇಳಿ? ಇವುಗಳ ವಿರುದ್ಧ ಸಮರ ಸಾರಿರುವ ಗಾಥೆಗಳು ಈ ನೆಲದುದ್ದಕ್ಕೂ ಸಿಗುತ್ತವೆ. ವೈಯಕ್ತಿಕ ನೆಲೆಯಲ್ಲಿ ಆಧ್ಯಾತ್ಮಿಕ ಪರಿಧಿಯಲ್ಲಿ, ಎಲ್ಲಕ್ಕೂ ಮಿಗಿಲಾಗಿ ರೋಗ, ಮುಪ್ಪು, ಸಾವನ್ನು ಯಾತನಾಮಯಗೊಳಿಸುವ ಜನ ವಿರೋಧಿ ನೀತಿಗಳ ವಿರುದ್ಧ ನಡೆಸಲಾದ ಈ ನೆಲದ ಹೋರಾಟಗಳೆಲ್ಲ ಯಾವ ಸಾಧನೆಗೆ ತಪಸ್ಸಿಗೆ ಕಡಿಮೆ ಇದೆ ಹೇಳಿ? ಈ ನಿತ್ಯ ನಿರಂತರ ಸಂಘರ್ಷಗಳು ಇಂದಿಗೂ ನಡೆಯುತ್ತಲೇ ಇವೆ. ಸಮತೆಯ ಬೆಳಕ ಕಿರಣಗಳಿಗಾಗಿ ಕಾಯುತ್ತಲೇ ಇರುವ ಜೀವಗಳು ಎಷ್ಟೊಂದು...! ನನಗೆ ಥಟ್ಟನೆ 'ವೃದ್ಧ ಮತ್ತು ವಿಧವಾ ಸದನ' ನೆನಪಾಯ್ತು. ನಾವು ಮೆಟ್ಟಿಲಿಳಿದು ಬರುವಾಗ ಇಳಿವಯಸ್ಸಿನ ಆಶಾಬಾಯಿಯು ನನ್ನ ಕೈಗಳೆರಡನ್ನು ಒತ್ತಿ ಹಿಡಿದು, ಅನಂತರ ಸತ್ಯಗಳನ್ನಡಗಿಸಿ ಕೊಂಡ ಕಣ್ಣಾಲಿಗಳಿಂದ ಹನಿ ನೀರು ಚೆಲ್ಲಿ, ನಡುಗುವ ತುಟಿಗಳ ನಡುವಿಂದ ಒಂದೇ ಒಂದು ಮಾತು ಕೇಳಿದಳು, ಅಲ್ಲಲ್ಲ ಹೇಳಿದಳು "ನನ್ನ ಕೈ-ಕಾಲು ನಡೆಯುವಾಗಲೇ ಬೇಗ 'ಸಾವು' ಬರಲೆಂದು ನನ್ನನ್ನು ಹಾರೈಸು ಮಗಳೇ..." ನಾನು ತಲ್ಲಣಿಸಿ ಹೋದೆ. ಆಶಾಬಾಯಿಯು ಬಿಳಿಯ ನೂಲುಟ್ಟು ಮಗುವಿನಂತೆಯೂ ಹಿರಿಯಳಂತೆಯೂ ಏಕಕಾಲದಲ್ಲಿ ಕಾಣಿಸತೊಡಗಿದಳು. ಇದು ಅವಳ ಬಾಳ ಸಂಜೆಯ ಉತ್ಕಟ ಬಯಕೆಯಾಗಿತ್ತು.

ವೃದ್ಧಾಶ್ರಮದಲ್ಲಿ....

ಸರ್ಕಾರ ನಡೆಸುವ ವೃದ್ಧಾಶ್ರಮದಲ್ಲಿ 19 ಜನ ವೃದ್ಧ ವಿಧವೆ ಮಹಿಳೆಯರಿರುವರು. ಒಬ್ಬೊಬ್ಬರದೂ ಒಂದೊಂದು ಕತೆ. ಭಾರತ-ಪಾಕಿಸ್ಥಾನ ಇಬ್ಭಾಗವಾದಾಗ ಪಾಕಿಸ್ತಾನದವಳಾದ ಆಶಾಬಾಯಿ ಮದುವೆಯಾಗಲಿಲ್ಲ. ಟೀಚರ್ ಕೆಲಸ ಮಾಡುತ್ತಾ ಬದುಕು ಸಾಗಿಸಿದಾಕೆ. ಒಡ ಹುಟ್ಟಿದವರೆಲ್ಲ ತಮ್ಮ ಸಂಸಾರ ಸಾಗರದಲ್ಲಿ ಮಗ್ನರಾಗಿದ್ದಾರೆ. ಗಂಡ-ಮಕ್ಕಳಿಲ್ಲದ ಇವಳ ಮುಪ್ಪಿನ ದಿನಗಳಿಗೆ ಊರುಗೋಲಾಗಲು ಯಾರಿಗೂ ಪುರುಸೊತ್ತಿಲ್ಲ. ಅಲ್ಲಿರುವ ಇನ್ನೊಬ್ಬ ಹಣ್ಣು ಮುದುಕಿಯ ಮಗ ಡಾಕ್ಟರು. ತಾಯಿಗೆ ಮನೆಯಲ್ಲಿಯೇ ಜೋಪಾನ ಮಾಡಲು ಸಿದ್ಧವಿಲ್ಲ. ಬೆಂಚಿನ ಮೇಲೆ ಕೂತು ದಪ್ಪ ಪುಸ್ತಕವನ್ನು ಓದುವ ಸರೋಜಾ ಧೀ ಅದ್ಭುತ ತತ್ವಜ್ಞಾನಿಯಂತೆ ಒಮ್ಮೆ ನಮ್ಮೆಡೆಗೆ ನೋಡಿ ಬುದ್ಧನಂತೆ ತಣ್ಣಗೆ ಮುಗುಳ್ನಕ್ಕು ತನ್ನ ಜೀವನ ಪುಟಗಳನ್ನು ಬಿಚ್ಚಿಟ್ಟಳು. ಆಕೆಯ ಗಂಡ ಪ್ರಸಿದ್ಧ ಪುಸ್ತಕ ಪ್ರಕಾಶಕ. ಇರಲು ಮನೆಯಿಲ್ಲದ್ದಕ್ಕೆ ಇಲ್ಲಿ ವಾಸ. ಎಡೆಬಿಡದೆ ಓದುವ ಅಜ್ಜಿಗೆ ಓದುವುದೇ ತಪಸ್ಸಿನಂತೆ. ಒಳಗಿನ ಕೋಣೆಯಲ್ಲಿ ಮಲಗಿದ ಕೂಸಿನಂಥ ಅಜ್ಜಿಯೊಬ್ಬಳು ಶಕ್ತಿಯೆಲ್ಲವೂ ಮುಂಗೈಗೆ ತಂದುಕೊಂಡು ಥಟ್ಟನೆ ಬಾಳೆ ಹಣ್ಣು ಎಳೆದುಕೊಂಡಳು. ಇನ್ನೊಬ್ಬಳು ನಡುಗುವ ಕೈಗಳೆರಡನ್ನು ಜೋಡಿಸಿದಳು ಅಷ್ಟೇ. ಅವಳೇನು ಹೇಳಿದಳು?! ಕತ್ತಲೆಯೂ ಸೀಳಿ ನುಗ್ಗಿದ ಅವಳ ಕಣ್ಣಾಳದ ದೈನ್ಯತೆ, ನಿವೇದನೆ, ಸಂಕಟ ಕರುಳಿರಿಯುತ್ತಿತ್ತು. ವರ್ಷಕ್ಕೆರಡು ಬಾರಿ ಬಂದು ಹೋಗುವ ಮಗ-ಸೊಸೆಯರ ನಿರೀಕ್ಷಣೆ ಮಾಡದೆ ಮಾಲಾಬಾಯಿಗೆ ಇರುವ ಬಯಕೆ ನಿರೀಕ್ಷೆ ಬೇರೆಯೇ ಆಗಿತ್ತು. ಆದರೆ ಅವರ್‍ಯಾರಿಗೂ ಗಂಗೆಯ ತಟದಲ್ಲಿ, ವಿಶ್ವನಾಥನ ಸನ್ನಿಧಿಯಲ್ಲಿ ತಮ್ಮ ದೇಹದ ಬೂದಿ ಚೆಲ್ಲಾಡಬೇಕೆಂಬ ಆಸೆ ಇಲ್ಲ. ಚಿತಾಭಸ್ಮವೂ ಗಂಗೆಗೆ ಹಾಕಬೇಕೆಂಬ ಭಕ್ತಿಯಿಲ್ಲ. ಕಾಶಿಯಲ್ಲಿದ್ದುಕೊಂಡು ಸಹ ಈ ಎಲ್ಲ ಶ್ರದ್ಧೆಗಳಿಂದ ಅತೀತರಾಗಿರುವ ವೃದ್ಧೆಯರು ಜೀವನದ ಎಲ್ಲ ಮಗ್ಗುಲಿನ ಚಿತ್ರಗಳನ್ನು ನಿಚ್ಚಳವಾಗಿ ನೋಡಿದವರು ಅವರಿಸಿರುವ ಏಕೈಕ ಬಯಕೆಯೊಂದೇ ಆ ಆಶ್ರಮದ ತುಂಬಾ ಢಾಳಾಗಿ ಹರಡಿತ್ತು. ಬೇಗ 'ಸಾವು' ಬರಲೆಂದು, ಮಣ್ಣಿಂದಾದ ದೇಹ ಮಣ್ಣಾದರೆ ಸಾಕು. ಸಾವೊಂದು ತಣ್ಣಗೆ ಬಂದು ತಮ್ಮ ನೆರೆತ ತಲೆಗೂದಲು ಸವರಿ ನಡೆದಾಡುವಾಗಲೇ ಅಪ್ಪಿಕೊಂಡರೆ ಸಾಕೆಂದು ಕಾಯುವ ಆ ವೃದ್ಧೆಯರು, ಶ್ವೇತಾಂಬರಿಯರು, ನನ್ನೊಳಗೆ ನೂರಾರು ಪ್ರಶ್ನೆಗಳು ಹುಟ್ಟು ಹಾಕಿದರು. ರಕ್ತ ಸಂಬಂಧ, ಕಳ್ಳು-ಬಳ್ಳಿಗಳಾಗಿದ್ದಕ್ಕೆ ಸಂಕಟಗಳಿಗೆ ಸ್ಪಂದಿಸಿಯಾರು, ಮುಪ್ಪಿಗೆ ಆಧಾರವಾದಾರು ಎಂಬುದೆಲ್ಲಾ ಸುಳ್ಳಾಗಿತ್ತು. ಜೀವನದುದ್ದಕ್ಕೂ ಮನೆ ಗಂಡ, ಮಕ್ಕಳು, ಸಂಬಂಧಿಕರೆಂದು ಬಡಿದಾಡಿದ ಮೇಲೂ, ಬಾಳ ಸಂಜೆಯಲ್ಲಿ ಒಂಟಿಯೆಂದರೆ ಒಂಟಿಯಾಗಿಯೇ ನಿಂತ ಅವರು... ಈಗಲೂ ಕಣ್ಮುಂದೆ ಥಟ್ಟನೆ ಅವತರಿಸುತ್ತಾರೆ. ಅವರೆಲ್ಲ ವಿಧವೆಯರೇ... ಆಸ್ತಿಯಿಲ್ಲದ, ಆಧಾರವಿಲ್ಲದ ಅವರ ನಡುವೆ ಜಾತಿ-ಮತಗಳೂ ಶೂನ್ಯವಾಗಿದ್ದವು. ಅವರು ಹೆಂಗಸರು ಮಾತ್ರ. ಮುಪ್ಪಿನ ಹೆಂಗಸರು. ಮಾನವೀಯ ಮೌಲ್ಯಗಳಿಗೆ ನೆಲೆ ಯಾವುದು? ಆರ್ಥಿಕ ಅಭಿವೃದ್ಧಿ ಒಂದೆಯೇ? ಅನೇಕ ಹೆಂಗಸರ ಮನೆಯ ಜನ ಆರ್ಥಿಕವಾಗಿ ಅನುಕೂಲಸ್ಥರೇ. ಆದರೆ ಮಾನವೀಯತೆ ಎಂಬುದೇ ಜಗತ್ತಿನ ಪ್ರಾಥಮಿಕ ಸಿದ್ಧಾಂತವಾಗಬೇಕಲ್ಲವೇ?

○

ಕಾರ್ಮಿಕ - ರೈತರ ಬಲಿ...........

ಪುಟ 8 ರಿಂದ

ಜಿಲ್ಲೆಯ ನಾಲ್ಕು ಜನ ಬಿಜೆಪಿ ಶಾಸಕರಾದ ಹಾವೇರಿಯ ಶಿವರಾಜ್ ಸಜ್ಜನ್, ರಾಣೆಬೆನ್ನೂರಿನ ಜಿ.ಶಿವಣ್ಣ, ಶಿಗ್ಗಾಂವಿಯ ರಾಜಶೇಖರ್ ಸಿಂಧೂರ್ ಮತ್ತು ಬ್ಯಾಡಗಿಯ ನೆಹರೂ ವಾಲೇಕಾರ್ ಎಲ್ಲರೂ ಬೆಂಗಳೂರಿನಲ್ಲಿ ಬಿಜೆಪಿ-ಜೆಡಿ(ಎಸ್) ಮರು ಮದುವೆಯ ವಿಷಯದಲ್ಲಿ ಬಿಜಿಯಾಗಿದ್ದರು. ಅತ್ತ ಹಾವೇರಿಯಲ್ಲಿ ಕಾರ್ಮಿಕರು ಹೆಂಡತಿ ಮಕ್ಕಳು ಸಮೇತರಾಗಿ ಕೈಯಲ್ಲಿ ವಿಷದ ಬಾಟಲಿ ಹಿಡಿದುಕೊಂಡು ಬೀದಿಗಿಳಿದಿದ್ದರೆ ಇತ್ತ ಹಾವೇರಿ ಜಿಲ್ಲೆಯ ಅಧಿಕಾರರೂಢ ಬಿಜೆಪಿ ಪಕ್ಷದ ಶಾಸಕರು ಯಾರ್‍ಯಾರಿಗೆ ಯಾವ್ಯಾವ ಮಂತ್ರಿಗಿರಿ ದಕ್ಕೀತು ಎಂಬ ಲೆಕ್ಕಾಚಾರದಲ್ಲಿ ಮುಳುಗಿ ಹೋಗಿದ್ದರು.

ಬೀದಿಗಿಳಿದ ವಿದ್ಯಾರ್ಥಿಗಳು : ಕಾರ್ಮಿಕರ ಮಕ್ಕಳಿಗಾದ ಅನ್ಯಾಯದಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಬೀದಿಗಿಳಿದು ಪ್ರತಿಭಟಿಸಿದರು. ತರಗತಿಗಳನ್ನು ಬಹಿಷ್ಕರಿಸಿ ಹಾವೇರಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ವಿದ್ಯಾರ್ಥಿಗಳು ಹುತಾತ್ಮ ಮೈಲಾರ ಮಹದೇವಪ್ಪ, ವೃತ್ತದಲ್ಲಿ ಪ್ರತಿಭಟನಾ ಸಭೆ ನಡೆಸಿದರು. ಎಸ್.ಎಫ್.ಐ. ನ ಸಂಸ್ಥಾಪಕ ಮುಖಂಡರೂ ಈಗ ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಮುಖಂಡರಾದ ಜಿ.ವಿ.ಶ್ರೀರಾಮರೆಡ್ಡಿ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು. ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ನಾರಾಯಣಕಾಳೆ ಅಧ್ಯಕ್ಷತೆ ವಹಿಸಿದ್ದರು. ರೈತ ಮುಖಂಡರಾದ ಅಕ್ಕಿ ಆಲೂರಿನ ಫಕೀರಪ್ಪ ಹೋತನಹಳ್ಳಿ, ರುದ್ರಪ್ಪ ಎಸ್.ಜಾಬೀನ್, ಹಕ್ಕಲಗೌಡ ಪಾಟೀಲ್, ಸಹದೇವಪ್ಪ ಶರಬಣ್ಣನವರ, ರಾಮ್ಕೋ ಇಂಡಸ್ಟ್ರೀಸ್ ಕಾರ್ಮಿಕರ ಸಂಘದ ಸಿಐಟಿಯು ಮುಖಂಡರಾದ ಜೆ.ಮೌಲಾಸಾಬ್, ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿ ಮುಖಂಡರುಗಳಾದ ಮುಕ್ತಾನಂದ ಹಿರೇಮನಿ, ಬಸವರಾಜ ಪೂಜಾರ್, ರಾಕೇಶ್ ವಾಲಿಕಾರ್, ಬಸವರಾಜ ಬಾರ್ಕಿ, ಜ್ಯೋತಿ, ಮಂಜುಳಾ ಹೆಡಿಗೊಂಡ, ವಿನಾಯಕ ಕುರುಬರ, ವಿಕಾಸ್ ಹಿರೇಮಠ, ಸಂತೋಷ್ ತಳವಾರ, ರಾಮು ವರ್ದಿ, ಮಾಲತೇಶ್ ಕಂಬಳಿ, ವಿಠ್ಠಲ ಬಂಡಿವಡ್ಡರ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಡಾ: ಪ್ರಶಾಂತ ನಾಲ್ವರ್ ಜಿಲ್ಲಾಧಿಕಾರಿಗಳ ಪರವಾಗಿ ಮನವಿಯನ್ನು ಸ್ವೀಕರಿಸಿದರು.

○

ಉಡುಪಿ: 'ಸಮುದ್ರ ಲಂಘನ' ಎಂಬ ರಾದ್ಧಾಂತ!

ಸಮುದ್ರ ದಾಟುವುದು ಈ ಕಾಲದಲ್ಲೂ ಅಂಥಾ ಅಪರಾಧವೇ? ಅಥವಾ ಇದರಲ್ಲಿ ಇನ್ನೇನಾದರೂ 'ರಾಜಕೀಯ' ಇದೆಯೇ?


ಆದಮಾರು ಶ್ರೀಪತಿ ಆಚಾರ್ಯ

ಪ್ರಸಿದ್ಧ ಯಾತ್ರಾಸ್ಥಳವೆನಿಸಿರುವ ಉಡುಪಿ ಕ್ಷೇತ್ರವು ತನ್ನ ಕೃಷ್ಣ ದೇವಸ್ಥಾನಕ್ಕೂ ಅಷ್ಟಮಠಗಳಿಗೂ ಪ್ರಖ್ಯಾತವಾಗಿರುವಂತೆ ಈ ಎಂಟು ಮಠಗಳ ನಡುವೆ ಆಗಾಗ್ಗೆ ಭುಗಿಲೇಳುವ ಜಟಾಪಟಿಗಳು ಹಾಗೂ ರಾದ್ಧಾಂತಗಳಿಗೂ ಹೆಸರುವಾಸಿಯಾಗಿದೆ. ಇಂತಹ ಒಳಜಗಳಗಳು ಕೆಲವರ ಪಾಲಿಗೆ ಮೋಜಿನ ಸಂಗತಿಯಾಗಿದ್ದರೆ ಪ್ರಾಮಾಣಿಕ ಭಕ್ತರ ಪಾಲಿಗೆ ತೀವ್ರ ಇರಿಸು, ಮುರಿಸು ಮತ್ತು ಧರ್ಮ ಸಂಕಟಕ್ಕೂ ಕಾರಣವಾಗುತ್ತವೆ.

ದೇಶದ ಇನ್ನಿತರ ಕಡೆಯ ಅನೇಕ ಯಾತ್ರಾಸ್ಥಳಗಳಿಗೆ ಹೋಲಿಸಿದರೆ ಉಡುಪಿಯಲ್ಲಿ ಭಕ್ತಾದಿಗಳ ಶೋಷಣೆ ಬಹಿರಂಗವಾಗಿ ನಡೆಯುವುದಿಲ್ಲ. ಇಲ್ಲಿ 'ಪಂಡಾ' ಜನರ ಕಾಟವಿಲ್ಲ; ದೇವರ ದರ್ಶನಕ್ಕೆ ಕಾಸುಕೊಡಬೇಕಾಗಿಯೂ ಇಲ್ಲ. ಗುಣಕ್ಕೆ ಮತ್ಸರವಿರಲಾರದು. ಹಾಗಿದ್ದರೂ ಇಲ್ಲಿ ಆಳವಾಗಿ ಬೇರು ಬಿಟ್ಟರುವ ಜಾತಿ ವ್ಯವಸ್ಥೆ, ಮಡುಗಟ್ಟಿರುವ ಕಂದಾಚಾರ ಮತ್ತು ಅಂಧ ಶ್ರದ್ಧೆಗಳು ಉಡುಪಿಯ ಸದ್ಗುಣಗಳಿಗೆ ಮಸಿ ಬಳಿಯುತ್ತವೆ, ಅಲ್ಲದೆ ಕೋಮುವಾದದ ಬೆಳವಣಿಗೆಗೂ ಫಲವತ್ತಾದ ನೆಲ ಒದಗಿಸುತ್ತವೆ.

ಪಾಕಿಸ್ತಾನಕ್ಕೆ ಬೇಕಾದರೆ ಹೋಗಬಹುದು..... ಆದರೆ......

ಈಗ ಕೆಲವು ವರ್ಷಗಳಿಂದ ಇಲ್ಲಿ ಹುಟ್ಟಿಕೊಂಡಿರುವ ಹೊಸ ವಿವಾದವೆಂದರೆ ಮಠಾಧಿಪತಿಗಳ ವಿದೇಶಯಾನ ಮತ್ತು ಸಮುದ್ರ ಲಂಘನದ ಪ್ರಶ್ನೆ. ಉಡುಪಿಯ ಮಠಾಧಿಪತಿಗಳು ನೆಲಮಾರ್ಗವಾಗಿ ನೇಪಾಳ, ಭೂತಾನ್ ಅಥವಾ ಬೇಕಿದ್ದರೆ ಪಾಕಿಸ್ಥಾನಕ್ಕೂ ಹೋಗಿ ಬರಬಹುದು. ಅದು ಧರ್ಮ ಬಾಹಿರ ಎನಿಸುವುದಿಲ್ಲ. ಆದರೆ ಅಕಸ್ಮಾತ್ ಅವರೇನಾದರೂ ಹಡಗು ಅಥವಾ ವಿಮಾನ ಏರಿ ಪಕ್ಕದ ಶ್ರೀಲಂಕಾಕ್ಕೇನಾದರೂ ಹೋದರೋ, ಅಲ್ಲಿಗೆ ಮುಗಿಯಿತು ಕಥೆ. ಹಾಗೆ ಸಮುದ್ರವನ್ನು ದಾಟಿ ಹೋಗುವಾಗ ಅವರು ಸಮುದ್ರದ ಮೇಲೆ ಮಲ-ಮೂತ್ರ ವಿಸರ್ಜನೆ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಸಮುದ್ರದ ಪಾವಿತ್ರ್ಯಕ್ಕೆ ಧಕ್ಕೆಯುಂಟಾಗುತ್ತದೆ. ಇದು ಧರ್ಮಬಾಹಿರ! ಇಂತಹ ಧರ್ಮ ಬಾಹಿರ ಕೃತ್ಯ ನಡೆಸಿದ ಸ್ವಾಮೀಜಿಗಳು ಉಡುಪಿ ಕೃಷ್ಣನ ಪೂಜೆ ಮಾಡಬಹುದೇ? ಇದೀಗ ಇದೇ ಜಿಜ್ಞಾಸೆಯಾಗಿಬಿಟ್ಟಿದೆ. ಸ್ವಾಮಿ ವಿವೇಕಾನಂದರಿಂದ ಮೊದಲುಗೊಂಡು ಕಳೆದ 125 ವರ್ಷಗಳಲ್ಲಿ ನಮ್ಮ ದೇಶದಿಂದ ಸಾವಿರಾರು ಮಂದಿ ಸ್ವಾಮೀಜಿಗಳು, ಧರ್ಮಗುರುಗಳು ಮತ್ತು ಪೀಠಾಧಿಪತಿಗಳು ವಿದೇಶ ಸಂಚಾರ ಮಾಡಿಬಂದಿದ್ದಾರೆ.


ಪೇಜಾವರ

ದೇವಮಾನವರ 'ಧರ್ಮ ಪ್ರಚಾರ'

ಅಮೇರಿಕಾಕ್ಕೆ ಹೋಗಿ ಡಾಲರುಗಳನ್ನು ದೋಚಿಕೊಂಡು ಬರುವ ದೇವಮಾನವರು ಮತ್ತು ಅಧ್ಯಾತ್ಮವಾದಿಗಳಿಗೆ ಲೆಕ್ಕವೇ ಇಲ್ಲ. ಬಹುತೇಕ ಪ್ರಕರಣಗಳಲ್ಲಿ ಮತ ಪ್ರಚಾರ, ಧರ್ಮಪ್ರಚಾರ, ಧಾರ್ಮಿಕ ಪ್ರವಚನ ಮುಂತಾದ ನೆಪದಲ್ಲಿ ಕೈಗೊಳ್ಳಲಾಗುವ ಈ ವಿದೇಶ ಸಂಚಾರದ ಹಿಂದೆ ವಾಸ್ತವವಾಗಿ ಹಣ ಸಂಪಾದನೆಯೇ ಮೂಲ ಉದ್ದೇಶವಾಗಿರುತ್ತದೆ. ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಜ್ಞಾನ ಭಂಡಾರದ ಕುರಿತು ಪರದೇಶಗಳಲ್ಲಿ ಅರಿವು ಮೂಡಿಸುವ ಕೆಲಸವಂತೂ ಮೆಚ್ಚಿಕೊಳ್ಳಬೇಕಾದದ್ದೆ. ಈಗಲಂತೂ ವಿಜ್ಞಾನ, ತಂತ್ರಜ್ಞಾನಗಳ ಅಮೋಘ ಪ್ರಗತಿಯಿಂದಾಗಿ ಜಗತ್ತು ತೀರಾ, ಸಂಕುಚಿತಗೊಂಡಿದೆ. ದೇಶ ವಿದೇಶಗಳು ಅಕ್ಕಪಕ್ಕದ ಮನೆಯಂತಾಗಿವೆ. ಉಡುಪಿ ಮಠಗಳ ಶಿಷ್ಯಕೋಟಿಯ ಮಕ್ಕಳೂ ಮಾಹಿತಿ ತಂತ್ರಜ್ಞಾನದ ಬೆನ್ನುಹತ್ತಿ ಅಮೇರಿಕಾದಲ್ಲಿ ನೆಲೆಸಿ ದುಡ್ಡನ್ನು ಬಾಚಿಕೊಳ್ಳುತ್ತಿದ್ದಾರೆ. ಮಠಾಧಿಪತಿಗಳು ವಿದೇಶದಿಂದ ತರುವ ಡಾಲರುಗಳಿಗೆ ಮೈಲಿಗೆ ಇಲ್ಲವೆಂದಾದರೆ, ಅವುಗಳು ಕೃಷ್ಣನ ಸೇವೆಗೆ ಬಳಸಲ್ಪಡಬಹುದಾದರೆ ಅಂತಹ ಡಾಲರುಗಳನ್ನು ತರುವ ಸ್ವಾಮೀಜಿ ಮಾತ್ರ ಮೈಲಿಗೆ ಹೇಗಾದಾರು?

ಸುಮಾರು ಎರಡು ದಶಕಗಳ ಹಿಂದೆ ಉಡುಪಿಯ ಅತ್ಯಂತ ಪ್ರಭಾವಶಾಲಿ ಸ್ವಾಮಿಗಳಾಗಿರುವ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರ ಪಟ್ಟ ಶಿಷ್ಯರಾಗಿದ್ದ ವಿಶ್ವವಿಜೇತ ತೀರ್ಥರೆಂಬವರು ಅಮೇರಿಕಾಕ್ಕೆ ತೆರಳಿ ಸಾಕಷ್ಟು ಕಾಸು ಮಾಡಿಕೊಂಡು ಬಂದರು. ಅವರು ಉಡುಪಿಗೆ ಬಂದೊಡನೆ ಉಳಿದ ಏಳು ಮಠಗಳ ಸ್ವಾಮೀಜಿಗಳು ಅವರ ಮೇಲೆ ಹರಿಹಾಯ್ದು, 'ಸಮುದ್ರ ಲಂಘನ' ಮಾಡಿದ ಅಪರಾಧಕ್ಕಾಗಿ ಅವರು ಪೀಠ ತ್ಯಾಗ ಮಾಡುವಂತೆ ಬಲವಂತ ಮಾಡಿದರು. ಅಲ್ಲಿಂದಲೇ ಈ ವಿವಾದ ಪ್ರಾರಂಭವಾಗಿದೆ.

ಕರ್ಮಠರ ಒತ್ತಡ

ಇದಾಗಿ ಕೆಲ ವರ್ಷಗಳ ಬಳಿಕ ಅದಮಾರು ಮಠದ ಹಿರಿಯ ಸ್ವಾಮಿಗಳಾದ ಶ್ರೀ ವಿಭುದೇಶ ತೀರ್ಥಸ್ವಾಮೀಜಿಯವರು ತಾನು ಪ್ರಾರಂಭಿಸಲಿರುವ ತಂತ್ರಜ್ಞಾನ ಪಾರ್ಕ್ ಒಂದಕ್ಕೆ ಹಣ ಸಂಗ್ರಹ ಮಾಡಲು ಅಮೇರಿಕಾಕ್ಕೆ ತೆರಳಿದರು. ಉಡುಪಿಯ ಸ್ವಾಮೀಜಿಗಳ ಪೈಕಿ ತೀರಾ ಅಪರೂಪವೆಂಬಂತೆ ಅದಮಾರು ಹಿರಿಯ ಶ್ರೀಗಳು ವಿಜ್ಞಾನ, ತಂತ್ರಜ್ಞಾನಗಳ ಕುರಿತು ಅಪಾರ ಆಸಕ್ತಿ ಹೊಂದಿರುವವರು. ಉಳಿದ ಸ್ವಾಮಿಗಳಂತೆ ಬರೇ ಭೋಜನ ಶಾಲೆಗಳಿಗೆ ಮಾತ್ರ ಧನವ್ಯಯ ಮಾಡದೆ ಶಿಕ್ಷಣ ಕ್ಷೇತ್ರದಲ್ಲೂ ಸಾಕಷ್ಟು ಸಾಧಿಸಿದವರು. 'ಇಂಗ್ಲಿಷ್ ಸ್ವಾಮಿ' ಎಂದು ಹೆಸರಾಗಿರುವ ಈ ಸ್ವಾಮೀಜಿ, ಉಡುಪಿ ಪರಿಸರದ ಶಿಕ್ಷಣ ಕ್ಷೇತ್ರದಲ್ಲಿ ಮಣಿಪಾಲದ ಪೈ ಬಂಧುಗಳ ಏಕಸ್ವಾಮ್ಯಕ್ಕೆ ಮೊದಲು ಸವಾಲೆಸೆದವರೂ ಇವರೇ. ಆದರೆ ಇಂಥವರು ಕೂಡ ವಿದೇಶಯಾನ ಮಾಡಿ ಬಂದ ಬಳಿಕ ಕರ್ಮಠರ ಒತ್ತಡವನ್ನು ಎದುರಿಸಲಾಗದೆ ಕೃಷ್ಣನ ಪೂಜೆ ಮಾಡುವ ಅಧಿಕಾರವನ್ನು ತನ್ನ ಶಿಷ್ಯರಿಗೆ ತಾನಾಗಿಯೇ ಬಿಟ್ಟು ಕೊಟ್ಟು ನಿವೃತ್ತರಾಗಬೇಕಾಯಿತು.


ಸು-ಗುಣೇಂದ್ರ

ಹನುಮಂತನಿಗೂ ನಿರ್ಬಂಧವೇ?

ಇದೀಗ ವಿದೇಶಯಾನ ಮಾಡಿ ಬಂದ 'ಅಪರಾಧ' ಕ್ಕಾಗಿ ತಲೆ ದಂಡ ತೆರುವ ಸರದಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥರದ್ದಾಗಿದೆ. ಮುಂದಿನ ಜನವರಿ 18ರಂದು ಪರ್ಯಾಯ ಪೀಠವೇರಿ ಎರಡು ವರ್ಷಗಳ ಕಾಲ ಕೃಷ್ಣನ ಪೂಜೆಯ ಅಧಿಕಾರ ವಹಿಸಲಿರುವ ಇವರ ವಿರುದ್ಧ ಅಷ್ಟಮಠಗಳಲ್ಲಿ ಈಗಾಗಲೇ ಅಪಸ್ವರವೆದ್ದಿದ್ದರೆ ಪುತ್ತಿಗೆ ಶ್ರೀಗಳವರು ಕೃಷ್ಣನ ಪೂಜೆಯ ಹಕ್ಕನ್ನು ತಾನಾಗಿಯೇ ಇನ್ನೊಬ್ಬರಿಗೆ ವಹಿಸಲಿ ಎಂದು ಕೆಲವರು ಹೇಳಿದರೆ ಇನ್ನಿತರರು ಅವರೇ ಪೂಜಾ ಕೈಂಕರ್ಯ ನಡೆಸಲಿ ಎಂದಿದ್ದಾರೆ. ಅದಮಾರು ಮಠದ ವಿಭುದೇಶ ತೀರ್ಥರಂತು ಸಮುದ್ರ ಲಂಘನ ಮಾಡಿದುದಕ್ಕಾಗಿ ಯಾರಿಗಾದರೂ ನಿಷೇಧ ಹೇರಬೇಕಿದ್ದರೆ ಸೀತಾ ಮಾತೆಯನ್ನು ಅರಸಿ ಸಮುದ್ರ ದಾಟಿ ಲಂಕೆಗೆ ಹಾರಿದ ಆಂಜನೇಯನಿಗೆ ಮೊದಲು ನಿಷೇಧ ಹೇರಬೇಕಾದೀತು ಎಂದು ಕಟಕಿಯಾಗಿದ್ದಾರೆ. ಆಂಜನೇಯನು ವಾಯುದೇವರ ಮೊದಲ ಅವತಾರವೆಂದು ಎರಡನೇಯ ಅವತಾರ ಭೀಮಸೇನನೆಂದೂ ಮೂರನೇ ಅವತಾರ ಶ್ರೀ ಮಧ್ವಾ ಚಾರ್ಯರೆಂದೂ ಇಲ್ಲಿ ನಂಬಲಾಗುತ್ತಿದೆ. ಶ್ರೀ ಮಧ್ವಾಚಾರ್ಯರೇ ಉಡುಪಿ ಮಠಗಳ ಸ್ಥಾಪಕರು. ಹಾಗಿರುವಾಗ ಹನುಮಂತನಿಗೆ ನಿಷೇಧ ಹೇರಲು ಸಾಧ್ಯವೇ? ಒಟ್ಟಿನಲ್ಲಿ ಈ ವಾದ ವಿವಾದಗಳು ಸಾಕಷ್ಟು ಮನರಂಜನೆಗೆ ಕಾರಣವಾಗಿವೆ. ಉಡುಪಿ ಮಠಗಳ ಸ್ವಾಮಿಗಳಿಗೆಲ್ಲ ಅಧ್ಯಾಪಕರಾಗಿದ್ದ ಮಹಾನ್ ವಿದ್ವಾಂಸರೊಬ್ಬರ ಮಗ ಶ್ರೀ ಬನ್ನಂಜೆ ರಾಮಾಚಾರ್ಯರೆಂಬ ಹಿರಿಯ ಪತ್ರಕರ್ತರಂತೂ "ದೇಶದ ಜನಸಂಖ್ಯೆಯ ವೃದ್ಧಿಗೂ ಕೊಡುಗೆ ನೀಡಿದ 'ಸನ್ಯಾಸಿ' ಕೃಷ್ಣನ ಪೂಜೆ ಮಾಡಬಹುದಾದರೆ ವಿದೇಶಯಾನ ಮಾಡಿದವರು ಯಾಕೆ ಪೂಜೆ ಮಾಡಬಾರದು" ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ!

ಒಟ್ಟಿನಲ್ಲಿ ಉಡುಪಿ ಮಠದ ಸ್ವಾಮೀಜಿಗಳು ತಮ್ಮ ಕಂದಾಚಾರ ಮತ್ತು ಕೂಪ ಮಂಡೂಕ ಪ್ರವೃತ್ತಿಯನ್ನು ಬಿಟ್ಟುಕೊಟ್ಟು ವಿದೇಶಯಾನವೆಂಬ ಕ್ಷುಲ್ಲಕ ವಿಷಯದಲ್ಲಿ ಕಿತ್ತಾಡುವುದನ್ನು ತ್ಯಜಿಸಿ "ಉದಾರ ಚರಿತಾಣಾಂತು ವಸುಧೈವ ಕುಟುಂಬಕಂ" ಎಂಬ ಮಾತನ್ನು ಅರ್ಥಪೂರ್ಣಗೊಳಿಸಲೆಂಬುದು ಸಾಮಾನ್ಯ ಜನರ ಹಾರೈಕೆ. ■

ಇಲ್ಲಿ ಜನ ಇದ್ದಾರೋ ಇಲ್ಲವೋ? ನೋಡಿ

ಇಲ್ಲಿರುವ ಚಿತ್ರ ನೋಡಿ. ಇಲ್ಲಿ ನೆರೆದ ಮಹಿಳೆಯರ ದಂಡು ನೋಡಿ. ಇದು ದೇವದಾಸಿ ಮಹಿಳೆಯ ಪ್ರತಿಭಟನಾ ಮೆರವಣಿಗೆ. ಹೊಸಪೇಟೆ ತಾಲ್ಲೂಕೊಂದರಲ್ಲೇ ಇಷ್ಟು ಜನ ಸೇರಿದ್ದಾರೆ. ಇನ್ನೂ ಜಿಲ್ಲಾ, ರಾಜ್ಯ ವ್ಯಾಪಿ ಎಂದರೆ?. ಆದರೆ ಕುರುಡು ಸರ್ಕಾರಕ್ಕೆ, ಸರ್ಕಾರದ ಕುರುಡು ಆಡಳಿತ ಯಂತ್ರಕ್ಕೆ ಇವೆಲ್ಲಾ ಲೆಕ್ಕ ಇಲ್ಲ. ರಾಜ್ಯದಲ್ಲಿ ದೇವದಾಸಿಯರದ್ದು, ಅವರು ತೋರಿಸಿದ್ದಷ್ಟೇ ಸಂಖ್ಯೆ ಬಡವರಿಗೆ ಕೊಡಬೇಕಾದ ಬಿಪಿಎಲ್ ಕಾರ್ಡ್ ವಂಚಿಸಲು ಬಡವರ ಅಂಕಿ ಸಂಖ್ಯೆಯನ್ನು ಕಡಿಮೆ ತೋರಿಸುವುದಿಲ್ಲವೇ? ಹಾಗೆ ಇದು. ಸರ್ಕಾರ ರಾಜ್ಯದಲ್ಲಿರುವುದು ಬರೇ 23 ಸಾವಿರ ಜನ ದೇವದಾಸಿಯರು ಎನ್ನುತ್ತದೆ.

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ



ವಿಮೋಚನಾ ಸಂಘ ಇದನ್ನು ಒಪ್ಪಿಲ್ಲ. ಪುನರ್ ಸಮೀಕ್ಷೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿದೆ. ಅಷ್ಟು ಮಾತ್ರ ಅಲ್ಲ, ಅವರಿಗೆ ಮನೆ, ಅಂತ್ಯೋದಯ ಪಡಿತರ ಚೀಟಿ, ಕೃಷಿ ಯೋಗ್ಯವಾದ 2 ಎಕರೆ ಭೂಮಿ, ಹೈನುಗಾರಿಕೆಗೆ ಶೇ.75 ಸಹಾಯಧನವುಳ್ಳ ಸಾಲ, ಅವರ ಮಕ್ಕಳಿಗೆ ಉಚಿತ ವಸತಿ ಸಹಿತದ ಶಿಕ್ಷಣ ಸೌಲಭ್ಯ ಇತ್ಯಾದಿ ಒದಗಿಸಬೇಕೆಂದು ಹೋರಾಡುತ್ತಿದೆ. ಇಂಥದ್ದೊಂದು ಹೋರಾಟ ಇತ್ತೀಚೆಗೆ ಹೊಸಪೇಟೆಯಲ್ಲಿ ನಡೆದಾಗಿನ ಚಿತ್ರ ಇದು. ದೇವದಾಸಿಯರ ಸಂಘದ ರಾಜ್ಯ ಅಧ್ಯಕ್ಷೆ ಬಿ.ಮಾಳಮ್ಮ ಪ್ರತಿಭಟನಾಕಾರರನ್ನುದ್ದೇಶಿ ಮಾತನಾಡಿದ್ದಾರೆ. ಸಂಘದ ತಾಲ್ಲೂಕು ಕಾರ್ಯದರ್ಶಿ ದುರ್ಗಾಕೋಟಿ ನೇತೃತ್ವ ವಹಿಸಿದ್ದರೆ, ಡಿವೈಎಫ್‌ಐನ ಕೆ.ರಮೇಶ್, ಹುಳ್ಳಿ ಪ್ರಕಾಶ್, [illegible].ಭಾಸ್ಕರ್‌ರೆಡ್ಡಿ, ಎಸ್‌ಎಫ್‌ಐ [illegible]

ಕಾಲಿಲ್ಲದ ಸಿಂಹಾಸನದ ಮೇಲೆ ರುಂಡವಿಲ್ಲದ ರಾಜ

ನ.12, ಕರ್ನಾಟಕದ ರಾಜಧಾನಿಯಲ್ಲಿ ವಿಧಾನಸೌಧದ ಮುಂದೆ ಗದ್ದಲವೋ ಗದ್ದಲ. ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ಬಿಜೆಪಿ ಪಕ್ಷದ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕರಿಸುವ ದಿನ. ಬಿಜೆಪಿಯ ಎಲ್ಲಾ ದಿಗ್ಗಜರೂ ಅಂದು ಬೆಂಗಳೂರು ಎಂಬ ಧರೆಗಿಳಿದಿದ್ದರು. ಬಿಜೆಪಿಯ ಅಖಿಲ ಭಾರತ ನಾಯಕ ಎಲ್.ಕೆ.ಅಡ್ವಾಣಿ, ಅಧ್ಯಕ್ಷ ರಾಜನಾಥಸಿಂಗ್, ಯಶವಂತಸಿನ್ಹಾ, ಮುರುಳಿ ಮನೋಹರ ಜೋಷಿ, ... ಬಿಜೆಪಿಯ ಮುಖ್ಯಮಂತ್ರಿಗಳಾದ ಗುಜರಾತಿನ ನರೇಂದ್ರಮೋದಿ.. ಇತ್ಯಾದಿ .. ಇತ್ಯಾದಿಗಳೆಲ್ಲ ದೇವಾನುದೇವತೆಗಳ ಅಪರಾವತಾರವೆಂಬಂತೆ ಶೋಭಿಸುತ್ತಿದ್ದರು. ಚಿದಾನಂದಮೂರ್ತಿ, ಸಾ.ಶಿ.ಮರುಳಯ್ಯ ಆದಿಯಾಗಿ ಬಿಜೆಪಿಯ ಅನೇಕ ವಂಧಿಮಾಗದರೂ ನೆರೆದಿದ್ದರು. ಕರ್ನಾಟಕ ತಮ್ಮ ಕಾಲ್ನಡಿಗೆ ಬಂದು ಬಿದ್ದೇಬಿಟ್ಟಿತು. ಇನ್ನು ಕರ್ನಾಟಕ ಘಡವನ್ನು ಹಿಡಿದು ಸುತ್ತಮುತ್ತಲಿನ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ದಾಳಿ ಮಾಡುವುದೊಂದೇ ಉಳಿದಿರುವುದು. ತಮ್ಮ ಕಪಿಸೈನ್ಯ, ಚದುರಂಗ ಬಲ, ಅಕ್ಷೋಹಿಣಿ ಸೈನ್ಯವನ್ನು ನೆರೆಸಿ ಧಾಳಿಯಿಡುವುದೇ ತಡ ಉತ್ತರ ದೇಶದ ಅಧಿಪತಿಗಳಾದ ನಮ್ಮ ಆರ್ಭಟಕ್ಕೆ ಇಲ್ಲಿಯವರೆಗೆ ಮಣಿಯದ ದಕ್ಷಿಣ ಪಥ ನಮ್ಮ ಕಾಲಡಿಗೆಯಲ್ಲಿ ಬಿದ್ದು ಹೊರಳಾಡುವುದು ಎಂಬ ಕನಸುಗಳಿಗೆ ರೆಕ್ಕೆ ಮೂಡಿ ಎಲ್ಲೆಂದರಲ್ಲಿ ಸಿಕ್ಕಾಪಟ್ಟೆ ಹಾರಾಡುತ್ತಿದ್ದವು. ಅಲ್ಲಿ ನೆರೆದಿದ್ದ ಕಪಿ ಸೈನ್ಯದ ತಲೆಯಲ್ಲಿ ಹೊಕ್ಕು ಅವರನ್ನು ಕುಣಿಸತೊಡಗಿದ್ದವು. ಬೆನ್ನ ಹಿಂದೆ ಅಯೋಧ್ಯೆ, ಮುಂದೆ ರಾಮಸೇತು ಮಧ್ಯೆ ಬಾಬಾಬುಡನ್‌ಗಿರಿ ಮತ್ತಿನ್ನೇನು ಬೇಕು!

ಹೋಮ, ಹವನ, ಮಂತ್ರ ಘೋಷಗಳ ನಡುವೆ ಯಡಿಯೂರಪ್ಪನವರ ಪಟ್ಟಾಭಿಷೇಕ ನಡೆದೇಹೋಯಿತು. ತಾವು ಕುಳಿತುಕೊಳ್ಳುವ ಸಿಂಹಾಸನಕ್ಕೆ ಜೆಡಿ(ಎಸ್) ಎಂಬ ಕಾಲುಗಳೇ ಇರಲಿಲ್ಲವೆಂಬುದು ಅಧಿಕಾರದ ಆ ಉದ್ರೇಕ, ಆ ಮತ್ತಿನಲ್ಲಿ ಯಾರಿಗೂ ಬೇಕಾಗಿರಲಿಲ್ಲ. ಆಲಯದೊಳಗೆ ಅದೇ ಗಮ್ಮತ್ತಿನಲ್ಲಿ ವಿಧಾನಸೌಧವೆಂಬ ಆಲಯದೊಳಗೊಂದು ದರ್ಬಾರು, ಹೊರಗೆ ಬಯಲಿನೊಳಗೊಂದು ಕಾರುಬಾರು ನಡೆಯಿತು. ಕಾಲುಗಳಿಲ್ಲದ ಸಿಂಹಾಸನದ ಮೇಲೆ ರುಂಡವಿಲ್ಲದ ರಾಜ ಕುಕ್ಕುರುಗಾಲಿನಲ್ಲಿ ಕುಳಿತು ಕರ್ನಾಟಕದ ದಿಕ್ಕೆಟ್ಟ ಜನರ ಬಗ್ಗೆ ಜೆಡಿ(ಎಸ್) ಎಂಬ ಜೊತೆಗಾರರೇ ಜೊತೆಯಲ್ಲಿಲ್ಲದೆ ಬಾಯಿಗೆ ಬಂದದ್ದೆನ್ನೆಲ್ಲಾ ಬಡಬಡಿಸಿದ.

ಹೊರಗೆ ಬಯಲೊಳಗಿನ ಕಾರಬಾರು ಇನ್ನೂ ವಿಚಿತ್ರವಾಗಿತ್ತು. ರಾಜನ್ನಾರು, ಮುಂದಿನ ರಾಜನ್ನಾರು ಎಂದು ಸಿಗಲಿಲ್ಲದ ಸಿಂಹಾಸನಕ್ಕೆ ಕೊನೆಯಿಲ್ಲದೆ ಗುದ್ದಾಡುತ್ತಿರುವ ಗಂಡುಗಲಿಗಳೆಲ್ಲರೂ ಕತ್ತಿಯಿಲ್ಲದೇ ಧಾಳಿ ನಡೆಸಿದ್ದರು. ದಕ್ಷಿಣ ಭಾರತದ ಹೆಬ್ಬಾಗಿಲು ತೆರೆಯಿತು ಇನ್ನೂ ನಾವು ಒಳಗೆ ಹೋಗುವುದೊಂದೇ ಬಾಕಿ ಎಂದವನೊಬ್ಬ, ಕರ್ನಾಟಕ ಗುಜರಾತ್ ಆಗುವುದಕ್ಕೆ ಇನ್ನೇಕೆ ತಡ ಇಂದೇ ಆಗಲಿ, ಈಗಲೇ ಆಗಲಿ ಎಂದು ಅರಚಾಡಿದವನು ಮತ್ತೊಬ್ಬ.

ಏಳು ದಿನ, ಏಳೇ ದಿನ ಕಳೆಯಿತು. ಉತ್ತರನ ಪೌರುಷ ವಿಧಾನಸಭೆಯಲ್ಲಲ್ಲ ರಾಜಭವನದ ಗೇಟ್ ಮುಂದೆ ಎಂಬುದು ಇಡೀ ಜಗತ್ತಿಗೆ ತಿಳಿಯಿತು.ಉತ್ತರ ಗೊತ್ತಿದ್ದ ಅರ್ಜುನರು ಯಾರೂ ಮುಂದೆ ಬರಲಿಲ್ಲ. ರಾಷ್ಟ್ರಪತಿಗಳ ಮುಂದೆ ಮಾಡಿದ ಪ್ರಲಾಪ ವಿಧಾನವೀಧಿಯ ಮುಂದಿನ ಅಪಲಾಪವಾಯಿತು. ಇಡೀ ದೇಶ ಬೆಕ್ಕಸ ಬೆರಗಾಗಿ ನೋಡುತ್ತಿತ್ತು.

— ನಾಗರಾಜ್

ರಾಜಕೀಯದಲ್ಲಿ ಚುರುಕು......

ಪುಟ 3 ರಿಂದ

ಚುನಾವಣಾ ಪ್ರಚಾರವನ್ನೇ ಆರಂಭಿಸಿದ್ದಾರೆ. ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಪಕ್ಷಗಳ ಈ ರಾಜಕೀಯ ದೊಂಬರಾಟದಿಂದ ಬೇಸತ್ತಿರುವ ಕರ್ನಾಟಕದ ಜನ ತಮ್ಮ ಕೈಹಿಡಿಯುವ ನಿರೀಕ್ಷೆ ಅವರಿಗೆ. ಹಾಗೆಯೇ ಜೆಡಿ(ಎಸ್)ನಿಂದ ಹೊರ ನಿಂತಿರುವ ಎಂ.ಪಿ.ಪ್ರಕಾಶ್ ಬಣವನ್ನು ತಮ್ಮೊಡನೆ ಸೆಳೆಯುವ ಒಂದು ಯತ್ನವೂ ಇದೆ. ಆದರೆ ಪ್ರಕಾಶ್ ಬಣದ ಸ್ಪಷ್ಟ ಪ್ರತಿಕ್ರಿಯೆ ಹೂಂ ಎಂದೇನೂ ಇಲ್ಲ.

ಪ್ರಕಾಶ್ ಹೊರಗೆ – ಆದರೆ ಎಲ್ಲಿಗೆ?

ಈ ಅವಧಿಯಲ್ಲಿ ಗಮನಾರ್ಹ ಬೆಳವಣಿಗೆಯೆಂದು ಹೇಳಬಹುದಾದದ್ದು ಜೆಡಿ(ಎಸ್)ನ ನಾಯಕರಾದ ದೇವೇಗೌಡ. ಮತ್ತವರ ಕುಟುಂಬದ ಸದಸ್ಯರ ನಿರ್ಧಾರವೇ ಅಂತಿಮವೆಂದೂ ಪಕ್ಷದೊಳಗೆ ಉಸಿರುಗಟ್ಟಿಸುವ ವಾತಾವರಣವಿದ್ದು ಪ್ರಜಾಪ್ರಭುತ್ವೀಯ ಕಾರ್ಯವಿಧಾನವಿಲ್ಲವೆಂದು ಆರೋಪಿಸಿ ಮಾಜಿ ಉಪಮುಖ್ಯಮಂತ್ರಿ, ಹಿರಿಯನಾಯಕ ಎಂ.ಪಿ.ಪ್ರಕಾಶ್ ರವರು ದೇವೇಗೌಡರು ಕರೆದಿದ್ದ 29ರ 'ಕಾರ್ಯಕಾರಿಣಿ' ಸಭೆಯಿಂದ ಹೊರಗೆ ಉಳಿದರು. ಇದರ ಪೂರ್ವದಲ್ಲಿ 28ರಂದು ಕರೆದಿದ್ದ ಸಮಾನಮನಸ್ಕರ ಸಭೆಗೆ ಈ ಹಿಂದಿದ್ದ 15 ಶಾಸಕರು (ಮಾಜಿ 3 ಎಂ.ಎಲ್.ಸಿ.ಗಳು ಹಾಜರಾಗಿದ್ದು, ಮುಂದಿನ ತೀರ್ಮಾನವನ್ನು ಡಿಸೆಂಬರ್ 8ರ ಸಭೆಯಲ್ಲಿ ಕೈಗೊಳ್ಳುವುದಾಗಿ ಹೇಳಿದ್ದಾರೆ. ಈ ಮೊದಲು ದೇವೇಗೌಡರ ಚರ್ಚೆ ಕುಮಾರಸ್ವಾಮಿ ಮನವಿಗೆ ಒಪ್ಪದ ಅವರು ಜೆಡಿ(ಎಸ್) ತೊರೆಯುವ ನಿರ್ಧಾರ ಪ್ರಕಟಿಸಿದ್ದಾರೆ. ಬಿಜೆಪಿ, ಕಾಂಗ್ರೆಸ್, ಜೆಡಿ(ಯು) ಇತ್ಯಾದಿ ಪಕ್ಷಗಳು ಇವರನ್ನು ಸೆಳೆಯಲು ಪ್ರಯತ್ನಗಳನ್ನಾರಂಭಿಸಿವೆ.

ಅಪರಾಧಿ ತಾವಲ್ಲ!

ಇವುಗಳ ನಡುವೆ ಸತತ ಧಾಳಿಗಳ ಕೇಂದ್ರವಾಗಿರುವ ದೇವೇಗೌಡರು 29ರಂದು ಕಾರ್ಯಕಾರಿಣಿ ಹೆಸರಿನಲ್ಲಿ ರಾಜ್ಯದ ನಾಯಕರು, ಜಿಲ್ಲಾ ಪ್ರಮುಖ ಕಾರ್ಯಕರ್ತರ ಸಭೆಯನ್ನು ಅರಮನೆ ಮೈದಾನದ ಗ್ಲಾಸ್‌ಹೌಸ್‌ನಲ್ಲಿ ನಡೆಸಿ ಬೆಳವಣಿಗೆಗಳನ್ನು ವಿವರಿಸಿ ಕಾರ್ಯಕರ್ತರಿಗೆ ಆತ್ಮವಿಶ್ವಾಸ ತುಂಬುವ ಯತ್ನ ನಡೆಸಿದ್ದಾರೆ. ವಿಶ್ವಾಸದ್ರೋಹ ಎಸಗಿದ್ದು ತಾವಲ್ಲ ಅದು ಬಿಜೆಪಿ ಎಂಬುದನ್ನು ಹಲವು ನಿದರ್ಶನಗಳ ಮೂಲಕ ತಿಳಿಸಲೆತ್ನಿಸಿದ್ದಾರೆ. ದೈರ್ಯದಿಂದ ಚುನಾವಣೆ ಎದುರಿಸಲು ಜನರ ನಡುವೆ ಕೆಲಸ ಮಾಡಲು ಕುಮಾರಸ್ವಾಮಿ ಕರೆ ನೀಡಿದ್ದಾರೆ ಹಾಗೂ ನಾಳೆಯಿಂದಲೇ ಸಂಘಟನೆ ಕೆಲಸ ಆರಂಭ ಎಂದು ಗೌಡರು ಹೇಳಿದ್ದಾರೆ. ತಮ್ಮ ಪ್ರಾದೇಶಿಕ ಪಕ್ಷವನ್ನು ಒಡೆಯಬೇಡಿ ಎಂದು ಮನವಿ ಮಾಡಿದ್ದಾರೆ.

ಚುನಾವಣೆ ಅಥವಾ ಮುಂದಿನ ಹೋರಾಟದ ಕುರಿತು ಒಟ್ಟಾರೆ ಈ ಬೆಳವಣಿಗೆಗಳು ಇನ್ನೂ ಶೈಶಾವಸ್ಥೆಯೆಂದನ್ನಿಸುತ್ತದೆ. ಈಗ ಎದ್ದಿರುವ ಧೂಮ ಧರೆಗಿಳಿಯಬೇಕೆಂದರೆ ಒಂದಷ್ಟು ಸಮಯ ಬೇಕಾದೀತು.

ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದ ಸದನಸಮಿತಿ ಅಂತಿಮ ವರದಿಯನ್ನು ರಾಜ್ಯಪಾಲರಿಗೆ ನೀಡಿದೆ. ಭೂಗಳ್ಳರ ಪಟ್ಟಿಯಲ್ಲಿ ಮಾಜಿ ಸಚಿವರು, ಶಾಸಕರು, ಮಠಾದೀಶರು, ಉದ್ಯಮಿಗಳ ವಿವರ ಮಾಹಿತಿಗಳ ಮಹಾಪೂರವೇ ಇದೆಯೆನ್ನಲಾಗಿದೆ. ಹಾಗೆಯೇ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಂ.ಡಿ.ಯಾಗಿದ್ದ ಶ್ರೀನಿವಾಸರೆಡ್ಡಿ ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದಿದ್ದು ನೂರಾರು ಕೋಟಿ ರೂ.ಗಳ ಅಪಾರ ಅಕ್ರಮ ಆಸ್ತಿ ತನಗೆ ಸಿಕ್ಕಿದೆ. ಇವುಗಳನ್ನು ಒಂದೆರಡು ಪ್ಯಾರಾದಲ್ಲಿ ವಿವರಿಸಲು ಸಾಧ್ಯವಿಲ್ಲ. ಅದಕ್ಕೆಂದೇ ಮುಂದಿನ ವಾರ ವಿವರ ಲೇಖನ ಪ್ರಕಟಿಸಲಾಗುವುದು.

ಬಿಪಿಎಲ್ ಕಾರ್ಮಿಕ ಮುಖಂಡರಿಗೆ ನ್ಯಾಯ ದೊರೆತಿಲ್ಲ...

ಪುಟ 6 ರಿಂದ

ಸಿನಿಜ ಎಂಬ ಇನ್ನೊಬ್ಬ ಮಹಿಳೆ ಮೃತಳಾದಳು. ಇಲ್ಲಿಯೂ ಸಾಯುವಾಗ ನೀಡಿದ ಹೇಳಿಕೆಯನ್ನು ದಾಖಲಿಸಿ ಕಾರ್ಮಿಕ ಸಂಘದ ಮುಖಂಡರನ್ನು ಆರೋಪಿಗಳಾಗಿ ಮಾಡಲಾಯಿತು.

ಹೀಗೆ ಸೈಂಟ್ ಜಾನ್ಸ್, ಬೌರಿಂಗ್ ಮತ್ತು ವಿಕ್ಟೋರಿಯ ಆಸ್ಪತ್ರೆಗಳ ವೈದ್ಯಕೀಯ-ಕಾನೂನು ಡೈರಿಗಳು ಹಾಗೂ ಡಿಜಿ ಹಾಸ್ಪಿಟಲ್‌ನ ವೈದ್ಯಕೀಯ-ಕಾನೂನು ಡೈರಿ ಕೂಡಾ ಬಸ್ಸಿಗೆ ಬೆಂಕಿ ಹಚ್ಚಿದವರು ಅಪರಿಚಿತ ವ್ಯಕ್ತಿಗಳು ಎಂದು ಗಾಯಗೊಂಡವರು ಹೇಳಿಕೆ ನೀಡಿದುದಾಗಿ ದಾಖಲಿಸಿಕೊಂಡಿವೆ. ಅಶೋಕ ನಗರ ಪೋಲೀಸ್ ಇನ್ಸ್‌ಪೆಕ್ಟರ್ ದಾಖಲಿಸಿಕೊಂಡ ಸಾಯುವಾಗಿನ ಹೇಳಿಕೆಯಲ್ಲಿ ಮಾತ್ರ ಕಾರ್ಮಿಕ ಮುಖಂಡರು ಎಂದು ದಾಖಲಾಗಿದೆ. ಸೆಶನ್ಸ್ ವಿಚಾರಣೆಯ ವೇಳೆಗೆ ಈ ಎಲ್ಲಾ ಸಂಗತಿಗಳನ್ನು ದಾಖಲೆಗೆ ತರಲಾಗಿದೆ. ಅಲ್ಲದೆ ಫಿರ್ಯಾದಿ ಪಕ್ಷ ಕೆಲವು ಬೇರೆ ಘಟಕಗಳ ಪುರುಷ ಕಾರ್ಮಿಕರು ಆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು, ಅವರು ಆಪಾದಿತ ಕಾರ್ಮಿಕ ಮುಖಂಡರು ಬಸ್ಸಿಗೆ ಬೆಂಕಿ ಹಚ್ಚುವುದನ್ನು ನೋಡಿದ್ದಾರೆ ಎಂದು ಸಾಕ್ಷಿಗಳನ್ನು ಸೃಷ್ಟಿಸಿತು. ಆದರೆ ಬಸ್ಸಿಗೆ ಬೆಂಕಿ ಹಚ್ಚಿದರಲ್ಲಿ ಯಾವ ಪುರುಷ ಕಾರ್ಮಿಕನಿಗೂ ಗಾಯಗಳಾಗಿಲ್ಲ ಅಥವ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸುವುದರಲ್ಲೂ ಅವರಲ್ಲಿ ಯಾರೂ ಸಕ್ರಿಯ ಪಾತ್ರ ವಹಿಸಲಿಲ್ಲ. ಸಾವಿಗೀಡಾದ ಒಬ್ಬ ಮಹಿಳೆ ಆಕೆಯ ಗಂಡ ಆಕೆಯನ್ನು ಆಸ್ಪತ್ರೆಗೆ ಒಯ್ಯುತ್ತಿದ್ದಾಗ ಬಸ್ಸಿಗೆ ಬೆಂಕಿ ಹಚ್ಚಿದ್ದು ಆಪಾದಿತ ಕಾರ್ಮಿಕ ಮುಖಂಡರು ಎಂದು ಹೇಳಿದಳು ಎನ್ನಲಾಗಿದೆ. ನಿಜವಾಗಿ ಸುಟ್ಟಗಾಯಗಳ ಕೇಸುಗಳನ್ನು ಪೋಲೀಸರೇ ವಹಿಸಿಕೊಂಡರು, ಬಹುಶಃ ಆಡಳಿತ ವರ್ಗದ ಸಿಬ್ಬಂದಿಯ ನಿರ್ದೇಶನದಲ್ಲಿ, ಪೋಲೀಸ್ ವ್ಯಾನಿನಲ್ಲೇ ಆಸ್ಪತ್ರೆಯಿಂದ ಆಸ್ಪತ್ರೆಗೆ ವರ್ಗಾಯಿಸಿದರು, ತಮಗೆ ಬೇಕಾದಂತೆ ಕೆಲಸ ಮಾಡುವ ಆಸ್ಪತ್ರೆ ಅಥವಾ ಡಾಕ್ಟರುಗಳು ಸಿಗುವ ವರೆಗೆ. ಡಿಜಿ ಹಾಸ್ಪಿಟಲ್‌ನಲ್ಲಿ ಸಾವಿಗೀಡಾದ ಇಬ್ಬರ ಮಹಿಳೆಯರು ಕ್ರಿಮಿನಲ್ ನಿರ್ಲಕ್ಷದಿಂದ ಅಥವ ಬೇರೆ ಯಾವುದೋ ರೀತಿಯ ಕೆಲಸದಿಂದ ಸತ್ತಿರಬಹುದು, ಕಾರ್ಮಿಕ ಸಂಘದ ಮುಖಂಡರನ್ನು ಆರೋಪಿಗಳಾಗಿ ಮಾಡಲಿಕ್ಕಾಗಿ ಎಂಬ ಸಂದೇಹವಿದೆ.

ಈ ಎರಡು ಸಾವುಗಳ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಪ್ರಾರ್ಥಿಸಿ ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ಹೈಕೋರ್ಟಿನಲ್ಲಿ ಸಲ್ಲಿಸಲಾಯಿತು. ದುರದೃಷ್ಟವಶಾತ್, ಈಗ ಇನ್ನೂ ಐದು ಕಾರ್ಮಿಕರಿಗೆ ಜೀವಾವಧಿ ಶಿಕ್ಷೆಯ ಆದೇಶ ನೀಡಿರುವ ನ್ಯಾಯಾಧೀಶರೇ ಆ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ವಜಾ ಮಾಡಿದರು.

ವಿಚಾರಣೆಯ ವೇಳೆಯಲ್ಲಿ ಈ ಪ್ರಕರಣದಲ್ಲಿ ಗಾಯಗೊಂಡ ಒಬ್ಬಾಕೆಯ ಗಂಡ ತಾನು ತನ್ನ ಹೆಂಡತಿಯನ್ನು ಆಸ್ಪತ್ರೆಗೆ ಒಯ್ಯುವಾಗ ಆಪಾದಿತ ಕಾರ್ಮಿಕ ಮುಖಂಡರು ಬೆಂಕಿ ಹಚ್ಚಿದರು ಎಂದು ಆಕೆ ಹೇಳಿದುದಾಗಿ ಹೇಳಿದ್ದ. ಪ್ರತಿವಾದಿ ವಕೀಲರು ಗಾಯಗೊಂಡವರನ್ನು ಅದೇ ದಿನ ನಾಲ್ಕು ಆಸ್ಪತ್ರೆಗಳಿಗೆ ಒಯ್ಯಲಾಯಿತು, ಕೊನೆಯ ಆಸ್ಪತ್ರೆಗೆ ಸೇರಿಸಿದ ಮೇಲೆ ಗಂಡನಿಗೆ ಆಕೆ ಗಾಯಗೊಂಡುದರ ಬಗ್ಗೆ ಮಾಹಿತಿ ನೀಡಿದ ದಾಖಲೆಯಿದೆ, ಆತನ ಕಥೆ ಸುಳ್ಳು ಎಂದು ತೋರಿಸಿದರು. ಸೆಶನ್ಸ್ ಕೋರ್ಟಿನಲ್ಲಿ ದಾಖಲುಗೊಳಿಸಿದ ಈ ಯಾವುದೇ ಸಾಕ್ಷಿ, ಮಂಡಿಸಿದ ವಾದಗಳು ಏಳು ಮುಖಂಡರಿಗೆ ಸೆಶನ್ಸ್ ನ್ಯಾಯಾಧೀಶರು ಜೀವಾವಧಿ ಶಿಕ್ಷೆ ನೀಡದಂತೆ ತಡೆಯಲಿಲ್ಲ. ಆದರೆ ಸೆಶನ್ಸ್ ನ್ಯಾಯಾಧೀಶರು ಬೇರೆ ಎಲ್ಲಾ ಆಪಾದಿತ ಕಾರ್ಮಿಕರನ್ನು ಖುಲಾಸೆಗೊಳಿಸಿದರು.

ಈಗ ಹೈಕೋರ್ಟ್ ಈ ಹಿಂದೆ ಖುಲಾಸೆಯಾಗಿದ್ದ ಐದು ಕಾರ್ಮಿಕರನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಿ ಜಾಲವನ್ನು ಇನ್ನಷ್ಟು ವಿಸ್ತರಿಸಿರುವಾಗ ನ್ಯಾಯಕ್ಕೆ ಅಪಚಾರವಾಗುವುದನ್ನು ತಡೆಯಲು ಹೈಕೋರ್ಟಿನ ತೀರ್ಪಿನ ವಿರುದ್ಧ ಸುಪ್ರೀಮ್ ಕೋರ್ಟಿಗೆ ಅಪೀಲು ಹೋಗದೆ ನಮಗೆ ಬೇರೆ ದಾರಿಯಿಲ್ಲವಾಗಿದೆ.

ನಾವು ನ್ಯಾಯ ದೊರೆಯದಿರುವುದನ್ನು ವಿರೋಧಿಸಲು ಮಾಧ್ಯಮಗಳಿಂದ ವಿಚಾರಣೆಯ ಹಲವು ಉದಾಹರಣೆಗಳನ್ನು ನೋಡಿದ್ದೇವೆ. ಈ ಹನ್ನೆರಡು ಕಾರ್ಮಿಕ ಮುಖಂಡರ ವಿಷಯದಲ್ಲಿಯೂ ನ್ಯಾಯ ದೊರೆತಿಲ್ಲ, ಎಂಬುದು ಸ್ಪಷ್ಟ. ಬಿಪಿಎಲ್ ಆಡಳಿತ ವರ್ಗ 25 ಮಾರ್ಚ್, 1999ರಂದು ಬಸ್ಸನ್ನು ಸುಟ್ಟುಹಾಕಿದಂದಿನಿಂದಲೇ ಹಿಡಿದು ಅದಕ್ಕೆ ಗುರಿಯಾದವರನ್ನು ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ಸಾಗಿಸುತ್ತಾ, ತಮಗೆ ಅನುಕೂಲವಾದ ಒಂದು ಖಾಸಗಿ ಆಸ್ಪತ್ರೆಯನ್ನು ಹುಡುಕಿ ಅಲ್ಲಿ ಸೇರಿಸುವ ವರೆಗೂ ನಿರಂತರವಾಗಿ ನಿರ್ಣಯಗಳ ಮೇಲೆ ಪ್ರಭಾವ ಬೀರುತ್ತಿದ್ದರು. ಈ ಆಸ್ಪತ್ರೆ ಬೆಂಕಿಗೆ ಗುರಿಯಾದ ಆ ಇಬ್ಬರಿಗೆ ಸುರಕ್ಷಿತವಾಗಿರಲಿಲ್ಲ. ಆದರೆ ಆಡಳಿತ ವರ್ಗ ಆ ಸಾವುಗಳನ್ನು ಕೊಲೆ ಪ್ರಯತ್ನದ ಕೇಸನ್ನು ಕೊಲೆ ಕೇಸಾಗಿ ಪರಿವರ್ತಿಸಲು ಒಂದು ಅವಕಾಶವಾಗಿ ಬಳಸಿಕೊಂಡಿತು. ಅವರು ಈ ಮೊಕದ್ದಮೆಯಾದ್ಯಂತ ಕಾರ್ಮಿಕ ಮುಖಂಡರಿಗೆ ನೇಣು ಶಿಕ್ಷೆಯಾಗುವಂತೆ ಮಾಡಲು ಸರ್ವಪ್ರಯತ್ನ ನಡೆಸಿದರು. ಆದರೆ ಇದುವರೆಗೆ ಅವರು ಶಿಕ್ಷೆಯನ್ನು ಇನ್ನೂ ಐದು ಕಾರ್ಮಿಕರಿಗೆ ವಿಸ್ತರಿಸುವಲ್ಲಷ್ಟೇ ಯಶಸ್ವಿಯಾದರು.

ಕರ್ನಾಟಕದಲ್ಲಿ ಬಿಪಿಎಲ್ ಮೊಕದ್ದಮೆಗೆ ಒಂದು ವಿಶಿಷ್ಟತೆಯಿದೆ. ಬಿಪಿಎಲ್ ಕಾರ್ಮಿಕರನ್ನು ಸಂಘಟಿಸಲು ಪ್ರಯತ್ನಿಸಿದ ಅಪರಾಧಕ್ಕೆ ಸಿಐಟಿಯು ಮುಖಂಡರು ಜೀವಾವಧಿ ಶಿಕ್ಷೆ ಅನುಭವಿಸುವಂತೆ ಮಾಡಲಾಗಿದೆ. ಅವರ ನೆರವಿಗೆ ಬಂದು ಬಿಪಿಎಲ್ ಆಡಳಿತದ ಹೊಲಸು ವ್ಯವಹಾರಗಳನ್ನು ಮತ್ತು ಅವರ ಈ ದುಷ್ಟ ಚಟುವಟಿಕೆಗಳಲ್ಲಿ ಅವರು ಹೇಳಿದಂತೆ ಕೇಳಲು ತಕ್ಷಣವೇ ಸಿದ್ಧವಾದ ಅಧಿಕಾರಶಾಹಿಗಳನ್ನು ಬಯಲಿಗೆಳೆಯುವುದು ಕಾರ್ಮಿಕ ಆಂದೋಲನದ ಪರಮ ಕರ್ತವ್ಯ.

ಹಾಸನ ರಾಜಕೀಯ ಪರಿಸ್ಥಿತಿ

ಪುಟ 9 ರಿಂದ

ವಿಶೇಷ ಆರ್ಥಿಕ ವಲಯಕ್ಕೆ ಭೂಮಿ ವಶಪಡಿಸಿಕೊಳ್ಳಲಾಯಿತು. ಕೈಗಾರಿಕಾ ಪ್ರದೇಶ ಎಂದು ಗುರ್ತಿಸಲಾಯಿತು. ಸಾವಿರಾರು ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳು ಸ್ಥಾಪನೆಯಾಗಲಿಲ್ಲ. 3000 ಜನರಿಗೆ ಕೆಲಸ ನೀಡಿದ ಗಾರ್ಮೆಂಟ್ಸ್ ಒಂದನ್ನು ಬಿಟ್ಟರೆ ಯಾವುದೇ ಬೃಹತ್ ಕೈಗಾರಿಕೆ



ಬಹಿರಂಗ ಸಭೆಗೆ ಮುನ್ನ ಮೆರವಣಿಗೆ

ಸ್ಥಾಪನೆಯಾಗಲಿಲ್ಲ. ಭೂಮಿ ನೀಡಿದವರಿಗೆ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಲಿಲ್ಲ. ಪರ್ಯಾಯ ಉದ್ಯೋಗ ನೀಡಲಿಲ್ಲ. ಹಿಂದೆ ಭೂ ಒಡೆಯರಾಗಿದ್ದ ಇಲ್ಲಿನ ಸಾಕಷ್ಟು ಜನ ಇಂದು ಕೃಷಿ ಕಾರ್ಮಿಕರಾದರು. ಉಪನಗರಗಳ ನಿರ್ಮಾಣ. ಹೊಸ ಬಡಾವಣೆಗಳಿಗೆಂದು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಮೊದಲು ಪರಿಹಾರ ನೀಡಿ ಉದ್ಯೋಗಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಿದ ನಂತರ ಭೂಮಿ ವಶಪಡಿಸಿಕೊಳ್ಳಬೇಕೆಂಬ ನಿಯಮ ಇಲ್ಲಿ ಇಲ್ಲ. ಇವರಿಗೂ ಭೂಮಿ ಮೇಲೆ ಪ್ರೀತಿ ಇಲ್ಲ. ಮಧ್ಯವರ್ತಿಗಳ ಮೂಲಕ ಚೌಕಾಶಿಗೆ ಇಳಿದರು. ಆಡಳಿತ ಬಯಸಿದಂತೆಯೇ ಆಯಿತು.

ಮೆಡಿಕಲ್ ಕಾಲೇಜಿನಲ್ಲಿ ಜಿಲ್ಲೆಯ ಒಬ್ಬರೂ ಇಲ್ಲ:

ಇಲ್ಲಿಗೆ ಬಂದ ಯಾವೊಂದು ಯೋಜನೆಗಳೂ ಇಲ್ಲಿಯ ಜನರ ಅಭಿವೃದ್ಧಿಗೆ ದೊಡ್ಡ ಕಾಣಿಕೆಯನ್ನೇನೂ ನೀಡಲಿಲ್ಲ ಎಂದರೆ ತಪ್ಪಾಗಲಾರದು. ಉದಾ: ಮೆಡಿಕಲ್ ಕಾಲೇಜಿನಲ್ಲಿ ಹಾಸನ ಜಿಲ್ಲೆಯ ಒಬ್ಬ ವಿದ್ಯಾರ್ಥಿಯೂ ಇಲ್ಲ. ಏಕೆಂದರೆ ಎಂ.ಬಿ.ಬಿ.ಎಸ್.ಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ತಕ್ಕುದಾದಂತೆ ಹಾಸನದ ಯಾವ ಸರ್ಕಾರಿ ಪಿ.ಯು ಕಾಲೇಜುಗಳಲ್ಲೂ ಮೂಲಭೂತ ಸೌಲಭ್ಯ ನೀಡೇ ಇಲ್ಲ. ಆದ್ದರಿಂದ ಇಲ್ಲಿ ಟ್ಯೂಷನ್ ಒಂದು ದಂಧೆಯಾಗಿ ಬೆಳೆದಿದೆ. ವಿಮಾನ ನಿಲ್ದಾಣ, ಗಾಲ್ಫ್ ಕ್ಲಬ್ ಪಶ್ಚಿಮ ಘಟ್ಟದ ಜಲವಿದ್ಯುತ್ ಯೋಜನೆಗಳು ಯಾವುವೂ ಜಿಲ್ಲೆಯ ಸಾಮಾನ್ಯ ಜನರಿಗೆ ಉಪಯೋಗವಿಲ್ಲ. ಜಿಲ್ಲೆಯ ಎಷ್ಟು ಜನ ವಿಮಾನದಲ್ಲಿ ಸಂಚರಿಸುವರು? ಎಷ್ಟು ಜನ ಗಾಲ್ಫ್ ಆಡಬಲ್ಲರು?

ಮಾರುಕಟ್ಟೆಯನ್ನು ರೈತರಿಗಾಗಿಯೇ ಕಟ್ಟಲಾಗುತ್ತದೆ. ವಿಮಾನ ನಿಲ್ದಾಣದ ಮೂಲಕ ಜಿಲ್ಲೆಯ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ನೇರ ವಿದೇಶಕ್ಕೆ ರಫ್ತು ಮಾಡಲಾಗುತ್ತದೆ ಎಂದು ಹೇಳಲಾಗುತ್ತದೆ. ಗ್ರಾಮೀಣ ಪ್ರದೇಶದಿಂದ ಜಿಲ್ಲಾಕೇಂದ್ರಕ್ಕೆ ಕೃಷಿ ಉತ್ಪನ್ನಗಳನ್ನು ತರಲು ಸರಿಯಾದ ರಸ್ತೆಗಳೇ ಇಲ್ಲ. 4 ತಿಂಗಳ ಮಳೆಗಾಲಕ್ಕೆ ಇಡೀ ರಸ್ತೆ ಮಾಯವಾಗುತ್ತದೆ. ಕೃಷಿ ಉತ್ಪನ್ನಗಳನ್ನು ಕೆಡದಂತೆ ಇಡಲು ಶೀತಾಗಾರಗಳಿಲ್ಲ. ಆಲೂಗಡ್ಡೆ ಹಾಸನದ ಸುತ್ತಲಿನ ಪ್ರಮುಖ ಬೆಳೆ. ಅತಿವೃಷ್ಟಿ, ಅನಾವೃಷ್ಟಿ, ಕಾಯಿಲೆ, ಕಳಪೆ ಬೀಜ ಇತ್ಯಾದಿ ಕಾರಣಗಳಿಂದ ಇಳುವರಿ ಸಿಕ್ಕಿಲ್ಲ. ಬಂದ ಅಲ್ಪಸ್ವಲ್ಪ ಬೆಳೆಗೂ ಸರಿಯಾದ ಬೆಲೆ ನೀಡುವುದಿಲ್ಲ. ರೈತ ಆತ್ಮಹತ್ಯೆಗೆ ಶರಣಾದರೂ ಪರಿಹಾರವಾಗಲಿ, ಬೆಳೆ ವಿಮೆಯಾಗಲಿ ಸಿಕ್ಕಲ್ಲ. ಕೂಲಿ ಕಾರ್ಮಿಕರ ಪರಿಸ್ಥಿತಿ ಇನ್ನೂ ಗಂಭೀರ. ಕೂಲಿ ದಿನಕ್ಕೆ 30 ರೂ.ಯಿಂದ 50 ಸಿಗುತ್ತದೆ. ಇದರ ಜೊತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಪಡಿತರ ಪದ್ಧತಿಯಲ್ಲಿ ತಿಂಗಳಿಗೆ ಒಬ್ಬ ವ್ಯಕ್ತಿಗೆ 4 ಕೆ.ಜಿ ಅಕ್ಕಿ ನೀಡಲಾಗುತ್ತದೆ. ಈ ಯಾವ ಪರಿಸ್ಥಿತಿಯೂ ಸುಧಾರಿಸಿಲ್ಲ. ಸುಧಾರಣೆಯಾಗುವ ಭರವಸೆಯೂ ಇಲ್ಲ. ಆದರೂ ಹಾಸನ ಅಭಿವೃದ್ಧಿಯಲ್ಲಿ ಮ್ಯಾಂಚೆಸ್ಟರ್ ಆಗುತ್ತಿದೆ ಎನ್ನಲಾಗುತ್ತದೆ. ಆಗುತ್ತಿದ್ದರೆ ಅದು ಯಾರಿಗೆ ಅನ್ನುವುದೇ ಪ್ರಶ್ನೆ.

ಅಭಿವೃದ್ಧಿ ಎಂದರೆ ಗುತ್ತಿಗೆದಾರರ ಅಭಿವೃದ್ಧಿಯೇ?

ಅಭಿವೃದ್ಧಿ ಎಂದರೆ ಮಾನವ ಅಭಿವೃದ್ಧಿಯಾಗಬೇಕು. ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದರೆ ಮಾತ್ರ ಅದು ಅಭಿವೃದ್ಧಿ. ಆದರೆ ಹಾಸನದಲ್ಲಿ ಅದು ಆಗಲೇ ಇಲ್ಲ. ಇದುವರೆಗೂ ಅಭಿವೃದ್ಧಿ ಹೆಸರಿನಲ್ಲಿ ಖರ್ಚಾಗಿರುವ ಹಣದಿಂದ ಗುತ್ತಿಗೆದಾರರ ಅಭಿವೃದ್ಧಿ ಆಗಿದೆ. ದೂರದೃಷ್ಟಿ ಕೊರತೆ, ಹಠಮಾರಿತನ ಹಾಗೂ ಲಾಭಕೋರತನದಿಂದಾಗಿ ಅಭಿವೃದ್ಧಿಯ ಹೆಸರಿನಲ್ಲಿ ಒಂದು ನಗರವನ್ನು ಎಷ್ಟರಮಟ್ಟಿಗೆ ಹಾಳು ಮಾಡಬಹುದೆಂದರೆ ಅದಕ್ಕೆ ಹಾಸನವೇ ಉದಾಹರಣೆಯಾಗಿ ನಿಲ್ಲುತ್ತದೆ.



ಧರ್ಮೇಶ್, ಸಿಪಿಐ(ಎಂ) ಹಾಸನ ಸ್ಥಳೀಯ ಸಮಿತಿ ಕಾರ್ಯದರ್ಶಿ

ಈ ರೀತಿ ಹಣ ಹರಿಯುತ್ತಿರುವುದರಿಂದ ಅದರ ಲೂಟಿಗಾಗಿ ಘರ್ಷಣೆಗಳು ನಡೆಯುತ್ತಿವೆ. ನಾಲ್ಕೈದು ಕೊಲೆ, ಒಂದು ಗ್ರಾಮವನ್ನೇ ಸುಟ್ಟಿದ್ದು, ಅಕ್ರಮ ಎಂದು ಒಂದು ಬಡಾವಣೆಯನ್ನು ನೆಲಸಮಗೊಳಿಸಿದ್ದು, ತೆಂಗಿನ ತೋಟವನ್ನೇ ನಾಶಮಾಡಿದ್ದು ಹಾಗೂ ಈಗ ಯೋಜನೆಗಳಿಗೆ ಭೂಮಿಯನ್ನು ವಶಪಡಿಸಿಕೊಳ್ಳುತ್ತಿರುವುದು ಎಲ್ಲವೂ ಜಾತಿಯ ವಾಸನೆಯನ್ನು ಹೊತ್ತಿವೆ. ಸರ್ಕಾರಿ ಹಣದ ಮೇಲೆ ಪ್ರಾಬಲ್ಯ ಸಾಧಿಸಲು ಈ ಎಲ್ಲ ಘಟನೆಗಳು ನಡೆಯುತ್ತಿವೆ ಎನ್ನುವುದು ವಾಸ್ತವ.

ಆಡಳಿತ ಯಂತ್ರ ಕುಸಿದಿದೆ. ಯಾವ ಅಧಿಕಾರಿಯ ಮೇಲೂ ಜನ ಪ್ರತಿನಿಧಿಗಳ ಹಿಡಿತ ಇಲ್ಲ. ಬದಲಿಗೆ ಪರಸ್ಪರ ಶಾಮೀಲಾಗಿದ್ದಾರೆ. ನೋಡಿ, ಪಡಿತರ ವ್ಯವಸ್ಥೆಯ ಅಧ್ವಾನವನ್ನು ಬಿಪಿಎಲ್ ಕಾರ್ಡ್‌ಗೆ ನೀಡುವ ಸೀಮೆ ಎಣ್ಣೆಗೆ ಸರ್ಕಾರ 9.60 ರೂ. ನಿಗದಿತಪಡಿಸಿದರೆ ನ್ಯಾಯಬೆಲೆ ಅಂಗಡಿಯಲ್ಲಿ ಅದು 11:50 ರೂ.ಗಳು. 4 ಲೀ ಬದಲಿಗೆ 3 ಲೀಟರ್. ಪ್ರಶ್ನಿಸಿದರೆ 2 ಲೀ ಮಾತ್ರ.

ಅಕ್ಕಿ, ಗೋಧಿ ಹಗರಣ ಬೇರೆ. ವಿಚಾರಣೆ ನಡೆಯುತ್ತಲೇ ಇರುತ್ತದೆ. ಕಛೇರಿಗಳು ಭ್ರಷ್ಟಾಚಾರದ ತವರೂರು. ಗ್ರಾಮ ಪಂಚಾಯಿತಿಯಿಂದ ಹಿಡಿದು ಎಲ್ಲ ಕಡೆ ಭ್ರಷ್ಟತೆ. ಯಾರಿಗೂ ಹೆದರುವ ಪ್ರಶ್ನೆ ಇಲ್ಲ. ಜನತೆ ಅಸಹಾಯಕತೆಯಿಂದ ಒಳಗೊಳಗೆ ಹಿಡಿಶಾಪ ಹಾಕುವುದಷ್ಟೇ.

ಇವುಗಳಿಗೆಲ್ಲ ಇದುವರೆಗೆ ಪ್ರತಿನಿಧಿಸಿದ ರಾಜಕೀಯ ಪಕ್ಷಗಳೇ ಕಾರಣ. ಜನ ಬದಲಿ ಚಿಂತನೆಯನ್ನು ಮಾಡಬೇಕಿದೆ. ಸಿಪಿಐ(ಎಂ) ಸಮ್ಮೇಳನದ ಈ ಬದಲಿ ಚಿಂತನೆಯ ಬಗೆಗೆ ಜನರಲ್ಲಿ ಆಶಾಭಾವನೆ ಮೂಡಿದೆ.

ಹಾಸನವು ಬೆಂಗಳೂರು, ಮಂಗಳೂರು ಹಾಗೂ ಮೈಸೂರು, ಚಿಕ್ಕಮಗಳೂರು ನಡುವೆ ಇರುವ ಪ್ರಮುಖ ನಗರ. ಇದು ಪ್ರಮುಖ ವಾಣಿಜ್ಯ ಹಾಗೂ ಪ್ರವಾಸೋದ್ಯಮ ಕೇಂದ್ರವಾಗಿ ಬೆಳೆಯುವ ಸಾಧ್ಯತೆಗಳಿವೆ. ಆದರೆ ಸರಿಯಾದ ಸಂಚಾರ ವ್ಯವಸ್ಥೆಯಿಲ್ಲ. ರಾಷ್ಟ್ರೀಯ ಹೆದ್ದಾರಿ 48 ಹಾಸನದ ಮೂಲಕ ಹಾದುಹೋಗಿದೆ. ರಸ್ತೆಯು ಪೂರ್ಣವಾಗಿ ಕೆಟ್ಟು ಹೋಗಿರುವ ಕಾರಣಕ್ಕೆ ಸಂಚಾರ ಬಂದ್ ಆಗಿದೆ. ನವೆಂಬರ್‌ಗೆ 10 ವರ್ಷಗಳ ಹಿಂದೆ ಮಂಗಳೂರಿಗೆ ರೈಲು ಸಂಚಾರ ನಿಲ್ಲಿಸಲಾಗಿತ್ತು.

ವಿ.ಸುಕುಮಾರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ



ಗೇಜ್ ಪರಿವರ್ತನೆಗಾಗಿ. ಈಗ ರೈಲು ಮಾರ್ಗದ ಎಲ್ಲ ಕಾಮಗಾರಿ ಮುಗಿದಿದೆ. ಗೂಡ್ಸ್ ರೈಲು ಓಡಾಡುತ್ತಿದೆ. ಆದರೆ ದಕ್ಷಿಣ ಕನ್ನಡದಿಂದ ಬೆಂಗಳೂರಿಗೆ ದಿನನಿತ್ಯ 200ಕ್ಕೂ ಅಧಿಕ ಬಸ್ ತಿರುಗಾಡುತ್ತಿವೆ. ಈ ಖಾಸಗಿ ಬಸ್‌ಗಳ ಮಾಲೀಕರ ಲಾಭಿಯಿಂದಾಗಿ ರೈಲು ಸಂಚಾರ ಆರಂಭವಾಗುತ್ತಿಲ್ಲ. ದಕ್ಷಿಣ ಕನ್ನಡದ ಬಿಜೆಪಿಯವರೇ ಆಗಿರುವ ಜನಪ್ರತಿನಿಧಿಗಳು ಕೂಡ ಅವರೊಂದಿಗೆ ಶಾಮೀಲಾಗಿದ್ದಾರೆ. ಇದರಲ್ಲಿ ರೈಲ್ವೆ ಇಲಾಖೆಯ ಭಂಡತನವೂ ಅಡಗಿದೆ. ರಾಷ್ಟ್ರೀಯ ಹೆದ್ದಾರಿಯನ್ನು ಪ್ರತಿವರ್ಷ ದುರಸ್ತಿಪಡಿಸಲಾಗುತ್ತದೆ. ರೈಲುಮಾರ್ಗದ ಮೂಲಕ ಪ್ರಯಾಣಿಕರ ಸಂಚಾರ ಆರಂಭವಾದರೆ ಹೆದ್ದಾರಿಯಲ್ಲಿ ಸಂಚಾರದಟ್ಟಣೆ ಕಡಿಮೆಯಾಗುತ್ತದೆ. ಆದರೆ ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಇಲ್ಲವಾಗಿದೆ. ಕಾಫಿ, ಸಾಂಬಾರ ಪದಾರ್ಥಗಳು ಹಾಗೂ ಅಪಾರ ಪ್ರೇಕ್ಷಣೀಕ ಸ್ಥಳ ಹೊಂದಿರುವ ಚಿಕ್ಕಮಗಳೂರಿಗೆ ರೈಲುಮಾರ್ಗದ ಅವಶ್ಯಕತೆ ಇದೆ. ಕಡೂರಿನವರೆಗೆ ರೈಲು ಮಾರ್ಗವಿದ್ದು ಚಿಕ್ಕಮಗಳೂರಿಗೆ ಸಮೀಕ್ಷೆ ಆಗಿದೆ. ಕಾಮಗಾರಿ ಆರಂಭವಾಗಿ ಅರ್ಧಕ್ಕೆ ನಿಂತಿದೆ. ಇವುಗಳ ಜಾರಿ ಸಾಧ್ಯವಾಗಲು ಜನತೆಯು ಒತ್ತಡ ತರಬೇಕಾಗಿದೆ.

ಈ ಮೇಲಿನ ಎಲ್ಲ ಅಂಶಗಳ ಮೇಲೆ ಸಿಪಿಐ(ಎಂ) ನ ಸಮ್ಮೇಳನ ಚರ್ಚಿಸಿ ಜನತೆಯ ವಿಶಾಲ ತಳಹದಿಯ ಹೋರಾಟಕ್ಕೆ ಕರೆ ನೀಡಿದೆ.

ಈ ಸಮ್ಮೇಳನದ ಅಂಗವಾಗಿ ನವೆಂಬರ್ 17ರಂದು ನಗರದಲ್ಲಿ ಆಕರ್ಷಕ ಮೆರವಣಿಗೆ ಸಂಘಟಿಸಲಾಗಿತ್ತು. ನಗರದ ಅರ್ಧಭಾಗ ಕೆಂಪಾಗಿತ್ತು. ಕೆಂಬಾವುಟಗಳನ್ನು ಹಿಡಿದ ಪಕ್ಷದ ಸಾವಿರಾರು ಕಾರ್ಯಕರ್ತರು ಉತ್ಸಾಹದಿಂದ ಪಾಲ್ಗೊಂಡರು. ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ಸಮಾರಂಭದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಕೆ.ಶಂಕರ್, ರಾಜ್ಯಸಮಿತಿ ಸದಸ್ಯ ಕಾಂ.ಎಸ್.ವರಲಕ್ಷ್ಮಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ವಿ.ಸುಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಪ್ರತಿನಿಧಿ ಅಧಿವೇಶನದಲ್ಲಿ ಚರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

1. ಅಣು ಒಪ್ಪಂದವನ್ನು ವಿರೋಧಿಸುವುದು, 2. ಕೋಮುವಾದವನ್ನು ಹಿಮ್ಮೆಟ್ಟಿಸುವುದು, 3. ಎರಡೂ ಜಿಲ್ಲೆಗಳಿಗೆ ರೈಲುಮಾರ್ಗ ವಿಸ್ತರಣೆ ಹಾಗೂ ರಸ್ತೆಗಳ ನಿರ್ಮಾಣಕ್ಕಾಗಿ ಒತ್ತಾಯ, 4. ಒಟ್ಟೂ ಮಾನವ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಂತೆ ಒತ್ತಡ ಹಾಕುವುದು, 5. ರೈತಸಮಸ್ಯೆಗಳನ್ನು ಪರಿಹರಿಸಲು ಡಾ.ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸುವುದು, 6. ಗುತ್ತಿಗೆ ಹಾಗೂ ಅಸಂಘಟಿತ ಕಾರ್ಮಿಕರಿಗೆ ಭದ್ರತೆ ನೀಡುವುದು, 7. ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟುವುದು, 8. ಸಾರ್ವಜನಿಕ ವಿತರಣಾ ಪದ್ಧತಿಯನ್ನು ಸಾರ್ವತ್ರೀಕರಣಗೊಳಿಸುವುದು, 9. ಜಾತಿ, ಲಿಂಗ ತಾರತಮ್ಯ ಹಾಗೂ ಮೂಢನಂಬಿಕೆಗಳ ವಿರುದ್ಧ ಜನಜಾಗೃತಿ ಮೂಡಿಸುವುದು. ಇವುಗಳ ಈಡೇರಿಕೆಗಾಗಿ ಜನರ ನಡುವೆ ಕೆಲಸ ಮಾಡಲು ಸಮ್ಮೇಳನ ನಿರ್ಧರಿಸಿದೆ.

ನೂತನ ಸಮಿತಿ

ಹಾಸನ, ಚಿಕ್ಕಮಗಳೂರು ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ, ವಿ.ಸುಕುಮಾರ್, ಸದಸ್ಯರಾಗಿ ಧರ್ಮೇಶ್, ವೀರಯ್ಯ, ದಾಸ್, ಜಿ.ಪಿ.ಸತ್ಯನಾರಾಯಣ, ಅಂತೋಣಿಯಮ್ಮ, ಎಸ್.ಪಿ.ಪ್ರಕಾಶ್, ಕೆ.ಬಿ.ಮಂಜುನಾಥ ಆಯ್ಕೆಯಾಗಿದ್ದಾರೆ.

ಹಾಸನ ಸ್ಥಳೀಯ ಸಮಿತಿ : ಕಾರ್ಯದರ್ಶಿ ಧರ್ಮೇಶ್, ಸದಸ್ಯರಾಗಿ ವೀರಯ್ಯ, ಜಿ.ಪಿ.ಸತ್ಯನಾರಾಯಣದಾಸ್, ಕೆ.ಬಿ.ಮಂಜುನಾಥ, ಶಿವಕುಮಾರ್, ಪ್ರಕಾಶ್ ಮತ್ತು ರವಿ ಸಾಣೇನಹಳ್ಳಿ.

ಹೀಗೊಂದು ಸೂಚನೆ

ನಮ್ಮ ನಡುವಿನ ವಿವಿಧ ರಾಜಕೀಯ ಪಕ್ಷಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಒಂದು ವಿಭಿನ್ನ ಪಕ್ಷ. ಇದರ ಅಖಿಲ ಭಾರತ ಮಹಾಧಿವೇಶನವು 2008ರ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ತಮಿಳುನಾಡಿನ ಕೊಯಮುತ್ತೂರಿನಲ್ಲಿ ನಡೆಯಲಿದೆ. ರಾಷ್ಟ್ರೀಯ ಅಂತರಾಷ್ಟ್ರೀಯ ರಾಜಕೀಯ, ಆರ್ಥಿಕ, ಸಾಮಾಜಿಕ ಬೆಳವಣಿಗೆಗಳ ಕುರಿತ ಮಹತ್ವದ ಒಳನೋಟಗಳನ್ನು ನೀಡುವ ಮಹಾಮಂಥನ ಈ ಸಮ್ಮೇಳನದಲ್ಲಿ ನಡೆಯಲಿದೆ. ಇಂತಹದ್ದೇ ಸಮ್ಮೇಳನವು ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯ, ಜಿಲ್ಲೆ, ತಾಲ್ಲೂಕು, ಸ್ಥಳೀಯ, ಗ್ರಾಮ/ಶಾಖಾ ಮಟ್ಟಗಳಲ್ಲಿ ನಡೆಯುತ್ತಿವೆ.

ಒಂದು ನಿರ್ದಿಷ್ಟ ಪ್ರದೇಶದ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುವ ಈ ಸಮ್ಮೇಳನದ ವರದಿಗಳು ಜನಶಕ್ತಿಯ ಓದುಗರಿಗೂ ಒಂದು ಅಮೂಲ್ಯ ಮಾಹಿತಿಯೇ ಆಗುತ್ತದೆ. ಈ ಹಿನ್ನೆಲೆಯಲ್ಲಿ ವರದಿಗಾರರು ಸಿಪಿಐ(ಎಂ)ನ ಜಿಲ್ಲಾ ಸಮ್ಮೇಳನಗಳ ವರದಿಯನ್ನು ಪ್ರಮುಖ ತಾಲ್ಲೂಕು ಸಮ್ಮೇಳನಗಳ ವರದಿಯನ್ನು ನೀಡಬೇಕೆಂದು ಕೋರಲಾಗಿದೆ. ಹಾಗೆ ವರದಿ ಮಾಡುವಾಗ ಅಲ್ಲಿನ ನಿರ್ದಿಷ್ಟ ಪ್ರದೇಶದ ವಿವಿಧ ಜನಸಮುದಾಯಗಳನ್ನು ಬಾಧಿಸುತ್ತಿರುವ ಸಮಸ್ಯೆಗಳು, ಅಲ್ಲಿನ ರಾಜಕೀಯ, ಸಾಮಾಜಿಕ ಬೆಳವಣಿಗೆಗಳ ವಾಸ್ತವಗಳ ಚಿತ್ರಣವನ್ನು ನೀಡುವಂತಹ ವರದಿಯನ್ನು ಕಳುಹಿಸಬೇಕೆಂದು ಕೋರುತ್ತೇವೆ.

ಈ ಸಂಚಿಕೆಯಲ್ಲಿ ಹಾಸನ ವರದಿಯನ್ನು ಪ್ರಕಟಿಸಲಾಗಿದ್ದು ಇದನ್ನು ಒಂದು ಮಾದರಿಯನ್ನಾಗಿ ಸಂಗಾತಿಗಳು ಗಮನಿಸಬಹುದು. ನಿಮ್ಮ ವರದಿ ಸಂಕ್ಷಿಪ್ತವಾಗಿರಲಿ, ಆಕರ್ಷಕವಾಗಿರಲಿ. ಸಂಘಟನಾತ್ಮಕ ಅಂಶಗಳಿಗಿಂತ ಜನರ ಬದುಕಿನ ಪ್ರಶ್ನೆಗಳಿಗೆ ಹೆಚ್ಚು ಒತ್ತು ಇರಲಿ.

ಜಗದಗಲ

ಶರತ್‌ಚಂದ್ರ

ಯಶಸ್ವಿ ಭಾರತ - ರಶ್ಯಾ ಶೃಂಗಸಭೆ

ಎರಡು ದೇಶಗಳ ನಡುವೆ ಮಹತ್ವದ ಒಪ್ಪಂದಗಳಾಗಿವೆ. ಆದರೆ ಅಣುಶಕ್ತಿ ಘಟಕದ ಪ್ರಶ್ನೆ ಬಂದಾಗ ಪ್ರಧಾನಿ ಮನಮೋಹನ್ ಸಿಂಗ್ ಜಾರಿಕೊಳ್ಳಲು ಯತ್ನಿಸಿದ್ದೇಕೆ?

ಭಾರತ-ರಶ್ಯಾ ಶೃಂಗಸಭೆ ಯಶಸ್ವಿಯಾಗಿ ನಡೆದು, ಹಲವು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಶೃಂಗಸಭೆಗೆ ಪ್ರಧಾನಿ ಮನಮೋಹನ್ ಸಿಂಗ್ ಮಾಸ್ಕೊಗೆ ತೆರಳಿದ್ದರು. ರಶ್ಯಾದ ಅಧ್ಯಕ್ಷ ಪುಟಿನ್ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಮೂರು ಹೊಸ ಒಪ್ಪಂದಗಳಿಗೆ ಸಹಿ ಮಾಡಿದ್ದಲ್ಲದೆ, ರೂಪಾಯಿ ಸಾಲ ನಿಧಿಗೆ ಸಂಬಂಧಿಸಿದ ವಿವಾದ ಪರಿಹರಿಸುವ ವಿಧಾನದ ಬಗ್ಗೆ ಒಮ್ಮತ ಮೂಡಿತು. ಇದರಿಂದ 'ತಣ್ಣಗಾಗಿದೆ' ಎನ್ನಲಾದ ಭಾರತ-ರಶ್ಯಾ ನಡುವಿನ ದೀರ್ಘ ಕಾಲೀನ ಸ್ನೇಹ ಸಂಬಂಧದ 'ಗಟ್ಟಿತನ' ಸಾಬೀತಾಗಿದೆ. ಸಂಬಂಧಗಳು 'ತಣ್ಣಗಾಗಿದೆ' ಎಂಬ ಗುಮಾನಿಗೆ, ಭಾರತ ಅಮೆರಿಕದ ಜತೆಗೆ ಸಂಬಂಧಕ್ಕೆ ತೋರುವ ಅತಿ ಉತ್ಸಾಹ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಯಶಸ್ವಿ ಶೃಂಗಸಭೆ ಇನ್ನಷ್ಟು ಮಹತ್ವ ಪಡೆದಿದೆ.


ಉತ್ತೇಜನಕಾರಿ ಒಪ್ಪಂದ

ಎರಡು ದೇಶಗಳ ಬಾಹ್ಯಾಕಾಶ ಸಂಸ್ಥೆಗಳ ನಡುವೆ ಚಂದ್ರಯಾನ-2 ಕಾರ್ಯಕ್ರಮದಲ್ಲಿ ಸಹಕಾರದ ಒಪ್ಪಂದಕ್ಕೆ ಬರಲಾಯಿತು. 2011 ರ ಹೊತ್ತಿಗೆ ಚಂದ್ರನತ್ತ ಮಾನವರಹಿತಯಾನ ಕಾರ್ಯಕ್ರಮದ ಉದ್ದೇಶ. ಈ ಸಹಕಾರ ಎರಡೂ ದೇಶಗಳಲ್ಲಿ ಬಾಹ್ಯಾಕಾಶ ಸಂಶೋಧನೆಗೆ ದೊಡ್ಡ ಉತ್ತೇಜನ ನೀಡಲಿದೆ. ಹೊಸ ಆಧುನಿಕ ಬಹು-ಪಾತ್ರದ ಸಾಗಾಣಿಕೆ ವಿಮಾನವನ್ನು ಜಂಟಿಯಾಗಿ (50:50 ಆಧಾರದ ಮೇಲೆ) ಅಭಿವೃದ್ಧಿ ಪಡಿಸುವ 60 ಕೋಟಿ ಡಾಲರು ವೆಚ್ಚದ ಕಾರ್ಯಕ್ರಮದ ಬಗೆ ಒಪ್ಪಂದಕ್ಕೂ ಸಹಿ ಹಾಕಲಾಯಿತು. ಇದು ರಕ್ಷಣಾ ಕ್ಷೇತ್ರದಲ್ಲಿ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿಯ ಎರಡನೇ ಕಾರ್ಯಕ್ರಮ. ಇತ್ತೀಚೆಗಷ್ಟೆ 5 ನೇ ತಲೆಮಾರಿನ ಫೈಟರ್ ವಿಮಾನ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿಯ ಒಪ್ಪಂದಕ್ಕೆ (ರಕ್ಷಣಾ ಮಂತ್ರಿ ಎ ಕೆ ಆಂಟೋನಿ ರಶ್ಯಾ ಭೇಟಿ ಸಮಯದಲ್ಲಿ) ಸಹಿ ಹಾಕಲಾಯಿತು. ಮಾದಕ ದ್ರವ್ಯದ ಕಳ್ಳ ಸಾಗಾಣಿಕೆ ತಡೆಯಲು ಜಂಟಿ ಕಾರ್ಯಕ್ರಮ ಸಹಿ ಹಾಕಲಾದ ಮೂರನೇ ಒಪ್ಪಂದ.

ರೂಪಾಯಿ ಸಾಲ ನಿಧಿಯ ಉಪಯೋಗದ ಬಗ್ಗೆ ಇದ್ದ ವಿವಾದ ಸಹ ಬಗೆಹರಿಸಲಾಯಿತು. ಈಗ 8 ಸಾವಿರ ಕೋಟಿ ರೂಪಾಯಿಗೆ ಹಿಗ್ಗಿರುವ ಈ ನಿಧಿಯನ್ನು ಭಾರತದಲ್ಲಿ ರಶ್ಯನ್ ಹೂಡಿಕೆಗೆ ಬಳಸಲಾಗುವುದು ಎಂದು ನಿರ್ಧರಿಸಲಾಗಿದೆ. ಎರಡು ದೇಶಗಳ ನಡುವೆ ವ್ಯಾಪಾರ ವಹಿವಾಟನ್ನು ಮೂರು ವರ್ಷಗಳಲ್ಲಿ ಈಗಿನ ಮುನ್ನೂರರಿಂದ ಸಾವಿರ ಕೋಟಿ ಡಾಲರ್‌ಗೆ ಏರಿಸಲು ನಿರ್ಧರಿಸಲಾಯಿತು. ಈ ಎರಡು ದೊಡ್ಡ ಆರ್ಥಿಕಗಳ ನಡುವೆ ಇದು ಏನೇನೂ ಸಾಲದು ಎಂದು ಎರಡೂ ಕಡೆಯಿಂದ ಅಭಿಪ್ರಾಯ ವ್ಯಕ್ತವಾಯಿತು. ಇದನ್ನು ತೀವ್ರಗೊಳಿಸಲು ಜಂಟಿ ಕಾರ್ಯಪಡೆಯನ್ನು ರಚಿಸಲಾಗಿದೆ.

'ಅ' ಬಗ್ಗೆ ಚರ್ಚೆಗೆ ಹಿಂದೇಟು ಯಾಕೆ

ರಶ್ಯ ನಾಲ್ಕು ಅಣುಶಕ್ತಿ ಘಟಕಗಳನ್ನು ಕಟ್ಟುವ ಬಗ್ಗೆ ಕರಡು ಒಪ್ಪಂದ ಮುಂದಿಟ್ಟಿದ್ದು. ಭಾರತ ಈ ಒಪ್ಪಂದದ ಬಗೆಗೆ ಚರ್ಚಿಸಲು ಮತ್ತು ಸಹಿ ಹಾಕಲು ಹಿಂದೇಟು ಹೊಡೆಯಿತು. ಈ ವರ್ಷದ ಆರಂಭದಲ್ಲಿ ಈ ಬಗ್ಗೆ ನಿರ್ಧಾರವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಅಷ್ಟೇನು ವರದಿಯಾಗದ ರಶ್ಯ ಶೃಂಗಸಭೆಯ ವಿಶೇಷ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಈ ಬಗ್ಗೆ ಕೇಳಲಾದಾಗ, ಐ.ಎ.ಈ.ಎ. ಜತೆ ಮಾತುಕತೆ ನಡೆಸದೆ ಅಂತರ್ರಾಷ್ಟ್ರೀಯ ಸುರಕ್ಷಿತಾ ಕ್ರಮ ಪಾಲಿಸದೆ ಅಂತರ್ರಾಷ್ಟ್ರೀಯ ಕಾನೂನು ಉಲ್ಲಂಘಿಸಿದಂತಾಗುವುದೇ ಎಂಬುದನ್ನು ಪರಿಶೀಲಿಸಬೇಕಾಗಿದೆ ಎಂದು ಜಾರಿಕೊಳ್ಳಲು ಪ್ರಯತ್ನಿಸಿದರು. ರಶ್ಯ ಸದಸ್ಯತ್ವ ಹೊಂದಿರುವ ಅಣು ಪೂರೈಕೆದಾರರ ಗುಂಪಿನ ನಿಯಮ ಇದು. ಅಂತರ್ರಾಷ್ಟ್ರೀಯ ಕಾನೂನು ಅಲ್ಲ. ರಶ್ಯ ಈ ಬಗ್ಗೆ ತಲೆಕೆಡಿಸಿಕೊಳ್ಳದೆ ಈ ಬಗ್ಗೆ ಒಪ್ಪಂದಕ್ಕೆ ತಯಾರಿರುವಾಗ ಇನ್ನೇನು ಸಮಸ್ಯೆ ಎಂದು ಕೇಳಲಾದಾಗ, ಭಾರತದ ವಕ್ತಾರರ ಬಳಿ ಅದಕ್ಕೆ ಉತ್ತರ ಇರಲಿಲ್ಲ. ಅಮೆರಿಕನ್ ಸರಕಾರಕ್ಕೆ ಇದು ಇಷ್ಟವಾಗಲಿಕ್ಕಿಲ್ಲ ಎಂಬ ಭಯ ನಿಜವಾದ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ.



ಪ್ರಧಾನಿಸಿಂಗ್, ಪುಟಿನ್ ಮತ್ತು ನಾರಾಯಣನ್

ಒಪ್ಪಂದಗಳ ಬಗ್ಗೆ ಪ್ರತಿನಿಧಿ ಮಂಡಲ ಮಟ್ಟದ ಸಭೆ ನಡೆದವು. ಇದಲ್ಲದೆ ಉನ್ನತ ಮಟ್ಟದ ಸಭೆ ಸಹ ನಡೆಯಿತು. ಭಾರತದ ಕಡೆಯಿಂದ ಪ್ರಧಾನಿ, ರಾಷ್ಟ್ರೀಯ ರಕ್ಷಣಾ ಸಲಹಾಗಾರ ನಾರಾಯಣನ್, ವಿದೇಶ ಕಾರ್ಯದರ್ಶಿ ಪಾಲ್ಗೊಂಡಿದ್ದರು. ರಶ್ಯ ಕಡೆಯಿಂದ ಅಧ್ಯಕ್ಷ ಪುಟಿನ್ ಜತೆ ಅವರ ಉನ್ನತ ರಕ್ಷಣಾ, ವಿದೇಶ ಸಚಿವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಪ್ರಮುಖವಾಗಿ ಅಂತರ್ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಯಿತು. ಇರಾನ್, ನೆರೆಯ (ಪಾಕಿಸ್ತಾನ, ಅಫಘಾನಿಸ್ತಾನ) ದೇಶಗಳ ಪ್ರಸ್ತುತ ಪರಿಸ್ಥಿತಿ ಮತ್ತು ತ್ರಿಪಕ್ಷೀಯ ವೇದಿಕೆ ಬಗ್ಗೆ ಚರ್ಚೆ ನಡೆಯಿತು ಎನ್ನಲಾಗಿದೆ. ಈ ಚರ್ಚೆಯ ಕೆಲವು ಅಂಶಗಳು ಪತ್ರಿಕಾ ಗೋಷ್ಠಿಯಲ್ಲಿ ಬೆಳಕಿಗೆ ಬಂದವು. ಪುಟಿನ್ ಇರಾನ್ ಬಗ್ಗೆ ಅಂತರ್ರಾಷ್ಟ್ರೀಯ ಕಾನೂನು ಮನ್ನಿಸುವುದಲ್ಲದೆ, ವಿಶ್ವಸಂಸ್ಥೆಯ ಪಾತ್ರದ ಪ್ರಾಥಮಿಕತೆಗೆ ಒತ್ತು ಕೊಟ್ಟರು. ಪ್ರಧಾನಿ ಸಿಂಗ್ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಬೇಕು ಎಂದರು. ಭಾರತ-ದಕ್ಷಿಣ ಆಫ್ರಿಕ-ಬ್ರೆಜಿಲ್ ಗಳ ತ್ರಿಪಕ್ಷೀಯ ವೇದಿಕೆಯ ಮಾದರಿಯಲ್ಲಿ, ಭಾರತ-ರಶ್ಯಾ-ಚೀನಾ ಗಳು ಶಾಶ್ವತ ತ್ರಿಪಕ್ಷೀಯ ವೇದಿಕೆ ರಚಿಸಬೇಕು ಎಂದು ಪುಟಿನ್ ಪ್ರಸ್ತಾವ ಮಾಡಿದರು. ಪಾಕಿಸ್ತಾನ, ಅಫಘಾನಿಸ್ತಾನ ದೇಶಗಳ ಪ್ರಸ್ತುತ ಪರಿಸ್ಥಿತಿ ಬಗ್ಗೆ ಒಮ್ಮತ ಇದೆ ಎಂದು ಹೇಳಲಾಯಿತು.

ಫ್ರೆಂಚ್ ಅಧ್ಯಕ್ಷರ 'ಸುಧಾರಣೆ' ಗಳಿಗೆ ಸಾರ್ವತ್ರಿಕ ವಿರೋಧ

ಫ್ರಾನ್ಸ್ ನಲ್ಲಿ ರೈಲು ಕಾರ್ಮಿಕರ ಮುಷ್ಕರ ಏಳನೇ ದಿನಕ್ಕೆ ಕಾಲಿಟ್ಟಿದೆ. ಏಳನೇ ದಿನದಂದು ಐವತ್ತು ಲಕ್ಷ ಫ್ರೆಂಚ್ ಸರ್ಕಾರಿ ನೌಕರರ ದೊಡ್ಡ ವಿಭಾಗ ಮುಷ್ಕರ ಘೋಷಿಸಿದೆ. ಈಗಾಗಲೇ ವಿದ್ಯಾರ್ಥಿಗಳು, ಸಾಗಾಣಿಕೆ ಕಾರ್ಮಿಕರು ಮುಷ್ಕರದಲ್ಲಿದ್ದು, ಸರ್ಕಾರಿ ನೌಕರರ ಸೇರ್ಪಡೆಯಿಂದ ಫ್ರಾನ್ಸ್ ಜನಜೀವನ ಹೆಚ್ಚು ಕಡಿಮೆ ಸ್ತಬ್ಧವಾಗಿದೆ. ಮೂರು ಲಕ್ಷ ಶಿಕ್ಷಕರು, ಅಂಚೆ ನೌಕರರು ಮುಷ್ಕರದಲ್ಲಿ ಭಾಗ ವಹಿಸುತ್ತಿದ್ದಾರೆ. ವಿದ್ಯುತ್ ಮುಂತಾದ ಅಗತ್ಯಸೇವೆಗಳ ಕಾರ್ಮಿಕರ ದೊಡ್ಡ ವಿಭಾಗ ಸಹ ಮುಷ್ಕರದಲ್ಲಿದೆ. ಪತ್ರಿಕೆಗಳು ಬರಲಿಲ್ಲ. ರೇಡಿಯೋ, ಟೀವಿ ಸ್ಟೇಶನ್ ಗಳು ಮಾಮೂಲಿ ಕಾರ್ಯಕ್ರಮದ ಬದಲು ಸಂಗೀತ ಹಾಕಿಬಿಟ್ಟಿದ್ದವು. ಪ್ಯಾರೀಸ್ ಸೇರಿದಂತೆ ದೇಶದಾದ್ಯಂತ ಭಾರೀ ಪ್ರದರ್ಶನಗಳು ನಡೆದಿವೆ. ಜನಜೀವನವನ್ನು ತೀವ್ರವಾಗಿ ಅಸ್ತವ್ಯಸ್ತಗೊಳಿಸಿದ್ದರೂ, ಮುಷ್ಕರಕ್ಕೆ ವ್ಯಾಪಕ ಜನ ಬೆಂಬಲ ಇರುವುದು ಕಂಡು ಬಂದಿದೆ. ಮುಷ್ಕರದಲ್ಲಿ ಭಾಗವಹಿಸುತ್ತಿರುವ ಬೇರೆ ಬೇರೆ ಜನವಿಭಾಗಗಳ ನಿರ್ದಿಷ್ಟ ಬೇಡಿಕೆ ಬೇರೆ ಬೇರೆಯಾದರೂ, ಅಧ್ಯಕ್ಷ ಸರ್‌ಕೋಝಿ ಯವರ 'ಸುಧಾರಣೆ'ಗಳಿಗೆ ತೀವ್ರ ವಿರೋಧ ಸಮಾನ ಸೂತ್ರ. 'ಸುಧಾರಣೆ'ಗಳು ಫ್ರಾನ್ಸ್ ನ ವ್ಯಾಪಕ ಸಾಮಾಜಿಕ ಸೇವಾ ಮತ್ತು ಕಲ್ಯಾಣ ಕ್ರಮಗಳಲ್ಲಿ ತೀವ್ರ ಕಡಿತ ಮಾಡುವ ಉದ್ದೇಶ ಹೊಂದಿವೆ. 'ಸುಧಾರಣೆ'ಗಳು ಫ್ರಾನ್ಸ್ ನ ಆರ್ಥಿಕತೆ ಬಲಪಡಿಸಲು ಅಗತ್ಯ ಎಂಬ ಸರ್ಕಾರದ ವಾದವನ್ನು ಯಾರೂ ನಂಬುತ್ತಿಲ್ಲ. ಫ್ರಾನ್ಸ್ ನ ಜನತೆಯ ದೊಡ್ಡ ಜನವಿಭಾಗಗಳ ಆದಾಯ ಮತ್ತು ಆ ಮೂಲಕ ಕೊಳ್ಳುವ ಶಕ್ತಿ ಕುಂದಿಸುವ ಕ್ರಮ ಆರ್ಥಿಕವನ್ನು ಕುಗ್ಗಿಸುತ್ತಿವೆ ಎಂದು ಟ್ರೇಡ್ ಯೂನಿಯನ್ ಗಳು ವಾದಿಸಿವೆ.

ಬಿಜೆಪಿಗೆ ಬಾಗಿಲು ಮುಚ್ಚಲು ಜೆಡಿ(ಎಸ್) ತಯಾರಿದೆಯೇ?

ಪುಟ 5 ರಿಂದ

ನಿರಂತರವಾದ ದೃಢವಾದ ಕ್ರಮಗಳು

ಕಾಂಗ್ರೆಸ್‌ನ ವಿರುದ್ಧ ಅತೃಪ್ತಿಯನ್ನು ಬಳಸಿಕೊಳ್ಳುವುದರ ಜೊತೆಗೆ ಬಿಜೆಪಿ ರಾಜ್ಯದಲ್ಲಿ ಬೆಳವಣಿಗೆ ಕಾಣಲು ಸಂಘ ಪರಿವಾರ ಅನೇಕ ಕ್ರಮಗಳನ್ನು ಅನುಸರಿಸುತ್ತಿದೆ. ಅದರಲ್ಲಿ ಮುಖ್ಯವಾದದ್ದು ಮೂರು ರೀತಿಯ ಕಾರ್ಯ ತಂತ್ರಗಳು. ಅದನ್ನು ಸಿಪಿಐ(ಎಂ) ತ್ರಿಶೂಲ ಕಾರ್ಯಕ್ರಮ ಎಂದು ಹೆಸರು ನೀಡಿದೆ. ಮೊದಲನೆಯದು ಸ್ಥಳೀಯವಾಗಿ ಅನೇಕ ಹಳ್ಳಿ ಹಾಗೂ ಪೇಟೆಗಳ ಭಾಗಗಳಲ್ಲಿ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಗಲಭೆಗಳನ್ನು ಮೂಡಿಸುವ ಸಣ್ಣ ದೊಡ್ಡ ಕಾರಣಗಳನ್ನು ಹುಡುಕುವುದು, ಜನರನ್ನು ಎತ್ತಿಕಟ್ಟಿ ಗಲಭೆ ಮಾಡಿಸುವುದು, ವಿಶಾಲ ಹಿಂದೂ ಸಮಾವೇಶಗಳನ್ನು ನಡೆಸುವುದು ಹಾಗೂ ಈದ್ಗಾ ವಿವಾದ, ಬಾಬಾಬುಡನ್‌ಗಿರಿಯಂತಹ ಪ್ರಶ್ನೆಗಳನ್ನು, ಎತ್ತಿ ರಾಜ್ಯ ಮಟ್ಟದ ಪ್ರಚಾರ, ಗಲಭೆಗಳನ್ನು ಹುಟ್ಟುಹಾಕುವುದು. ಇವುಗಳನ್ನು ಆಯಾ ಪ್ರದೇಶದಲ್ಲಿ ಆರಂಭದಲ್ಲಿಯೇ ಗುರುತಿಸಿ ಚಿವುಟಿಹಾಕಬೇಕು. ಅದಕ್ಕಾಗಿ ಜನತಾದಳದ ಕಾರ್ಯಕರ್ತರನ್ನು ಸನ್ನದ್ಧಗೊಳಿಸಬೇಕು.

ಜನತಾದಳದ ಒಗ್ಗಟ್ಟು, ಇತರ ಜಾತ್ಯಾತೀತ ಪಕ್ಷ ಹಾಗೂ ಶಕ್ತಿಗಳ ಜೊತೆಗೆ ಸಹಕಾರ:

ಕರ್ನಾಟಕದಲ್ಲಿ ಬಿಜೆಪಿ ಬೆಳವಣಿಗೆಯನ್ನು ತಡೆಯಬೇಕೆಂದರೆ ಜನತಾ ದಳ ದುರ್ಬಲವಾಗುವುದನ್ನು, ಒಡೆಯುವುದನ್ನು ತಡೆಗಟ್ಟಬೇಕು. ಸೆಕ್ಯುಲರ್ ವಾದದ ಪರವಾಗಿ, ಕೋಮುವಾದದ ವಿರುದ್ಧವಾಗಿ ಪರ್ಯಾಯ ಆರ್ಥಿಕ ನೀತಿಯ ಹಾದಿಯೇ ಆಧಾರಮೇಲೆ ಪಕ್ಷದಲ್ಲಿ ಒಗ್ಗಟ್ಟನ್ನು ರೂಪಿಸಬೇಕು ಹಾಗೂ ಕಾಯ್ದುಕೊಳ್ಳಬೇಕು. ಬಿಜೆಪಿಯನ್ನು ತಡೆಗಟ್ಟಲು ತನ್ನ ಶಕ್ತಿಯೊಂದೇ ಸಾಲದು ಎಂಬುದನ್ನು ಅರಿತುಕೊಳ್ಳಬೇಕು. ಕೋಮುವಾದವನ್ನು ವಿರೋಧಿಸುವ ಕಾಂಗ್ರೆಸ್ಸೇತರ ಪಕ್ಷ, ಶಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳುವ, ಜೊತೆಗೂಡಿ ಕೆಲಸ ಮಾಡುವ ಮನೋಭಾವವನ್ನು ಮೂಡಿಸಿಕೊಳ್ಳಬೇಕು. ಇದೂ ಕೂಡ ಜನತಾದಳ ಇಲ್ಲಿಯವರೆಗೆ ಸರಿಯಾಗಿ ಅರ್ಥ ಮಾಡಿಕೊಳ್ಳದಿರುವ, ಅನುಸರಿಸದಿರುವ ವಿಷಯ. ಹೀಗೆ ತಮ್ಮ ಪಕ್ಷದ ವಿಷಯದಲ್ಲಿಯೂ, ಬೇರ ಪಕ್ಷಗಳ ವಿಷಯದಲ್ಲಿಯೂ ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳುವುದು ಒಂದು ಸವಾಲು. ಈ ಸವಾಲನ್ನು ಸ್ವೀಕರಿಸಲು ದೇವೇಗೌಡರು, ಅವರ ಪಕ್ಷ ಸಿದ್ಧವಿದೆಯೇ?

ಹೀಗೆ ಕೋಮುವಾದ, ಸೆಕ್ಯುಲರ್ ವಾದವನ್ನು ಅರ್ಥಮಾಡಿಕೊಳ್ಳುವ ತಮ್ಮ ಪಕ್ಷ ಹಾಗೂ ಜನರಿಗೆ ವಿವರಿಸುವ, ಸಂಘ ಪರಿವಾರದ ಕೋಮುವಾದಿ ಕುತಂತ್ರಗಳನ್ನು ಎದುರಿಸುವ, ಪರ್ಯಾಯ ಆರ್ಥಿಕ ನೀತಿಗಳನ್ನು ಅನುಸರಿಸುವ, ಜನತಾದಳದ ಒಗ್ಗಟ್ಟನ್ನು ಉಳಿಸಿಕೊಳ್ಳುವ, ಸೆಕ್ಯೂಲರ್ ಶಕ್ತಿಗಳನ್ನು ಒಗ್ಗೂಡಿಸುವ ಸವಾಲನ್ನು ಸ್ವೀಕರಿಸಲು ಜೆಡಿ(ಎಸ್) ಸಿದ್ಧವಿದೆಯೇ? ಆಗ ಮಾತ್ರ ಬಿಜೆಪಿಗೆ ಕರ್ನಾಟಕದ ಬಾಗಿಲು ಮುಚ್ಚಲು ಸಾಧ್ಯ.

ರಶಿಯಾ ಕ್ರಾಂತಿ ಏಕೆ ಕುಸಿಯಿತು?

ಪುಟ 2 ರಿಂದ

ಇಂತಹ ವಿಕೃತಿಗಳು ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ದಾರಿಯನ್ನು ಬಿಟ್ಟು ಅಡ್ಡದಾರಿ ಹಿಡಿಯುವ ಬೆಳವಣಿಗೆಗಳು ಸೋವಿಯತ್ ಯೂನಿಯನ್‌ನಲ್ಲಿ, ಮುಖ್ಯವಾಗಿ ಸೋವಿಯತ್ ಯೂನಿಯನ್ ಕಮ್ಯೂನಿಸ್ಟ್ ಪಕ್ಷದ 20ನೇ ಮಹಾಧಿವೇಶನದ ನಂತರ ನಡೆಯಿತು. ಇದುವೇ ಸಮಾಜವಾದದ ಹಿನ್ನಡೆಗೆ ಕಾರಣವಾಯಿತು.

ಸಮಾಜವಾದದ ನಿರ್ಮಾಣದಲ್ಲಾದ ತಪ್ಪುಗಳು

ಸಮಾಜವಾದವು ಅನ್ವೇಷಣೆಯಲ್ಲಿತ್ತು. ಇದುವರೆಗೆ ಯಾರೂ ನಡೆದು ಹೋಗದ ದಾರಿಯಲ್ಲಿ ಅದು ಸಾಗತೊಡಗಿತ್ತು. ಯಾವುದೇ ನೀಲಿ ನಕ್ಷೆಯಾಗಲಿ ಸಿದ್ಧ ಸೂತ್ರಗಳಾಗಲಿ ಇರಲಿಲ್ಲ. ಹೀಗಾಗಿ ಸಮಾಜವಾದದ ನಿರ್ಮಾಣದ ಸಮಯದಲ್ಲಿ ಸೋವಿಯತ್ ಯೂನಿಯನ್‌ನಲ್ಲಿ ಕೆಲವು ತಪ್ಪುಗಳಾದವು.

ಸಮಾಜವಾದವೆಂದರೆ ಹಿಂದಿನ ಶೋಷಕ ವರ್ಗಗಳ ಮೇಲೆ ಶೋಷಿತ ಬಹುಸಂಖ್ಯಾತರು ಸಾಧಿಸುವ ಸರ್ವಾಧಿಕಾರವಾಗಿದೆ. ದುಡಿಯುವ ಜನರ ಸರ್ವಾಧಿಕಾರವು ಬಂಡವಾಳಶಾಹಿಗಳ ಸರ್ವಾಧಿಕಾರಕ್ಕೆ ವಿರುದ್ಧವಾಗಿದೆ. ಬಂಡವಾಳಶಾಹಿ ಸರ್ವಾಧಿಕಾರವು ಸಂಖ್ಯೆಯಲ್ಲಿ ಅತಿ ಸಣ್ಣ ವಿಭಾಗವು ಸಮಾಜದ ಬಹುಸಂಖ್ಯಾತರ ಮೇಲೆ ನಡೆಸುವ ಸರ್ವಾಧಿಕಾರವಾಗಿದೆ.

ಆದರೆ ಸಮಾಜವಾದ ಮುನ್ನಡೆಯುತ್ತಾ ಹೋದಂತೆ ದುಡಿಯುವ ಜನರ ಆಳ್ವಿಕೆಯ ರೂಪವೂ ಸಹ ವಿಕಾಸಗೊಳ್ಳುತ್ತಾ ಹೋಗಬೇಕಾಗುತ್ತದೆ. ಎಲ್ಲಾ ಪರಿಸ್ಥಿತಿಗಳಿಗೂ, ಎಲ್ಲಾ ಸಮಾಜವಾದಿ ದೇಶಗಳಿಗೂ ಒಂದೇ ರೂಪ ಅನ್ವಯವಾಗಲಾರದು. ಈ ಪ್ರಕ್ರಿಯೆಯನ್ನು ಸ್ಟಾಲಿನ್ ಬಹಳ ಸ್ಪಷ್ಟವಾಗಿ ವಿವರಿಸಿದ್ದಾರೆ. ಪ್ರಭುತ್ವದ ಚಟುವಟಿಕೆಗಳಲ್ಲಿ ಜನತೆ ಹೆಚ್ಚೆಚ್ಚು ಪಾಲ್ಗೊಳ್ಳಲು ಸಾಧ್ಯವಾಗಬೇಕಾದರೆ ಸಮಾಜವಾದಿ ಆಳ್ವಿಕೆಯ ರೂಪಗಳು ಪರಿವರ್ತನೆಯಾಗುತ್ತಾ ಸಾಗಬೇಕಾಗುತ್ತದೆ. ಸಕಾಲದಲ್ಲಿ ಇಂತಹ ಪರಿವರ್ತನೆಗಳನ್ನು ಮಾಡದೆ ಹೋದರೆ ಜನತೆಯ ಹೆಚ್ಚುತ್ತಿರುವ ಆಶೋತ್ತರಗಳು ಹತ್ತಿಕ್ಕಲ್ಪಟ್ಟು ಜನತೆಯಲ್ಲಿ ಅತೃಪ್ತಿ ಹಾಗೂ ಪರಕೀಯತೆ ಬೆಳೆಯಲು ಕಾರಣವಾಗುತ್ತದೆ. ಸಮಾಜವಾದಿ ಆಳ್ವಿಕೆಯ ರೂಪವು ಆಯಾ ದೇಶದ ನಿರ್ದಿಷ್ಟ ಸಾಮಾಜಿಕ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಇರಬೇಕಾಗುತ್ತದೆ.

ಲೆನಿನ್ ತನ್ನ 'ಪ್ರಭುತ್ವ ಮತ್ತು ಕ್ರಾಂತಿ' ಎಂಬ ಕೃತಿಯಲ್ಲಿ ಬಂಡವಾಳಶಾಹಿ ಪ್ರಭುತ್ವವು ಹಲವು ರೂಪಗಳನ್ನು ಹೊಂದಿರುವಂತೆಯೇ ಬಂಡವಾಳಶಾಹಿ ವ್ಯವಸ್ಥೆಯಿಂದ ಸಮತಾ ಸಮಾಜ ವ್ಯವಸ್ಥೆಗೆ ಪರಿವರ್ತನೆಯಾಗುವ ಅವಧಿಯಲ್ಲಿ ಆಳ್ವಿಕೆಯ ವಿವಿಧ ರಾಜಕೀಯ ರೂಪಗಳು ಅವಶ್ಯವಾಗುತ್ತವೆ. ರೂಪಗಳು ಬೇರೆ ಬೇರೆಯಾಗಿದ್ದರೂ ಅವುಗಳ ತಿರುಳು ಒಂದೇ ಆಗಿರುತ್ತದೆ. ಬಂಡವಾಳಶಾಹಿ ಪ್ರಭುತ್ವದ ರೂಪಗಳು ಬೇರೆ ಬೇರೆ ಆಗಿದ್ದರೂ ಬಂಡವಾಳಶಾಹಿ ಸರ್ವಾಧಿಕಾರವೇ ಅವುಗಳ ತಿರುಳು ಆಗಿರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಸಮತಾ ಸಮಾಜ ವ್ಯವಸ್ಥೆಗೆ ಪರಿವರ್ತನೆಯಾಗುವ ಅವಧಿಯಲ್ಲಿ ಆಳ್ವಿಕೆಯ ವಿವಿಧ ರೂಪಗಳು ಮೂಡಿಬರುವಂತಾದರೂ ಅವುಗಳ ತಿರುಳು ದುಡಿಯುವ ಜನರ ಸರ್ವಾಧಿಕಾರವೇ ಆಗಿರುತ್ತದೆ.

ಆದರೆ ಎರಡನೇ ಜಾಗತಿಕ ಯುದ್ಧ ನಂತರ ಪೂರ್ವ ಯುರೋಪಿನ ಸಮಾಜವಾದಿ ದೇಶಗಳಲ್ಲಿ ...ಕೆಯ ರೂಪವನ್ನು ನಿರ್ಧರಿಸುವಾಗ ಈ ತಿಳುವಳಿಕೆಯನ್ನು ಕಡೆಗಣಿಸಲಾಯಿತು. ಆ ದೇಶಗಳ ನಿರ್ದಿಷ್ಟ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಮತ್ತು ಅವುಗಳ ಚಾರಿತ್ರಿಕ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳದೆ ಸೋವಿಯತ್ ಆಳ್ವಿಕೆಯ ರೂಪವನ್ನು ಅಳವಡಿಸಲಾಯಿತು. ಉದಾಹರಣೆಗೆ, ಜೆಕೊಸ್ಲಾವಾಕಿಯಾದಲ್ಲಿ ಕ್ರಾಂತಿಯ ಪೂರ್ವದಲ್ಲೇ ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತಿಗೆ ಕಮ್ಯೂನಿಸ್ಟರು ಆಯ್ಕೆಯಾದರು. ಮುಂದೆ ಬಹುಪಕ್ಷೀಯ ಪದ್ಧತಿಯನ್ನು ರದ್ದುಮಾಡಿದಾಗ, ಬಹಳಷ್ಟು ಅದನ್ನು ತಮ್ಮ ಹಕ್ಕುಗಳ ದಮನ ಎಂದು ಭಾವಿಸುವಂತಾಯಿತು. ಇಂತಹ ಕ್ರಮಗಳಿಂದಾಗಿ ಜನತೆಯಲ್ಲಿ ಅತೃಪ್ತಿ ಹಾಗೂ ಪರಕೀಯತೆ ಬೆಳೆಯಲು ಕಾರಣವಾಯಿತು.

ಸಮಾಜವಾದಿ ಪ್ರಜಾಪ್ರಭುತ್ವ

ಇನ್ನೊಂದು . ತಪ್ಪು ಸಮಾಜವಾದಿ ಪ್ರಜಾಪ್ರಭುತ್ವದ ವಿಷಯದಲ್ಲಿ ಸಂಭವಿಸಿತು. ಸಮಾಜವಾದಿ ವ್ಯವಸ್ಥೆಯಲ್ಲಿನ ಪ್ರಜಾಪ್ರಭುತ್ವವು ಬಂಡವಾಳಶಾಹಿ ಪ್ರಜಾಪ್ರಭುತ್ವಕ್ಕಿಂತ ಆಳವಾದುದು, ಶ್ರೀಮಂತವಾದುದು ಆಗಿರಬೇಕು. ಬಂಡವಾಳಶಾಹಿ ವ್ಯವಸ್ಥೆಯು ಔಪಚಾರಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡುತ್ತದೆ; ಆದರೆ ಅದು ಬಹುಸಂಖ್ಯಾತ ಜನಗಳಿಗೆ ಅವುಗಳನ್ನು ಅನುಭವಿಸುವ ಸಾಮರ್ಥ್ಯವನ್ನು ಒದಗಿಸುವುದಿಲ್ಲ. ಉದಾಹರಣೆಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರತಿಯೊಬ್ಬನಿಗೂ ತನಗೆ ಬೇಕಾಗಿರುವುದನ್ನು ಕೊಂಡುಕೊಳ್ಳುವ ಹಕ್ಕು ಇರುತ್ತದೆ. ಆದರೆ ಬಹುಸಂಖ್ಯಾತರಿಗೆ ಈ ಹಕ್ಕನ್ನು ಚಲಾಯಿಸುವ ಸಾಮರ್ಥ್ಯ ಇರುವುದಿಲ್ಲ. ಸಮಾಜವಾದವು ಹಕ್ಕುಗಳನ್ನು ಒದಗಿಸಬೇಕು, ಜೊತೆಯಲ್ಲಿ ಆ ಹಕ್ಕುಗಳನ್ನು ಚಲಾಯಿಸುವ ಸಾಮರ್ಥ್ಯವನ್ನು ಒದಗಿಸಬೇಕು.

ಸಮಾಜವಾದಿ ಪ್ರಜಾಪ್ರಭುತ್ವವನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ತಪ್ಪುಗಳಾದವು. ದುಡಿಯುವ ಜನರ ಸರ್ವಾಧಿಕಾರವು ಕಾಲಕ್ರಮೇಣ ದುಡಿಯುವ ಜನರ ಮುಂಚೂಣಿಯಾಗಿರುವ ಪಕ್ಷದ ಸರ್ವಾಧಿಕಾರವಾಗಿ ಪರಿವರ್ತನೆ ಯಾಯಿತು. ದಿನಕಳೆದಂತೆ, ಇದು ಪಕ್ಷದ ನಾಯಕತ್ವದ ಸರ್ವಾಧಿಕಾರಕ್ಕೆ ಎಡೆಮಾಡಿಕೊಟ್ಟಿತು. ಕಾರ್ಮಿಕ ವರ್ಗವನ್ನು ಮತ್ತು ಇಡೀ ದುಡಿಯುವ ಜನತೆಯನ್ನು ಪ್ರತಿನಿಧಿಸಬೇಕಾದ ಸಮಾಜವಾದಿ ಪ್ರಭುತ್ವವು ಪಕ್ಷದ ಒಂದು ಸಣ್ಣ ವಿಭಾಗಕ್ಕೆ ಅಧೀನವಾಯಿತು. ಉದಾಹರಣೆಗೆ ಪಕ್ಷದ ಪೊಲಿಟ್ ಬ್ಯೂರೋ ತೀರ್ಮಾನಗಳನ್ನು ಎಲ್ಲ ನಾಗರೀಕರ ಮೇಲೆ ಹೇರುವ ಕ್ರಮಗಳು ಜರುಗಿದವು. ಆದೇಶಗಳನ್ನು ಜಾರಿಮಾಡಲಾಯಿತೆ ಹೊರತು, ಕೆಳಹಂತದಲ್ಲಿ ಪಕ್ಷದ ಸದಸ್ಯರಲ್ಲದ ಬಹುಸಂಖ್ಯಾತ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ, ಅವರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನಗಳು ಜರುಗಲಿಲ್ಲ. ಪಕ್ಷದ ತೀರ್ಮಾನಗಳನ್ನು ಜನರ ಪ್ರಜಾಸತ್ತಾತ್ಮಕ ಘಟಕಗಳಲ್ಲಿ ವಿವರಿಸುವ ಮತ್ತು ಆ ಮೂಲಕ ಅವರನ್ನು ತೀರ್ಮಾನಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳಿಸುವ ಪಕ್ಷದ ನಾಯಕತ್ವವನ್ನು ಜನತೆಯ ಗರಿಷ್ಠ ಪಾಲ್ಗೊಳ್ಳುವಿಕೆ ಇರುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ರೂಪಿಸುವ ಲೆನಿನ್‌ವಾದಿ ತತ್ವವನ್ನು ಕೈಬಿಡಲಾಯಿತು. ಇದು ಸಹಜವಾಗಿ, ಜನತೆಯಲ್ಲಿ ಪರಕೀಯತೆಯನ್ನು ಗಟ್ಟಿಗೊಳಿಸಲು ಕಾರಣವಾಯಿತು.

ಇದರ ಜೊತೆಯಲ್ಲಿ, ಸೋವಿಯತ್ ಯುನಿಯನ್ ಚರಿತ್ರೆಯ ಕೆಲವೊಂದು ನಿರ್ದಿಷ್ಟ ಅವಧಿಗಳಲ್ಲಿ, ಪ್ರಜಾಸತ್ತಾತ್ಮಕ ಕೇಂದ್ರವಾದ ತತ್ವದ ಜಾರಿಯ ಪ್ರಕ್ರಿಯೆಯಲ್ಲಿ ಪಕ್ಷದ ಆಂತರಿಕ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗಿರುವುದು ಕಂಡು ಬರುತ್ತದೆ. ಪ್ರಜಾಪ್ರಭುತ್ವ ಕಡೆಗಣಿಸಲ್ಪಟ್ಟಿತು. ಕೇಂದ್ರವಾದವೇ ಪ್ರಧಾನವಾಯಿತು. ಇದರಿಂದಾಗಿ ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧವಾದ ಅಧಿಕಾರಶಾಹಿ ಬೆಳೆಯಲು ಕಾರಣವಾಯಿತು. ಸಮಾಜವಾದಿ ವ್ಯವಸ್ಥೆಗೆ ಪರಕೀಯವಾದ ಭ್ರಷ್ಟಾಚಾರ, ಸ್ವಜನಪಕ್ಷಪಾತದಂತಹ ಪ್ರವೃತ್ತಿಗಳು ಬೆಳೆಯತೊಡಗಿದವು. ಪಕ್ಷದ ನಾಯಕತ್ವವು ವಿಶೇಷ ಸೌಲಭ್ಯಗಳನ್ನು ಸೌಕರ್ಯಗಳನ್ನು ಪಡೆಯುವಂತಾಯಿತು. ಹೀಗಾಗಿ ಪ್ರಜಾಸ್ತತಾತ್ಮಕ ಕೇಂದ್ರವಾದದ ತತ್ವವು, ಅರ್ಥವನ್ನೇ ಕಳೆದುಕೊಳ್ಳುವಂತಾಯಿತು. ಪಕ್ಷದ ನಾಯಕತ್ವದಿಂದ ಜನತೆ ಮತ್ತು ಪಕ್ಷದ ಕಾರ್ಯಕರ್ತರು ದೂರ ಸರಿಯುವಂತಾಯಿತು.

ಇಂತಹ ತಪ್ಪುಗಳನ್ನು ತಿದ್ದುವ ಬದಲು ಗೊರ್ಬಚೇವ್ ನಾಯಕತ್ವವು ಕಾರ್ಮಿಕ ವರ್ಗದ ನೇತೃತ್ವ ಪಾತ್ರ ಮತ್ತು ಪ್ರಜಾಸತ್ತಾತ್ಮಕ ಕೇಂದ್ರವಾದದತತ್ವಗಳನ್ನೇ ತೊರೆದರು. ಈ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಿ ಪಕ್ಷವನ್ನು ನಿರಾಯುಧಗೊಳಿಸಲಾಯಿತು ಮಾತ್ರವಲ್ಲ ಅಗತ್ಯ ತಿದ್ದುಪಡಿಗಳನ್ನು ಮಾಡಿಕೊಳ್ಳುವುದನ್ನು ತಡೆಯಲಾಯಿತು. ಅಂತಿಮವಾಗಿ ಸಮಾಜವಾದವನ್ನೇ ಕಳಚಿ ಹಾಕಲಾಯಿತು.

ಸಮಾಜವಾದಿ ಆರ್ಥಿಕ ನಿರ್ಮಾಣ

ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನದಿಂದಾಗಿ ಮತ್ತು ಕೇಂದ್ರೀಯ ಯೋಜನಾ ಕ್ರಮಗಳಿಂದಾಗಿ ಉತ್ಪಾದನಾ ಶಕ್ತಿಗಳು ಗಮನಾರ್ಹವಾಗಿ ಬೆಳೆದವು. ಇಂತಹ ಸಂದರ್ಭದಲ್ಲಿ ಆರ್ಥಿಕ ನಿರ್ವಹಣೆಯ ವಿಧಾನಗಳಲ್ಲೂ ನಿರಂತರವಾದ ಬದಲಾವಣೆಗಳನ್ನು ತರಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ಉತ್ಪಾದನೆಯಲ್ಲಿ ಸ್ಥಗಿತತೆ ಉಂಟಾಗುತ್ತದೆ. ಉದಾಹರಣೆಗೆ, ಕೃಷಿ ಉತ್ಪಾದನೆ ಲಭ್ಯ ಇರುವ ಎಲ್ಲ ಭೂಮಿಯನ್ನು ಬಳಸಿಕೊಂಡ ನಂತರ, ಉತ್ಪಾದನೆಯಲ್ಲಿ ಇನ್ನೂ ಹೆಚ್ಚಿನ ಹೆಚ್ಚಳವಾಗ ಬೇಕಾದರೆ, ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ ಮಾತ್ರ ಸಾಧ್ಯ. ಇಂತಹ ಬದಲಾವಣೆಗಳನ್ನು ಸಕಾಲದಲ್ಲಿ ಮಾಡದೆ ಹೋದರೆ ಆರ್ಥಿಕ ಕ್ಷೇತ್ರದಲ್ಲಿ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಸೋವಿಯತ್ ಯೂನಿಯನ್‌ನಲ್ಲಿ 1970 ಹಾಗೂ 80 ರ ದಶಕಗಳಲ್ಲಿ ಆದದ್ದು ಇದೇ.

ಇಲ್ಲಿಯೂ ಸಹ, ಆರ್ಥಿಕ ರಂಗದಲ್ಲಿ ಅಗತ್ಯ ಬದಲಾವಣೆಗಳು ಮಾಡುವ ಬದಲು ಗೊರ್ಬಚೆವ್ ನಾಯಕತ್ವವು ಸಮಾಜವಾದಿ ಆರ್ಥಿಕ ತಳಹದಿಯಾಗಿರುವ ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನ ಮತ್ತು ಯೋಜನೆಗಳನ್ನೇ ಕೈಬಿಟ್ಟಿತು. 'ಬಂಡವಾಳಗಾರರ ದೇವರು ಎನ್ನಲಾಧ ಮಾರುಕಟ್ಟೆ ಅರ್ಥವ್ಯವಸ್ಥೆ' ಯ ಪ್ರಭಾವಕ್ಕೆ ಒಳಗಾಗಿ ಸಮಾಜವಾದಿ ಸಮಾಜವಾದ ಪತನಕ್ಕೆ ಕಾರಣವಾಯಿತು.

ಸೈದ್ಧಾಂತಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ನಿರ್ಲಕ್ಷ

ಸಮಾಜವಾದದ ಅಡಿಯಲ್ಲಿ ಜನತೆಯ ಸೈದ್ಧಾಂತಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಗಮನ ನೀಡದಿರುವುದು ಇನ್ನೊಂದು ಪ್ರಮುಖ ವಿಫಲತೆಯಾಗಿತ್ತು. ಜನತೆಯ ಸಾಮೂಹಿಕ ಪ್ರಜ್ಞೆಯನ್ನು ಬೆಳೆಸುವುದರಿಂದ ಮಾತ್ರ ಸಮಾಜವಾದವನ್ನು ಉಳಿಸಲು ಬೆಳೆಸಲು ಸಾಧ್ಯ. ಆಳುವ ಕಮ್ಯೂನಿಸ್ಟ್ ಪಕ್ಷದ ಸೈದ್ಧಾಂತಿಕ ಬದ್ಧತೆಯಿಂದ ಮಾತ್ರ ಜನತೆಯ ಪ್ರಜ್ಞೆಯನ್ನು ಎತ್ತರಿಸಬಹುದು. ಹೀಗಾಗಿ ಆಂತರಿಕ ಹಾಗೂ ಬಾಹ್ಯ ಪ್ರತಿ ಕ್ರಾಂತಿಕಾರಿ ಶಕ್ತಿಗಳು ದಾಳಿ ಮಾಡಲಾರಂಭಿಸಿದಾಗ ಅದನ್ನು ಎದುರಿಸಲಾಗದೆ ಸಮಾಜವಾದಕ್ಕೆ ಹಿನ್ನಡೆ ಉಂಟಾಯಿತು.

ಆದ್ದರಿಂದ, ಸಮಾಜವಾದಕ್ಕೆ ಹಿನ್ನಡೆಯಾಗಲು ಮಾರ್ಕ್ಸ್‌ವಾದ- ಲೆನಿನ್‌ವಾದ ಮೂಲಭೂತ ಸಿದ್ಧಾಂತ ಕಾರಣವಲ್ಲ. ಈ ವೈಜ್ಞಾನಿಕ ಹಾಗೂ ಕ್ರಾಂತಿಕಾರಿ ಸಿದ್ಧಾಂತದ ದಾರಿಯನ್ನು ಬಿಟ್ಟು ಅಡ್ಡ ದಾರಿ ಹಿಡಿದಿದ್ದರಿಂದ ಈ ಅನಾಹುತ ಸಂಭವಿಸಿದೆ.

■ (ಸೀತಾರಾಂ ಯೆಚೂರಿ ಲೇಖನ ಆಧಾರಿತ ಬರಹ)

ಸಮಾಜದವಾದವೇ ಭವಿಷ್ಯ

ಇಂದು ಸಾಮ್ರಾಜ್ಯವಾದವು ವಿಶ್ವದ ಬಹುಸಂಖ್ಯಾತ ಜನ ಸಮುದಾಯಗಳ ಮೇಲೆ ತನ್ನ ದಾಳಿಯನ್ನು ವಿಸ್ತರಿಸುತ್ತಿದೆ, ತೀವ್ರಗೊಳಿಸುತ್ತಿದೆ. ಸಾಮ್ರಾಜ್ಯಶಾಹಿಯ ಈ ಆಕ್ರಮಣದ ಹಿನ್ನೆಲೆಯಲ್ಲಿ ಸಾಮ್ರಾಜ್ಯವಾದ ಮತ್ತು ಸಮಾಜವಾದ ನಡುವೆ, ಸಾಮ್ರಾಜ್ಯಶಾಹಿ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ನಡುವೆ, ಸಾಮ್ರಾಜ್ಯವಾದಿ ದೇಶಗಳ ನಡುವೆ ಹಾಗೂ ಬಂಡವಾಳಶಾಹಿ ದೇಶಗಳಲ್ಲಿ ಬಂಡವಾಳ ಮತ್ತು ಶ್ರಮದ ನಡುವಿನ ವೈರುಧ್ಯಗಳು ತೀವ್ರಗೊಳ್ಳುತ್ತಿವೆ. ಈ ವೈರುಧ್ಯಗಳ ಪೈಕಿ ಸಾಮ್ರಾಜ್ಯವಾದ ಮತ್ತೆ ಸಮಾಜವಾದದ ನಡುವಿನ ವೈರುಧ್ಯವು ಕೇಂದ್ರ ಸ್ಥಾನವನ್ನು ಪಡೆಯುತ್ತಿದೆ ಏಕೆಂದರೆ ಬಂಡವಾಳವಾದ ಮತ್ತು ಸಾಮ್ರಾಜ್ಯವಾದಕ್ಕೆ ಸಮಾಜವಾದ ಒಂದೇ ಪರ್ಯಾಯವಾಗಿದೆ. ಎಷ್ಟೇ ಸುಧಾರಣೆಗಳನ್ನು ಕೈಗೊಂಡರೂ ಬಂಡವಾಳಶಾಹಿ ವ್ಯವಸ್ಥೆ ಶೋಷಣೆಯಿಂದ ಮುಕ್ತವಾದ ವ್ಯವಸ್ಥೆಯಾಗಲಾರದು. ಸಮಾಜವಾದಿ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವುದರಿಂದ ಮಾತ್ರ ಈ ಶೋಷಣೆಯಿಂದ ವಿಮೋಚನೆ ಸಾಧ್ಯ.

ಜಾಗತಿಕ ಮಟ್ಟದಲ್ಲಿ ಮನುಷ್ಯನು ಮನುಷ್ಯನನ್ನು ಶೋಷಣೆ ಮಾಡುವುದನ್ನು ಕೊನೆಗಾಣಿಸಲು, ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ಶೋಷಣೆ ಮಾಡುವುದುನ್ನು ಕೊನೆಗಾಣಿಸಲು ಮಾನವನು ನಿರಂತರವಾಗಿ ನಡೆಸುವ ಹೋರಾಟವೇ ಮಾನವ ಸಮೂಹವನ್ನು ಸಮಾಜವಾದದೆಡೆಗೆ ಕೊಂಡೊಯ್ಯುವ ಪ್ರಕ್ರಿಯೆಯಾಗಿದೆ. ಇದೊಂದು ಕ್ಲಿಷ್ಟವಾದ ಪ್ರಕ್ರಿಯೆ. ಈ ಪ್ರಕ್ರಿಯೆಗೆ ಹಿನ್ನಡೆಗಳೇ ಇರುವುದಿಲ್ಲ ಎಂದು ತಿಳಿಯಬಾರದು. ಹಿನ್ನಡೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಅಂತಹ ಹಿನ್ನಡೆಗಳಿಂದ ಸರಿಯಾದ ಪಾಠಗಳನ್ನು ಕಲಿಯಬೇಕಾಗಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದದ ವಿರುದ್ಧ ಮತ್ತು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದ ವಿರುದ್ಧ ಇಂದು ಸಾಮ್ರಾಜ್ಯಶಾಹಿ ಹಾಗೂ ಪ್ರತಿಗಾಮಿ ಶಕ್ತಿಗಳಿಂದ ವ್ಯವಸ್ಥಿತ ಪ್ರಚಾರ ಹಾಗೂ ದಾಳಿ ನಡೆಯುತ್ತಿರುವಾಗ ವಿಶ್ವದ ಚರಿತ್ರೆಯ ಧಿಕ್ಕನ್ನೇ ಬದಲಾಯಿಸಿದ 1917 ರ ರಶಿಯಾ ಕ್ರಾಂತಿಯ 90ನೇ ವರ್ಷದ ಸ್ಮರಣೆ ವಿಶ್ವದಲ್ಲಿ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ದಮನ, ದಬ್ಬಾಳಿಕೆಯನ್ನು ಅನುಭವಿಸುವ ಜನ ಸಮೂಹಗಳಿಗೆ ತಮ್ಮ ಹೋರಾಟವನ್ನು ಮುನ್ನಡೆಸಲು ಮತ್ತೊಮ್ಮೆ ಅಪಾಯ ಸ್ಫೂರ್ತಿಯನ್ನು ಭರವಸೆಯನ್ನು ಒದಗಿಸಿದೆ.



ಓಂ ಶಾಂತಿ ಓಂ :


ಚಿತ್ರರಂಗದ ಹುಳುಕು
ಮನರಂಜನೆ - ಮೂಢನಂಬಿಕೆ

'ಓಂ ಶಾಂತಿ ಓಂ' ಇದು ಇತ್ತೀಚೆಗೆ ತೆರೆಕಂಡ ಬಾಲಿವುಡ್ ಚಿತ್ರ. ಶಾರುಖ್‌ಖಾನ್ ಈ ಚಿತ್ರದ ಪ್ರಧಾನ ಭೂಮಿಕೆ ನಿರ್ವಹಿಸಿದ್ದಾರೆ. ಕರ್ನಾಟಕದ ಕರಾವಳಿ ಚೆಲುವೆ ದೀಪಿಕಾ ಪಡುಕೋಣೆ ಈ ಚಿತ್ರದ ಮೂಲಕ ಬಾಲಿವುಡ್ ಪ್ರವೇಶಿಸಿದ್ದಾಳೆ. ಈಗಾಗಲೇ ಹಲವು ಯಶಸ್ವಿಗೆ ಚಿತ್ರಗಳನ್ನು ನೀಡಿರುವ ಫರ್‍ಹಾ ಖಾನ್ ಈ ಚಿತ್ರದ ನಿರ್ದೇಶಕರು.

ಈಗಾಗಲೇ ದೇಶಾದ್ಯಂತ ತೆರೆ ಕಂಡಿರುವ ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲೂ ಗೆದ್ದಿದೆ. ಪುನರ್‌ಜನ್ಮದ ಕಥೆಯನ್ನು ಹೊಂದಿರುವ ಓಂ ಶಾಂತಿ ಓಂ ಒಂದು 'ಅಪ್ಪಟ ಮನರಂಜನೆ' ನೀಡುವ ಮಸಾಲೆ ಚಿತ್ರ.

ಚಿತ್ರದ ನಾಯಕ ಒಬ್ಬ ಸಾಮಾನ್ಯ ಸಹ ನಟ. ಚಿತ್ರರಂಗದಲ್ಲಿ ದುಡಿಮೆ ಮಾಡಿಕೊಂಡು ಬಂದ ಕುಟುಂಬ ಆತನದ್ದು. ತಂದೆ-ತಾಯಿ ವೃತ್ತಿಯನ್ನೇ ಆತನೂ ಮುಂದುವರಿಸುತ್ತಾನೆ. ದೀಪಿಕಾ ಪಡುಕೋಣೆ ಜನಪ್ರಿಯ ನಾಯಕಿ. ಚಿತ್ರವೊಂದರ ಶೂಟಿಂಗ್ ಸಂದರ್ಭದಲ್ಲಿ ಆಕಸ್ಮಿಕವಾಗಿ ದೀಪಿಕಾ ಬೆಂಕಿ ಮಧ್ಯೆ ಸಿಲುಕುತ್ತಾಳೆ. ಆಗ ಸೆಟ್‌ನಲ್ಲಿದ್ದ ಶಾರುಖ್ ಆಕೆಯನ್ನು ರಕ್ಷಿಸುತ್ತಾನೆ. ಅಲ್ಲಿಂದ ಅವರಿಬ್ಬರ ಸ್ನೇಹ ಗಾಢವಾಗುತ್ತದೆ. ಸಹನಟ ಶಾರುಖ್ ದೀಪಿಕಾಳನ್ನು ಪ್ರೀತಿಸತೊಡಗುತ್ತಾನೆ.

ಒಂದು ದಿನ ನಿರ್ಮಾಪಕನ ಜೊತೆ ದೀಪಿಕಾಳಿಗೆ ಸಂಬಂಧ ಇದೆ, ಆಕೆ ಗರ್ಭಿಣಿ ಎಂದು ತಿಳಿದು



ಆಘಾತವಾಗುತ್ತದೆ. ಇತ್ತ ನಿರ್ಮಾಪಕ ದೀಪಿಕಾಳನ್ನು ಮದುವೆ ಆಗುವ ಬದಲು ಕೊಲ್ಲಲು ಸಂಚು ಹೂಡುತ್ತಾನೆ.

ತನ್ನ ಮಹತ್ವಾಕಾಂಕ್ಷೆ ಚಿತ್ರ 'ಓಂ ಶಾಂತಿ ಓಂ' ಬಳಿಕ ಮದುವೆ ಆಗುವುದಾಗಿ ಒಪ್ಪಿಸುವ ನಿರ್ಮಾಪಕ, ಆ ಚಿತ್ರದ ಸೆಟ್‌ನಲ್ಲೇ ದೀಪಿಕಾಳನ್ನು ಸುಟ್ಟು ಕೊಲೆ ಮಾಡುತ್ತಾನೆ.

ಈ ಸಂದರ್ಭದಲ್ಲಿ ರಕ್ಷಿಸಲು ಹೋಗುವ ಶಾರುಖ್ ಆಸ್ಪತ್ರೆ ಸೇರುತ್ತಾನೆ. ಅಲ್ಲಿ ಮೃತಪಟ್ಟು ರಾಜೇಶ್‌ಕಪೂರ್ ಎಂಬ ಜನಪ್ರಿಯ ನಟನ ಮಗನಾಗಿ ಜನಿಸುತ್ತಾನೆ. ಪುನರ್‌ಜನ್ಮ ಪಡೆದ ಬಳಿಕ ಜನಪ್ರಿಯ ನಟನಾಗಿ ಬೆಳೆದು ನಿರ್ಮಾಪಕನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ. ಇದಿಷ್ಟು ಚಿತ್ರದ ಸಾರಾಂಶ.

ಪುನರ್‌ಜನ್ಮದ ಕಥೆ ಇರುವ ಹಲವು ಚಿತ್ರಗಳು ವಿವಿಧ ಭಾಷೆಗಳಲ್ಲಿ ಬಂದಿದೆ. ಅವುಗಳ ಪಟ್ಟಿಗೆ ಇದೊಂದು ಹೊಸ ಸೇರ್ಪಡೆ.

ಆದರೆ, ಈ ಚಿತ್ರ ಹಳೇ ಚಿತ್ರಗಳ ಬಗ್ಗೆ ಲೋಕಕ್ಕೆ ಕೊಂಡೊಯ್ಯುತ್ತಿದೆ. ಜೊತೆಗೆ ಚಿತ್ರರಂಗದಲ್ಲಿರುವ ಹುಳುಕುಗಳನ್ನು ಪರಿಚಯಿಸುತ್ತದೆ. ನಟಿಯರನ್ನು ನಿರ್ಮಾಪಕರು ಬಳಸುವ ರೀತಿ, ಅವರನ್ನು ಬಲಿಪಶು ಮಾಡುವ ಪರಿಯನ್ನು ಬಿಚ್ಚಿಡಲಾಗಿದೆ. ದಶಕಗಳ ಹಿಂದಿನ ಶೂಟಿಂಗ್ ಹೇಗಿತ್ತು ಎಂಬ ಕಲ್ಪನೆಯನ್ನು ನೀಡಲಾಗಿದೆ.

ಪುನರ್‌ಜನ್ಮ ಕುರಿತಂತೆ ಈಗಾಗ[...] ಹಲವು ಚಿತ್ರಗಳು ತೆರೆ ಕಂಡಿವೆ. ಕೆಲ[...] ಯಶಸ್ಸುಗಳಿಸಿವೆ ಅಂತಹ ಕೆಲ ಚಿತ್ರಗಳ ಪ[...] ಹೀಗಿದೆ.

ಹಿಂದಿ: ಕರಣ್ ಅರ್ಜುನ್, ಕರ್ಜ್, ಕ[...] ಕಾಟೇಜ್, ದಿವ್ಯಶಕ್ತಿ

ಕನ್ನಡ: ಸಂಯುಕ್ತ, ಯುಗಪುರು[...] ಬಂಗಾರದ ಜಿಂಕೆ, ರಾಜನನ್ನರಾ[...] ಕುದುರೆಮುಖ, ದುರ್ಗಾಶಕ್ತಿ, ಜನ್ಮಜನ[...] ಅನುಬಂಧ.

ಮನೋಜ್‌ಕುಮಾರ್‌ಗೆ ಈ ಚಿತ್ರ[...] ಅಣಕಿಸಲಾಗಿದೆ ಎಂಬ ಆರೋಪ ಇತ್ತು. ಈ[...] ಶಾರುಖ್ ಕ್ಷಮೆ ಕೇಳಿದ್ದು, ಆ ಚಿತ್ರದ ತುಣು[...] ತೆಗೆಯುವುದಾಗಿ ನಿರ್ದೇಶಕಿ ಫರ್‍ಹಾಖಾನ್ ಹೇ[...] ವಿವಾದ ಸುಖಾಂತ್ಯಗೊಂಡಿತು.

ಚಿತ್ರರಂಗದ ಹುಳುಕುಗಳನ್ನು ಹೊರಗೆಳೆ[...] ಅಥವಾ ಮನರಂಜನೆ ಎಂಬುದಕ್ಕೆ [...] ಪುನರ್‌ಜನ್ಮದಂತಹ ಹಳಸಲು ಮೂಢನಂ[...] ಜೋತು ಬೀಳಬೇಕೆ ಎಂಬುದೇ ಈ ಚಿತ್ರ[...] ಎದುರಾಗಿರುವ ದೊಡ್ಡ ಪ್ರಶ್ನೆ.

ಶಬರಿ ಹಬ್ಬದ ಅಪರೂಪ ಸವಿ

ನಿಜಕ್ಕೂ ಅದೊಂದು ಸಡಗರದ ಹಬ್ಬ. ಗೋಡೆ ಮೇಲಿನ ಚಿತ್ರಗಳು, ನಾಟಕದ ಪಾತ್ರಗಳು, ಚಿಂತಕರ ಚರ್ಚೆಗಳು, ವಿದ್ವಾಂಸರ ವಿಚಾರಗಳು, ಸಂವಾದಕರ ವಾದಗಳು, ಪ್ರೇಕ್ಷಕರ ವೀಕ್ಷಣೆಗಳು ಏಕಕಾಲಕ್ಕೆ ಒಂದೆಡೆ ಸೇರಿ ಸಂಭ್ರವಿಸಿದವು. ಅದುವೇ ಪ್ರೊ: ಬರಗೂರು ರಾಮಚಂದ್ರಪ್ಪ ಅವರ 'ಶಬರಿ' ಕಾದಂಬರಿ ಆಧಾರಿತ ಸಾಂಸ್ಕೃತಿಕ ಹಬ್ಬ.

ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿ ಸಂಘಟಿಸಿದ ಈ 'ಶಬರಿ ಹಬ್ಬ' ಅಲ್ಲಿನ ಲಲಿತಾಕಲಾ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಜರುಗಿತು. ಓರ್ವ ಕನ್ನಡದ ಸಾಹಿತಿಯ ಕಾದಂಬರಿಯನ್ನು ಆಧರಿಸಿದಂತೆ ವಿವಿಧ ನೆಲೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಅರ್ಥೈಸಿ, ಪ್ರದರ್ಶಿಸಿದ್ದು ಇದೇ ಮೊದಲು. ಹೀಗಾಗಿ ಕನ್ನಡದ ಕಾದಂಬರಿ ವಲಯದಲ್ಲಿ 'ಶಬರಿ'ಗೆ ಸಂದ ಈ ರೀತಿಯ ಹಬ್ಬ ಹೊಸದು ಮತ್ತು ವಿಶಿಷ್ಟವಾದುದು.

ಅಂದು ಬೆಳಿಗ್ಗೆ ಸಮಾರಂಭವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ, ಸಂಸ್ಕೃತಿ ಚಿಂತಕ ಪ್ರೊ: ಬರಗೂರು ರಾಮಚಂದ್ರಪ್ಪ ಅವರು 'ಪೌರಾಣಿಕ' ಶಬರಿಯ ಕಾಯುವಿಕೆಯನ್ನು ಇಂದಿನ ಹೋರಾಟದ ಕುದಿಯುವಿಕೆಯಲ್ಲಿ ವಾಸ್ತವಿಕಗೊಳಿಸಿದ ಬಗ್ಗೆ ಪ್ರಸ್ತಾಪಿಸಿದರು. ಜೊತೆಗೆ, ಕಾದಂಬರಿಯೊಳಗಿನ ಚಂದ್ರ ಸೂರ್ಯರ ಸಾವಿನೊಂದಿಗೆ ಶವವಾಗದೇ ಹೊಸ ಸೂರ್ಯನ ಬರುವಿಕೆಗಾಗಿ ಹೋರಾಟ ರೂಪಿಸುವ ಶಬರಿಯಲ್ಲಿ ಸಮಕಾಲೀನ ಜನಪರ ಚಳುವಳಿಗಳನ್ನು ಚಿತ್ರಿಸಿದ ಬಗ್ಗೆ ಹೇಳಿದರು. ಈ ಕುರಿತಂತೆ ಸಂಕಿರಣದಲ್ಲಿ ಪಾಲ್ಗೊಂಡು ಪ್ರತಿಕ್ರಿಯಿಸಿದ ವಿವಿಧ ವಿದ್ವಾಂಸರು ಬುಡಕಟ್ಟು ಸಮುದಾಯದ ಹಿನ್ನೆಲೆಯಲ್ಲಿ ಸಂವೇದನೆಗಳನ್ನು, ಜನಪರ ಚಳವಳಿಯ ಆಯಾಮಗಳನ್ನು ವಿಶ್ಲೇಷಿಸಿದ್ದು ಅರ್ಥಪೂರ್ಣವಾಗಿತ್ತು.

ನಂತರ ವಿದ್ಯಾರ್ಥಿಗಳು ಮತ್ತು ಸಭಿಕರ ನಡುವೆ ಸಂವಾದ ಕಾರ್ಯಕ್ರಮ ನಡೆಯಿತು. ಸಂವಾದದಲ್ಲಿ ಪಾಲ್ಗೊಂಡಿದ್ದ ಬರಗೂರು ಅವರು ಶಬರಿ ಕಾದಂಬರಿಯ ಸಾಧ್ಯತೆಗಳನ್ನು ಒಂದೊಂದಾಗಿ ಅನಾವರಣ ಮಾಡಿದರು. ಶಾಂತಿ, ಸಮತೆ, ಸಾಕ್ಷರತೆ, ಸಹಬಾಳ್ವೆಗಾಗಿ ನಡೆಯುವ ಸೂರ್ಯಚಂದ್ರರ ಸಂಘಟನೆಯ ಸೂತ್ರಗಳು ಬುಡಕಟ್ಟಿನಲ್ಲಿಯೂ ಪ್ರವೇಶಿಸಿ, ಬಯಕೆಯನ್ನು ಹುಟ್ಟಿಸಿ, ಬಾಂಧವ್ಯವನ್ನು ಬೆಳೆಸಿ, ಸಂಘರ್ಷದಲ್ಲಿ ಬೆಸೆದುಕೊಳ್ಳುವುದರ ಬಗ್ಗೆ ವಿವರಿಸಿದರು.

'ಶಬರಿ ಹಬ್ಬ'ದ ಇನ್ನೊಂದು ವಿಶೇಷವೆಂದರೆ ಶಬರಿ ಕಾದಂಬರಿಯನ್ನು ರಂಗರೂಪಕ್ಕೆ ಅಳವಡಿಸಿ ಪ್ರದರ್ಶಿಸಿದ್ದು, ಹೆಗ್ಗೆರೆ ರಂಗಪ್ಪ, ಲೋಕಿಕೆರೆ ಅಂಜನಪ್ಪ, ಪ್ರಸನ್ನಕುಮಾರ್ ಮತ್ತಿತರ ನಿರ್ದೇಶನದಲ್ಲಿ ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಟ್ಟ ಶಬರಿ ನಾಟಕ ನೆರೆದ ನೂರಾರು ಪ್ರೇಕ್ಷಕರ ಮನಸೆಳೆಯಿತು. ಕಾಲೇಜಿನ ವಿದ್ಯಾರ್ಥಿಗಳೇ ನಾಟಕದ ಪಾತ್ರಧಾರಿಗಳು. ಶಬರಿ, ಹುಚ್ಚೀರ, ಸೂರ್ಯ ಮತ್ತು ಇನ್ನಿತರ ಪಾತ್ರಧಾರಿಗಳ ಅಭಿನಯ ಅದ್ಭುತವಾಗಿತ್ತು. ಇದಕ್ಕೆ ಹಿನ್ನೆಲೆಯಾಗಿ ಮೂಡಿಬಂದ ಕಾದಂಬರಿಯೊಳಗಿನ ಪದ್ಯದ ಹಾಡುಗಾರಿಕೆ ರಂಗದ ಯಶಸ್ವಿಗೆ ಪೂರಕ ಸಾಥಿ ನೀಡಿತು.

ಇದರ ಜೊತೆಗೆ ಲಲಿತಾಕಲಾ ಮಹಾವಿದ್ಯಾಲಯದ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ರಚಿಸಿದ ಶಬರಿ ಕಾದಂಬರಿಯೊಳಗಿನ ವಿವಿಧ ದೃಶ್ಯಾವಳಿಗಳು ಸಭಾಂಗಣದ ಗೋಡೆಯ ತುಂಬಾ ಭಿತ್ತರಿಸಲ್ಪಟ್ಟಿದ್ದವು. ಶಬರಿಯ ತೀವ್ರತೆಗಳು, ಸೂರ್ಯನ ಹೋರಾಟಗಳು, ಭೂಮಾಲೀಕರ ಆರ್ಭಟಗಳು, ಹುಚ್ಚೀರನ ಮೌನ ಚಿತ್ರಕಲೆಯಲ್ಲಿ ಮಾತಾಡುತ್ತಿದ್ದವು. ಏಕಕಾಲಕ್ಕೆ ಇವುಗಳನ್ನು ನೋಡುವ, ಹಾಡುಗಳನ್ನು ಕೇಳುವ, ವಾದಗಳನ್ನು ಆಲಿಸುವ, ನಾಟಕವನ್ನು ಸವಿಯುವ ಅಪರೂಪದ ಸಂದರ್ಭ ಶಬರಿಯ ಹಬ್ಬದಲ್ಲಿ ಸಂಭ್ರಮಿಸಿತ್ತು. ಈ ಸಂಭ್ರಮಕ್ಕೆ ಕಾರಣವಾದ ಕಾಲೇಜಿನ ಪ್ರೊ: ಸಿ.ಕೆ.ಮಹೇಶ, ಡಾ: ಮಲ್ಲಿಕಾರ್ಜುನ ಹಾಗೂ [...] ಅಧ್ಯಾಪಕ-ವಿದ್ಯಾರ್ಥಿ ಬಳಗದ ಸಾರ್ಥಕ [...] ಅಭಿನಂದನಾರ್ಹವಾದುದು. ಸಾ[...] ಕೃತಿಯೊಂದನ್ನು ಹೀಗೆ ಹಬ್ಬದೋಪಾದಿ[...] ಅರ್ಥೈಸಿ, ಪ್ರದರ್ಶಿಸಿ, ಸಂಭ್ರಮಿಸುವ ಅ[...] ಕನ್ನಡದ ಎಲ್ಲಾ ಉತ್ತಮ ಕೃತಿಗಳಿಗೂ ಸಿಗಲೆಂ[...] ಸಹೃದಯ ಓದುಗನ ಆಶಯ.

■ ಡಾ: ರಂಗರಾಜ ವನದು[...]

ಬಾ ಗೆಳೆಯಾ....



ಸಾಲಿ ತಪ್ಪಿಸಿ
ಮಸೀದಿಯಂಗಳದಲ್ಲಿ
ಆಡಿದ ಗೋಲಿಗುಂಡಿನಾಟ,
ಅಪ್ಪನ ಕಣ್ತಪ್ಪಿಸಿ,
ಗುಡಿಯಂಗಳದಲ್ಲಿ
ಆಡಿದ ಚಿಂಡಿನಾಟ

ಏಸುವಿನಂಗಳದ
ಮರಗಳಲ್ಲಿ
ಆಡಿದ ಕೋತಿಯಾಟ
ಮರೆಯಲಿ ಹೇಗೆ ಗೆಳೆಯಾ...?
ಆ ದಿನಗಳ....?

ಗೋಲಿ ತುಂಬಿದ
ಚೆಡ್ಡಿ ಜೇಬಿಗೆ
ಗುಂಡು ತುಂಬಿದವರಾರೆಂದು
ಹೇಗೆ ಹೇಳಲಿ ಗೆಳೆಯಾ?
ಗೋಲಿ-ಬುಗರಿ
ಕಬಡ್ಡಿ-ಲಗೋರಿ
ಆಡಿದ ಕೈಗಳಿಗೆ
ರಕ್ತ ಒರೆಸಿದವರಾರೆಂದು....

ಹೇಗೆ ಹೇಳಲಿ ಗೆಳೆಯಾ
ಯಾರದೋ ರಕ್ತ
ನನ್ನ ಹಣೆಗೆ
ತಿಲಕವಾಗಿದ್ದೇಗೆಂದು....?

ಕ್ಷಮಿಸಲಾರೆ ಗೆಳೆಯಾ
ದೀಪಾವಳಿ-ರಮ್‌ಜಾನ
ಕ್ರಿಸ್ಮಸ ಹಬ್ಬಗಳ ಕಸಿದವರನ್ನು
ಅಪ್ಪನ ಹೆಗಲ ಮೇಲೆ ಕುಳಿತು
ನೋಡಿದ ಜಾತ್ರೆಗಳ ಕೊಂದವರನ್ನು

ಬಾ ಗೆಳೆಯಾ....
ಗುಡಿ-ಮಸೀದಿ
ಏಸುವಿನಂಗಳಕೆ
ಹಾಕೋಣ
ಬೆಳದಿಂಗಳ ಚೆಲ್ಲಿ
ಮನುಕುಲದ ರಂಗವಲ್ಲಿ

- ಬಿ.ಶ್ರೀನಿವಾಸ[...]
ಹಾವೇರಿ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH